ಸಂಪುಟ: 06 ಸಂಚಿಕೆ: 191 ಪುಟಗಳು: 08 ಶನಿವಾರ 26 ಸೆಪ್ಟೆಂಬರ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

-ತಪ್ಪುಗಳನ್ನು ಮಾಡುತ್ತಿರುತ್ತೇವೆ ಎಂದು ಗೊತ್ತಿದ್ದೂ ನಮ್ಮೊಡನೆ ಪ್ರೀತಿಯಿಂದ ಇರಬಯಸುವವರನ್ನು ಗೌರವಿಸೋಣ, ಯಾರೂ ಪರಿಪೂರ್ಣರಲ್ಲವಲ್ಲ!

## ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಕುರಿತ ಅಂಶವನ್ನು ಬಜೆಟ್ ಪುಸ್ತಕದಿಂದ ಮಾಯ ಮಾಡಿದ್ದಾರೆ: ಬಿ.ಆರ್.ಪಾಟೀಲ್

• ಉದಯವಾಹಿನಿ, ಬೆಂಗಳೂರು

ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಕುರಿತ ಅಂಶವನ್ನು ಬಜೆಟ್ ಪುಸ್ತಕದಿಂದ ಮಾಯ ಮಾಡಿದ್ದಾರೆ: ಬಿ.ಆರ್.ಪಾಟೀಲ್ ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಕುರಿತ ಸಿದ್ದರಾಮಯ್ಯ ಬಜೆಟ್ ಪುಸ್ತಕದ ಅಂಶವನ್ನೇ ಮಾಯ ಮಾಡಿದ್ದಾರೆ ಎಂದು ಬಿ.ಆರ್.ಪಾಟೀಲ್ ತಮ್ಮ ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಬೆಂಗಳೂರಲ್ಲಿ ಮಾತನಾಡಿದ ಅವರು, ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಬಗ್ಗೆ ಹಿಂದೆ ಸಿದ್ದರಾಮಯ್ಯ ಗಮನಕ್ಕೆ ತಂದಿದ್ದೆ. ಕಳೆದ ಬಜೆಟ್‌ನಲ್ಲಿ ಪ್ರಕಟ ಮಾಡಲು ಸಿದ್ದರಾಮಯ್ಯ ನಿರ್ಧರಿಸಿದ್ದರು. ಬಜೆಟ್ ಪ್ರೂಫ್ ರೀಡಿಂಗ್‌ನಲ್ಲೂ ಕಾಯ್ದೆಗೆ ಬದಲಾವಣೆ ತರುತ್ತೇವೆ ಎಂದು ಇತ್ತು. ಕೊನೇ ಘಳಿಗೆಯಲ್ಲಿ ಬಜೆಟ್ ಕಾಪಿಯಲ್ಲೇ ಆ ವಿಚಾರ ಹೈಡ್ ಮಾಡಲಾಯ್ತು. ಯಾವ ಮಾಯಾಜಾಲದಿಂದ ಬಜೆಟ್ ಅಂಶವನ್ನೇ ಮಾಯ ಮಾಡಿದ್ರು ಎಂದು ಆರೋಪಿಸಿದ್ದಾರೆ.

ಇವತ್ತು ಸುರ್ಜೇವಾಲ ಕರೆದು ಯೋಜನಾ ಆಯೋಗದ ಉಪಾಧ್ಯಕ್ಷ ಸ್ಥಾನಕ್ಕೆ ನೀಡಿರುವ ರಾಜೀನಾಮೆ ವಾಪಸ್ ಪಡೆಯಿರಿ ಅಂದ್ರು. ನಾನು ಈ ವಿಚಾರ ಪ್ರಸ್ತಾಪಿಸಿ ಯಾಕೆ ಭರವಸೆ ಕೊಟ್ರಿ ಅಂದೆ. ಮೊದಲು ಪ್ರಣಾಳಿಕೆಯಲ್ಲಿ ಭರವಸೆ ಈಡೇರಿಸಿ ಅಂತ ಹೇಳಿದ್ದೇನೆ. ಈ ಸಂಬಂಧ ನಾನು ರಾಹುಲ್ ಗಾಂಧಿಗೂ ಪತ್ರ ಬರೆಯುತ್ತೇನೆ.

## ಹಣಕಾಸು ನಿರ್ವಹಣಾ ವೈಫಲ್ಯ ಮುಚ್ಚಿಕೊಳ್ಳಲು ಹಿಂದಿನ ಸರ್ಕಾರದ ಹೆಸರಿನಲ್ಲಿ ರಕ್ಷಣೆ: ಸಿಎಂಗೆ ಬೊಮ್ಮಾಯಿ ತಿರುಗೇಟು

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಸರ್ಕಾರದ ವೈಫಲ್ಯವನ್ನು ಮುಚ್ಚಿಕೊಳ್ಳಲು ಹಿಂದಿನ ಸರ್ಕಾರದ ಹೆಸರಿನಲ್ಲಿ ರಕ್ಷಣೆ ಪಡೆಯುವ ಪ್ರಯತ್ನ ಮಾಡಿದ್ದಾರೆ. ಹಣಕಾಸು ಇಲಾಖೆ ನಿಮ್ಮ ಖರ್ಚು, ವೆಚ್ಚಗಳು ಅತಿ ಹೆಚ್ಚಾಗಿದ್ದರಿಂದ ಯಾವುದೇ ಹೊಸ ಕಾರ್ಯಕ್ರಮಕ್ಕೆ ಅವಕಾಶ ಇಲ್ಲ ಎಂದು ಎಚ್ಚರಿಕೆ ಕೊಟ್ಟಿರುವುದು ನಿಮ್ಮ ಸರ್ಕಾರದ ಹಣಕಸು ನಿರ್ವಹಣೆ ಸಂಪೂರ್ಣ ವಿಫಲವಾಗಿರುವುದನ್ನು ತೋರಿಸುತ್ತದೆ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದ್ದಾರೆ.ಎಕ್ಸ್ ಪೋಸ್ಟ್ ಮಾಡಿರುವ ಅವರು, ಹದಗೆಟ್ಟ ಆರ್ಥಿಕ ಸ್ಥಿತಿಯನ್ನು ಸರಿ ಮಾಡುವ ರಾಜಕೀಯ ಇಚ್ಛಾಶಕ್ತಿ ಕಾಣಿಸದಿರುವುದು ಕರ್ನಾಟಕ ರಾಜ್ಯದ ದುರ್ದೈವ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಿನ್ನೆ ವಿಧಾನಸಭೆಯಲ್ಲಿ ಆರ್ಥಿಕ ಇಲಾಖೆಯ ಟಿಪ್ಪಣಿ ಅವರ ಸರ್ಕಾರದ ಆರ್ಥಿಕ ದುಃಸ್ಥಿತಿಯ ನಗ್ನ ಸತ್ಯವನ್ನು ಬಿಚ್ಚಿಟ್ಟಿರುವ ಸಂದರ್ಭದಲ್ಲಿ ಅವರು ಈ ಹಿಂದಿನ ಸನ್ಮಾನ್ಯ ಯಡಿಯೂರಪ್ಪ ಮತ್ತು ಬೊಮ್ಮಾಯಿ ಅವರ ಸರ್ಕಾರದಲ್ಲೂ ಕೂಡ ಈ ಥರ ಟಿಪ್ಪಣಿ ಬಂದಿದೆ ಎಂದು ಹೇಳಿ ತಮ್ಮನ್ನು ರಕ್ಷಣೆ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆರ್ಥಿಕ ಚಟುವಟಿಕೆ ಸಂಪೂರ್ಣ ಸ್ಥಗಿತಗೊಳ್ಳುವ ಸಂದರ್ಭದಲ್ಲಿ ಆರ್ಥಿಕ ಶಿಸ್ತು ಕಾಯ್ದುಕೊಳ್ಳುವ ಅನಿವಾರ್ಯತೆ ಇದ್ದುದನ್ನು ನೆನಪಿಸಲು ಪ್ರಯತ್ನಿಸುತ್ತೇನೆ.

## ಎಸ್‌ಐಆರ್ ಕರ್ತವ್ಯದಿಂದ ಶಿಕ್ಷಕರನ್ನು ಮುಕ್ತಗೊಳಿಸಿ, ಚುನಾವಣಾ ಆಯೋಗಕ್ಕೆ ಮಾನವೀಯತೆಯೇ ಇಲ್ಲ: ಮಧು ಬಂಗಾರಪ್ಪ

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯಕ್ಕೆ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಶಿಕ್ಷಕರನ್ನು ನಿಯೋಜಿಸಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ತೀವ್ರ ತೊಂದರೆಯಾಗುತ್ತಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಒತ್ತಾಯಿಸಿದ್ದಾರೆ.

ಬೆಂಗಳೂರಿನ ಗೃಹ ಕಚೇರಿಯಲ್ಲಿ ಮಾತನಾಡಿದ ಅವರು, ನಮ್ಮ ಶಿಕ್ಷಕರನ್ನು ಎಸ್‌ಐಆರ್ ಪ್ರಕ್ರಿಯೆಯಿಂದ ಹೊರಗಿಡಿ. ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತಿದೆ ಎಂದು ಚುನಾವಣೆ ಆಯೋಗಕ್ಕೆ ಪತ್ರ ಬರೆದಿದ್ದರೂ ಯಾವುದೇ ಸ್ಪಂದನೆ ದೊರೆತಿಲ್ಲ. ಎಸ್‌ಐಆರ್ ಕಾರ್ಯದ ಹೊರೆಯಿಂದಾಗಿ ಶಿಕ್ಷಕರು ಬಳಲಿದ್ದಾರೆ. ಈ ಕಾರ್ಯ ವಿಳಂಬವಾಗುತ್ತಲೇ ಇದ್ದು, ಶಾಲೆಗಳಲ್ಲಿ ಸರಿಯಾಗಿ ಶೈಕ್ಷಣಿಕ ಚಟುವಟಿಕೆಗಳು ನಡೆಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಕ್ಕಳ ಫಲಿತಾಂಶದ ಮೇಲೂ ಪರಿಣಾಮ ಬೀರುವ ಆತಂಕವಿದೆ.

## ನಕಲಿ ಔಷಧಿ ಜಾಲದಲ್ಲಿ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು

• ಉದಯವಾಹಿನಿ, ಬೆಂಗಳೂರು

ನಕಲಿ ಔಷಧಿ ಜಾಲದಲ್ಲಿ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು ಸಿಲುಕಿವೆ. ಸ್ವತಃ ಆರೋಗ್ಯ ಸಚಿವರೇ ಆತಂಕಕಾರಿ ವಿಚಾರವನ್ನ ಬಿಚ್ಚಿಟ್ಟಿದ್ದಾರೆ. ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು, ಮೆಡಿಕಲ್ ಸ್ಟೋರ್‌ಗಳಿಗೆ ಔಷಧಿ ಸಪ್ಲೈ ಆಗಿವೆ ಎಂದು ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ. ಶೀಘ್ರದಲ್ಲೇ ಅವುಗಳ ಪಟ್ಟಿ ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ. ಜೊತೆಗೆ ಫೈಜರ್ ಕಂಪನಿ ವಿರುದ್ಧ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ನಕಲಿ ಔಷಧಿ ಜಾಲ ಬಗೆದಷ್ಟು ಬಯಲಾಗುತ್ತಿದೆ. ನಕಲಿ ಔಷಧಿ ಜಾಲದಲ್ಲಿ ತೊಡಗಿದ್ದ 24 ಔಷಧ ಸಂಸ್ಥೆಗಳ ವಿರುದ್ಧ ಕ್ರಮ ಆಗಿದೆ. ಈಗ ಇದು ಸ್ಯಾಂಪಲ್ ಅಷ್ಟೇ. ನಕಲಿ ಔಷಧಿ ಜಾಲದಲ್ಲಿ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು ತೊಡಗಿವೆ ಎನ್ನುವುದು ಬಯಲಾಗಿದೆ. ಎಸ್‌ಐಟಿ ತನಿಖೆ ಆಗುತ್ತಿದ್ದು, ಶೀಘ್ರದಲ್ಲೇ ಲಿಸ್ಟ್ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ ಸಚಿವರು. ಫೈಜರ್ ಕಂಪನಿ ವಿರುದ್ಧ ಕ್ರಮ ವಹಿಸುವುದಕ್ಕೆ ಸರ್ಕಾರ ಮುಂದಾಗಿದೆ. ಈಗಾಗಲೇ ಫೈಜರ್ ಕಂಪನಿಯ ಲೆಸನ್ಸ್ ಅಮಾನತು ಮಾಡಲಾಗಿದೆ.

# ಪೌರಕಾರ್ಮಿಕರು ನಿರಾಳ ಭತ್ಯೆ ಹೆಚ್ಚಳ

● ಉಪಹಾರ ಭತ್ಯೆ 35 ರಿಂದ 70 ರೂ.ಗೆ ಏರಿಸಿ ಶೀಘ್ರವೇ ಆದೇಶ ● ಸಿಎಂ ಘೋಷಣೆ ● ಪೌರ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಸಚಿವ ಸಂಪುಟ ಉಪ ಸಮಿತಿ ರಚನೆ ● ಪೌರಕಾರ್ಮಿಕ ಯುನಿಫಾರ್ಮ್ ಧರಿಸಿದ ಸಿಎಂ ಡಿಕೆ ಶಿವಕುಮಾರ್! ● ಇದರ ಹಿಂದಿದೆ ಕಾರ್ಮಿಕ ಮಹಿಳೆಯೊಬ್ಬರ ಕಣ್ಣೀರು, ಕೀಳರಿಮೆ

> ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬ ಕಾರಣಕ್ಕೆ ನಾವು ಪ್ರಜಾಸೇವೆ ಇಲಾಖೆ ಆರಂಭಿಸಿದ್ದೇವೆ. ಯೋಗಕ್ಷೇಮ, ಕಲ್ಯಾಣ ನಿಧಿ ವಿಚಾರದಲ್ಲಿ ನಾನು ಗಮನಹರಿಸಬೇಕಾಗಿದ್ದು, ಇದಕ್ಕಾಗಿ ಸಮಾಜಕಲ್ಯಾಣ, ನಗರಾಭಿವೃದ್ಧಿ ಇಲಾಖೆ ಸೇರಿದಂತೆ ಬಸವಂತಪ್ಪನವರನ್ನು ಒಳಗೊಂಡಂತೆ ಸಂಪುಟ ಉಪಸಮಿತಿ ರಚಿಸಿ, ಆರ್ಥಿಕ ಇಲಾಖೆ ವಿಶ್ವಾಸ ಪಡೆದು ತೀರ್ಮಾನ ಮಾಡಲಾಗುವುದು ಎಂದು ಹೇಳಿದರು.



• ಉದಯವಾಹಿನಿ, ಬೆಂಗಳೂರು

ಶ್ರಮದಲ್ಲೇ ಶಿವನನ್ನು ಕಾಣುವ ನಿತ್ಯ ನೈರ್ಮಲ್ಯಗಾರರು ಪೌರಕಾರ್ಮಿಕರು. ಇವರು ನಿಜವಾದ ಕರ್ಮಯೋಗಿ, ಕಾಯಕಜೀವಿಗಳು, ಸ್ವಚ್ಛತೆ ಕ್ರಾಂತಿಯ ಸರದಾರರು. ಪೌರಕಾರ್ಮಿಕರ ಭತ್ಯೆ ಏರಿಕೆ, ಉಪಹಾರ ಭತ್ಯೆಯನ್ನು 35 ರಿಂದ 70 ರೂ.ಗೆ ಏರಿಕೆ ಮಾಡಿ ಸಧ್ಯದಲ್ಲೇ ಆದೇಶ ಹೊರಡಿಸಲಾಗುವುದು ಎಂದು ಸಿಎಂ ಡಿ.ಕೆ.ಶಿವಕುಮಾರ್ ಘೋಷಿಸಿದರು. ಬೆಂಗಳೂರಿನ ಅರಮನೆ ಮೈದಾನದಲ್ಲಿ ಶುಕ್ರವಾರ ನಡೆದ ಪೌರಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ನಿಮ್ಮೆಲ್ಲರ ಬದುಕಿನಲ್ಲಿ ನೀವು ಯಾವತ್ತಿಗೂ ಕೀಳರಿಮೆಯಿಂದ ಮಾನಸಿಕವಾಗಿ ಕುಗ್ಗಬಾರದು. ನೀವು ದೇಶಸೇವೆ ಮಾಡುತ್ತಿರುವುದಾಗಿ ಸ್ವಾಭಿಮಾನದಿಂದ ಬದುಕಿ. ಪೌರಕಾರ್ಮಿಕರಿಲ್ಲದೇ ನಾವು ಆರೋಗ್ಯವಾಗಿರಲು ಸಾಧ್ಯವಿಲ್ಲ. ನಮ್ಮ ಸರ್ಕಾರ ಬಂದ ನಂತರ ಏನೇ ಒತ್ತಡವಿದ್ದರೂ ಸಾವಿರಾರು ಜನ ಪೌರಕಾರ್ಮಿಕರನ್ನು ಖಾಯಂ ಮಾಡಿದ್ದು, ಉಳಿದವರನ್ನು ಖಾಯಂ ಮಾಡಲಾಗುವುದು. ಬಿಡ್ಲ್ಯೂಎಸ್ ಎಸ್‌ಬಿ, ನೀರು ಸರಬರಾಜು ಇಲಾಖೆಗಳಲ್ಲಿ ಖಾಯಂ ಆಗಿ ಸ್ವಾಭಿಮಾನದ ಬದುಕು ನೀಡಲು ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

ನಿಮ್ಮ ಸಂಘಟನೆಯಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಹೇಳುವಂತೆ ನಾನು ಬಸವಂತಪ್ಪನವರಿಗೆ ಹೇಳಿದೆ. ನಿಮ್ಮ ಅಧ್ಯಕ್ಷರುಗಳೇ ನಿಮ್ಮ ಕೆಲಸ ಖಾಯಂ ಮಾಡಲು ಅಡ್ಡಿಪಡಿಸುತ್ತಿದ್ದಾರೆ ಎಂಬ ಅಂಶವನ್ನು ನನ್ನ ಗಮನಕ್ಕೆ ತಂದರು. ಈ ವಿಚಾರವನ್ನು ಜನರ ಮುಂದೆಯೇ ಪ್ರಸ್ತಾಪಿಸಿ ಎಂದು ನಾನು ಸೂಚಿಸಿದೆ. ಕಾರಣ ನೀವು ಜಾಗ್ರತರಾಗಬೇಕು. ನಾನು ಇಲ್ಲಿಂದಲೇ ಅಧಿಕಾರಿಗಳಿಗೆ ಆದೇಶ ನೀಡುತ್ತಿದ್ದೇನೆ ಎಂದು ಆತ್ಮಸ್ಥೈರ್ಯ ತುಂಬಿದರು. ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬ ಕಾರಣಕ್ಕೆ ನಾವು ಪ್ರಜಾಸೇವೆ ಇಲಾಖೆ ಆರಂಭಿಸಿದ್ದೇವೆ. ಯಾವ ಸಂಘಟನೆಯ ಮಧ್ಯವರ್ತಿಗಳು ಅಗತ್ಯವಿಲ್ಲ. ನಿಮ್ಮ ಸಮಸ್ಯೆಗಳನ್ನು ಬಾಲಕೃಷ್ಣ, ಯತೀಂದ್ರ, ಮುನಿಯಪ್ಪನವರು ಹಾಗೂ ಬಸವಂತಪ್ಪನವರು ತಿಳಿಸಿದ್ದಾರೆ. ನಿಮ್ಮ ಮಂಡಳಿ, ಯೋಗಕ್ಷೇಮ, ಕಲ್ಯಾಣ ನಿಧಿ ವಿಚಾರದಲ್ಲಿ ನಾನು ಗಮನಹರಿಸಬೇಕಾಗಿದ್ದು, ಇದಕ್ಕಾಗಿ ಸಮಾಜಕಲ್ಯಾಣ, ನಗರಾಭಿವೃದ್ಧಿ ಇಲಾಖೆ ಸೇರಿದಂತೆ ಬಸವಂತಪ್ಪನವರನ್ನು ಒಳಗೊಂಡಂತೆ ಸಂಪುಟ ಉಪಸಮಿತಿ ರಚಿಸಿ, ಆರ್ಥಿಕ ಇಲಾಖೆ ವಿಶ್ವಾಸ ಪಡೆದು ತೀರ್ಮಾನ ಮಾಡಲಾಗುವುದು ಎಂದು ಸಿಎಂ ಹೇಳಿದರು. ಪ್ರತಿನಿತ್ಯ ನಿಮಗೆ ನೀಡುವ ಜವಾಬ್ದಾರಿಯಲ್ಲಿ ಶೇ60ರಷ್ಟು ಜನ ಪ್ರಾಮಾಣಿಕವಾಗಿ ಮಾಡುತ್ತೀರಿ. ಉಳಿದಷ್ಟು ಜನ ಮೈಗಳ್ಳರು, ಮಹಿಳೆಯರ ಮೇಲೆ ದರ್ಪ ತೋರುವವರು ನಿಮ್ಮಲ್ಲೇ ಇದ್ದಾರೆ. ಇದರ ಬಗ್ಗೆ ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಲಾಗುವುದು. ನೀವುಗಳು ಇಲ್ಲದಿದ್ದರೆ ನಗರ ತಿಪ್ಪೆಗುಂಡಿಯಾಗುತ್ತದೆ ಎಂಬ ಅರಿವಿದೆ. ನೀವಿದ್ದರೆ ರಸ್ತೆ, ನಗರ ಎಲ್ಲವೂ ಸುಂದರ. ಹೀಗಾಗಿ ನಿಮ್ಮನ್ನು ಸ್ವಚ್ಛತೆಯ ರಾಯಭಾರಿಗಳು ಎಂದು ಗೌರವಯುತವಾಗಿ ಕಾಣುತ್ತಿದೆ. ನಿಮ್ಮ ಆರೋಗ್ಯಕ್ಕೆ ಗ್ಯಾರಂಟಿ ನೀಡುವುದು ನಮ್ಮ ಬದ್ಧತೆಯಾಗಿದೆ. ಸಮಾಜ ನಿಮ್ಮ ಮೇಲೆ ಅವಲಂಬಿತವಾಗಿದೆ. ನಿಮ್ಮ ಕೆಲಸ ದೇವರ ಸೇವೆಗೆ ಸಮಾನ ಎಂದು ಅಧಿಕಾರಿಗಳು ಹಾಗೂ ಸಾಮಾನ್ಯ ಜನ ಕಾಣುವಂತಾಗಬೇಕು ಎಂದು ತಿಳಿಸಿದರು.

**1** ಪೌರಕಾರ್ಮಿಕ ದಿನಾಚರಣೆಯಲ್ಲಿ ಡಿಕೆ ಶಿವಕುಮಾರ್ ಅವರು ಸ್ವತಃ ಪೌರಕಾರ್ಮಿಕರ ಸಮವಸ್ತ್ರ ಧರಿಸಿದ್ದರು.

**2** ಮಹಿಳಾ ಕಾರ್ಮಿಕರೊಬ್ಬರಿಗಾದ ಅವಮಾನಕ್ಕೆ ಸ್ವತಃ ಸಿಎಂ ಸಮವಸ್ತ್ರ ಧರಿಸಿ ಸ್ಪಂದನೆ.

**3** ಪೌರಕಾರ್ಮಿಕರ ಭತ್ಯೆ ಏರಿಕೆ, ಮಕ್ಕಳಿಗೆ ವಸತಿ ಶಾಲೆ ಭರವಸೆ ನೀಡಿದ ಸಿಎಂ

**ಪೌರ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಸಚಿವ ಸಂಪುಟ ಉಪ ಸಮಿತಿ ರಚನೆ**

**ಉಪಹಾರ ಭತ್ಯೆಯನ್ನು 35ರಿಂದ 70 ರೂ.ಗ ಏರಿಸಿ ಶೀಘ್ರವೇ ಆದೇಶ: ಸಿಎಂ ಡಿ ಕೆ ಶಿವಕುಮಾರ್**

**ಡಿಕೆಶಿ ಭರವಸೆ**



### ಕಾಂಗ್ರೆಸ್ ಸರ್ಕಾರ ಹಾಗೂ ಪೌರ ಕಾರ್ಮಿಕರ ನಡುವೆ ಭಕ್ತ-ಭಗವಂತನ ಸಂಬಂಧ

ನಿಮ್ಮ ಕೈಗೆ ಭದ್ರತೆ ನೀಡಬೇಕು. 2017ರಲ್ಲಿ ನಮ್ಮ ಸರ್ಕಾರ 10 ಸಾವಿರ ಪೌರ ಕಾರ್ಮಿಕರನ್ನು ನೇಮಕ ಮಾಡಲಾಗಿತ್ತು. 2023ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಅಧಿಕಾರಕ್ಕೆ ಬಂದ ನಂತರ 12,609 ಪೌರ ಕಾರ್ಮಿಕರನ್ನು ಖಾಯಂ ಮಾಡಿ ಇತಿಹಾಸವನ್ನು ನಿರ್ಮಿಸಿದೆ. ಒಂದು ರೂಪಾಯಿ ಭ್ರಷ್ಟಾಚಾರವಿಲ್ಲದೆ ಸರ್ಕಾರಿ ಕೆಲಸ ನೀಡಿದ್ದೇವೆ. ನಿಮಗೆ 40 ಸಾವಿರ ವೇತನ ನೀಡುವಂತೆ ಆದೇಶ ಮಾಡಿದೆವು. ಸ್ಥಳೀಯ ಸಂಸ್ಥೆಗಳಲ್ಲಿ 6 ಸಾವಿರ ಜನರನ್ನು ನೇಮಕ ಮಾಡಲಾಗಿದೆ. ಇನ್ನಷ್ಟು ನೇಮಕಾತಿ ಮಾಡಬೇಕು ಎಂದು ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು. ಪೌರ ಕಾರ್ಮಿಕರು ಹಾಗೂ ಸರ್ಕಾರದ ನಡುವೆ ಇರುವುದು ಭಕ್ತ ಹಾಗೂ ಭಗವಂತ ನಡುವಣ ಸಂಬಂಧ. ನಿಮ್ಮ ಮನೆ ನಿರ್ಮಾಣಕ್ಕೆ 7.50 ಲಕ್ಷ ನೀಡಲು ತೀರ್ಮಾನಿಸಿದ್ದೇವೆ ಎಂದರು.

### ಸರ್ವರಿಗೂ ಸಮಬಾಳು, ಸಮ ಪಾಲು ಎಂಬ ತತ್ವ ಪಾಲನೆ

ಇಡೀ ದೇಶಕ್ಕೆ ನಮ್ಮ ಸರ್ಕಾರ ಹೊಸ ಸಂದೇಶ ನೀಡಿದೆ. ನಿಮ್ಮ ಪೌರಕಾರ್ಮಿಕನ ಮಗನನ್ನು ಭಗವಂತನ ಸೇವೆ ಮಾಡುವ ಮುಜರಾಯಿ ಇಲಾಖೆ ಸಚಿವರನ್ನಾಗಿ ಮಾಡಿ ಸರ್ವರಿಗೂ ಸಮಬಾಳು, ಸಮ ಪಾಲು ಎಂಬ ತತ್ವವನ್ನು ಪಾಲಿಸಿದ್ದೇವೆ. ಒಂದು ಕಾಲದಲ್ಲಿ ದೇವಾಲಯದ ಒಳಗೆ ನಿರ್ಬಂಧ ಹೇರಲಾಗಿತ್ತು. ಅಂತಹ ತಾರತಮ್ಯ ನಿಲ್ಲಬೇಕು ಎಂದು ನಾನು ಪೌರಕಾರ್ಮಿಕನ ಮಗನಿಗೆ ಈ ಇಲಾಖೆ ಜವಾಬ್ದಾರಿ ನೀಡಲಾಗಿದೆ. ಅವರಿಗೆ ಗೌರವ ಹಾಗೂ ಶಕ್ತಿ ಬರಬೇಕು ಎಂದು ಮೀನುಗಾರಿಕೆ, ಬಂದರು ಸಚಿವಾಲಯವನ್ನು ನೀಡಲಾಗಿದೆ ಎಂದರು. ನಿಮ್ಮ ಕೈಗೆ ಭದ್ರತೆ ನೀಡಬೇಕು ಎಂದು 2017ರಲ್ಲಿ ನಮ್ಮ ಸರ್ಕಾರ 10 ಸಾವಿರ ಪೌರ ಕಾರ್ಮಿಕರನ್ನು ನೇಮಕ ಮಾಡಲಾಗಿತ್ತು. 2023ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಅಧಿಕಾರಕ್ಕೆ ಬಂದ ನಂತರ 12,609 ಪೌರ ಕಾರ್ಮಿಕರನ್ನು ಖಾಯಂ ಮಾಡಿ ಇತಿಹಾಸವನ್ನು ನಿರ್ಮಿಸಿದೆ. ಒಂದು ರೂಪಾಯಿ ಭ್ರಷ್ಟಾಚಾರವಿಲ್ಲದೇ ಸರ್ಕಾರಿ ಕೆಲಸ ನೀಡಿದ್ದೇವೆ. ನಿಮಗೆ 40 ಸಾವಿರ ವೇತನ ನೀಡುವಂತೆ ಆದೇಶ ಮಾಡಿದೆವು.

ಸ್ಥಳೀಯ ಸಂಸ್ಥೆಗಳಲ್ಲಿ 6 ಸಾವಿರ ಜನರನ್ನು ನೇಮಕ ಮಾಡಲಾಗಿದೆ. ಇನ್ನಷ್ಟು ನೇಮಕಾತಿ ಮಾಡಬೇಕು ಎಂದು ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು. ದೇವರಾಜ ಅರಸು ಅವರ ಕಾಲದಿಂದ ಪೌರ ಕಾರ್ಮಿಕರ ಬಗ್ಗೆ ಸರ್ಕಾರ ಚಿಂತನೆ ನಡೆಸಿದ್ದರೆ ಅದು ಕಾಂಗ್ರೆಸ್ ಸರ್ಕಾರ. ಪೌರ ಕಾರ್ಮಿಕರು ಹಾಗೂ ಸರ್ಕಾರದ ನಡುವೆ ಇರುವುದು ಭಕ್ತ ಹಾಗೂ ಭಗವಂತ ನಡುವಣ ಸಂಬಂಧ. ನಿಮ್ಮ ಮನೆ ನಿರ್ಮಾಣಕ್ಕೆ 7.50 ಲಕ್ಷ ರೂ. ನೀಡಲು ತೀರ್ಮಾನಿಸಿದ್ದೇವೆ ಎಂದರು.



### ಸಮವಸ್ತ್ರದ ಹಿಂದಿದೆ ಪೌರ ಕಾರ್ಮಿಕ ಮಹಿಳೆಗಾದ ಅವಮಾನ

ಪೌರಕಾರ್ಮಿಕೆಯೊಬ್ಬರ ಮಗಳು ಖಾಸಗಿ ಶಾಲೆಯಲ್ಲಿ ಓದುತ್ತಿದ್ದಳು. ಮಗಳನ್ನು ಶಾಲೆಗೆ ಬಿಡಲು ಪೌರಾಕಾರ್ಮಿಕೆ ಹೋದಾಗ ಮಗಳ ಸಹಪಾಠಿ, ನಿಮ್ಮಮ್ಮ ಕಾರ್ಪೋರೇಶನ್ ಯುನಿಫಾರ್ಮ್ ಹಾಕ್ಕೊಂಡು ಬಂದಿದ್ದಾರೆ, ವಾಸನೆ, ದೂರ ಕೂತ್ಕೋ, ನನ್ನ ಪಕ್ಕ ಬರಬೇಡ ಅಂತ ಹೀಯಾಳಿಸಿ ದೂರ ತಳ್ಳಿದಳಂತೆ! ಇದನ್ನು ನೆನೆದು ಅಮ್ಮ ಕಣ್ಣೀರು ಹಾಕಿದ ವಿಡಿಯೋ ನೋಡಿದ ಸಿಎಂ ಡಿ ಕೆ ಶಿವಕುಮಾರ್ ಅವರು, ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದ ಸ್ಟೇಜ್ ಮೇಲೆಯೇ ಪೌರಕಾರ್ಮಿಕರ ಯುನಿಫಾರ್ಮ್ ಧರಿಸಿಕೊಂಡರು ಎಂದು ಸಿಎಂ ಮಾಧ್ಯಮ ಅಧಿಕಾರಿಗಳು ತಿಳಿಸಿದ್ದಾರೆ.



### ಕೆಪಿಎಸ್ ಮಾದರಿಯಲ್ಲಿ ವಸತಿ ಶಾಲೆಗಳ ನಿರ್ಮಾಣ

ನಿಮ್ಮ ಮಕ್ಕಳಿಗಾಗಿ ನಗರ ಪ್ರದೇಶಗಳಲ್ಲಿ ಕೆಪಿಎಸ್ ಮಾದರಿಯ ವಸತಿ ಶಾಲೆಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಿದೆ. ನಿಮ್ಮ ಮಕ್ಕಳು ಓದಿ, ನಾಯಕರಾಗಿ ಬೆಳೆದು, ಹೊಸ ಉದ್ಯೋಗಗಳನ್ನು ಸೃಷ್ಟಿಸುವಂತಾಗಬೇಕು. ನಿಮ್ಮ ಮಕ್ಕಳು ಐಎಎಸ್ ಹಾಗೂ ಕೆಎಎಸ್ ಆಗಬೇಕು ಎಂಬುದು ನಮ್ಮ ಚಿಂತನೆ. ಈ ಸಂಬಂಧ ಸಚಿವರೊಂದಿಗೆ ಚರ್ಚೆ ಮಾಡಲಾಗುವುದು. ನಿಮಗಾಗಿ ಪ್ರತ್ಯೇಕ ಭವನ ನಿರ್ಮಾಣಕ್ಕೆ ಬೇಡಿಕೆ ಇಟ್ಟಿದ್ದು, ಇದನ್ನು ನಿರ್ಮಾಣ ಮಾಡುವ ಜಾಗ ನನ್ನ ತಲೆಯಲ್ಲಿದೆ. ಮುಂದಿನ ಎರಡು ತಿಂಗಳಲ್ಲಿ ಪೌರ ಭವನ ನಿರ್ಮಾಣ ಪ್ರಾರಂಭಿಸಲಾಗುವುದು. ಪ್ರತಿ ವರ್ಷ ಪೌರ ಕಾರ್ಮಿಕ ದಿನ ಕಾರ್ಯಕ್ರಮವನ್ನು ಸರ್ಕಾರದಿಂದ ನಡೆಸಲಾಗುವುದು ಎಂದು ತಿಳಿಸಿದರು. ಉಪಾಹಾರ, ಊಟವಷ್ಟೇ ನಮ್ಮ ಚಿಂತನೆಯಲ್ಲ.

ನಿಮ್ಮ ಬದುಕಿನ ಬಗ್ಗೆ ನಾವು ಆಲೋಚಿಸುತ್ತಿದ್ದೇವೆ. ಕೋವಿಡ್ ಸಮಯದಲ್ಲಿ ಕಾರ್ಮಿಕರಿಂದ ಮೂರು ಪಟ್ಟು ಬಸ್ ಟಿಕೆಟ್ ದರ ಪಡೆಯುವಾಗ ನಾವು ಕಾಂಗ್ರೆಸ್ ಪಕ್ಷದಿಂದ 1 ಕೋಟಿ ನೀಡಿ ಉಚಿತ ಪ್ರಯಾಣಕ್ಕೆ ಆಗ್ರಹಿಸಿದೆವು. ನಿಮ್ಮಲ್ಲಿ ಅನೇಕ ಆಟೋ ಚಾಲಕರು ಇದ್ದಾರೆ. ಮುಂದಿನ ವಾರ ಚಾಲಕರನ್ನು ಕರೆಸಿ ಸಮಸ್ಯೆ ಆಲಿಸಲಾಗುವುದು. ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ಸರ್ಕಾರ ನಿಮ್ಮ ಜೊತೆಗೆ ನಿಲ್ಲುತ್ತೇವೆ. ನಿಮ್ಮದು ಕೇವಲ ಕಸ ತೆಗೆಯುವ ಕೈಗಳಲ್ಲ, ಕರ್ನಾಟಕವನ್ನು ಕಾಪಾಡುವ ಕೈಗಳು ಎಂದು ಸಿಎಂ ಬಣ್ಣಿಸಿದರು.

## ಮತ್ತೆ ಮುನ್ನೆಲೆಗೆ ಬಂದ ಅಹಿಂದ ರಾಜಕೀಯ: ಕೀಲು ಕಳಚಿದ ಅಹಿಂದ ರಥ ನಡೆಸುವ ಸಾರಥಿಯ ತಲಾಶ್‌ನಲ್ಲಿ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು



ಕರ್ನಾಟಕದ ರಾಜಕಾರಣ ಇಂದು ಸ್ಥಿತ್ಯಂತರದ ಹಾದಿಯಲ್ಲಿದೆ. ಹೊಸ ತಲೆಮಾರಿನ ನೇತೃತ್ವ ಟಿಸಿಲೊಡೆಯುವ ಸಮಯದಲ್ಲಿ, ಅಹಿಂದ ಎಂಬ ಹಳೆಯ ರಾಜಕೀಯ ಪ್ರಣಾಳ ಶಿಶುವಿಗೆ ಹೊಸ ಜಾತಕ ಬರೆಯುವ ಪ್ರಯತ್ನ ಶುರವಾಗಿದೆ. ದೇವರಾಜ ಅರಸು ನಂತರದ ರಾಜಕಾರಣದಲ್ಲಿ ಹಿಂದುಳಿದ ವರ್ಗಗಳ ರಾಜಕಾರಣಕ್ಕೆ ಅಧಿಕಾರದ ಚಾಮರಛತ್ರ ನೀಡಿದ್ದು ಅಹಿಂದಎಂಬುದು ಎಷ್ಟು ಸತ್ಯವೋ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅದರ ಪೂರ್ಣ ರಾಜಕೀಯ ಫಲಾನುಭವಿ ಎಂಬುದು ಅಷ್ಟೇ ಸತ್ಯ. ಈಗ ಮತ್ತದೇ ಸಿದ್ದರಾಮಯ್ಯ ಅಹಿಂದ ರಥವೇರಿ ತಮ್ಮ ಹಿಂದುಳಿದ ನೇತೃತ್ವಕ್ಕೆ ಅಮರತ್ವ ನೀಡಲು ಮುಂದಾಗುತ್ತಿದ್ದಾರೆ. ಆದ್ರೆ ಈ ಹಿಂದೆ ಅಹಿಂದ ರಥಕ್ಕೆ ಕುದುರೆ ಕಟ್ಟಿದವರು ಇಂದು ಸಿದ್ದರಾಮಯ್ಯ ಜೊತೆಗಿಲ್ಲ. ಚುಕ್ಕಾಣಿ ಹಿಡಿದಿದ್ದ ಕೈಗಳು ಸಂಪೂರ್ಣ ಬದಲಾಗಿವೆ. ಹಿಂದೆ ಹಿಂಬಾಲಕರಾಗಿದ್ದವರು, ಈಗ ನೇತಾರರಾಗಿದ್ದಾರೆ. ಕಾಂಗ್ರೆಸ್ ಪರಮೋಚ್ಚ ನಾಯಕ ರಾಹುಲ್ ಗಾಂಧಿ ತನ್ನನ್ನ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುತ್ತಾರೆ ಎಂದು ಕನಸಿನಲ್ಲೂ ಊಹಿಸದಿದ್ದ ಸಿದ್ದರಾಮಯ್ಯ, **ಡಿ.ಕೆ.ಶಿವಕುಮಾರ್ ಸಿಎಂ ಗಾದಿಗೆ ಏರಿರುವುದನ್ನು ಮನ:ಪೂರ್ವಕವಾಗಿ** ಒಪ್ಪಿಕೊಂಡಂತಿಲ್ಲ. ಮೇಲ್ನೋಟಕ್ಕೆ, ರಾಜಕೀಯ ಮುತ್ಸದ್ದಿತನ ತೋರುತ್ತಿರುವ ಸಿದ್ದರಾಮಯ್ಯ, ನಾನು ಪಕ್ಷದ ಜೊತೆಗೆ ಮತ್ತು ಮುಖ್ಯಮಂತ್ರಿ ಶಿವಕುಮಾರ್‌ವರ ಜೊತೆಗಿದ್ದೇನೆ ಎಂಬ ಸಂದೇಶ ರವಾನಿಸುತ್ತಿದ್ದಾರಷ್ಟೇ. ರಾಜಕಾರಣದಲ್ಲಿ ಅಧಿಕಾರದ ರುಚಿ ಕಂಡ ಕೈಗಳು ಮತ್ತೆ ಪಕ್ಷವೆಂಬ ಮೂರ್ತಿ ಕೆತ್ತಲು ಕೂಡ್ರುವ ಸಾಧ್ಯತೆ ಕಡಿಮೆ. ಅಂತಹ ರಾಜಕೀಯ ಆತ್ಮಹತ್ಯೆಯನ್ನ ಸಿದ್ದರಾಮಯ್ಯರಂತಹ ಮೇಧಾವಿಯಿಂದ ಎಂದೂ ನಿರೀಕ್ಷೆ ಮಾಡಲೂ ಸಾಧ್ಯವಿಲ್ಲ. ಮುಖ್ಯಮಂತ್ರಿಯಾಗಿ ವಿಧಾನ ಸಭೆಯ ಮೊದಲ ಸೀಟಿನಲ್ಲಿ ಕುಳಿತಿದ್ದ ಸಿದ್ದರಾಮಯ್ಯರಿಗಿಂತಲೂ ಕೊನೆಯ ಸೀಟಿನಲ್ಲಿ ಕೂರುವ ಸಿದ್ದರಾಮಯ್ಯ ಅತ್ಯಂತ ಅಪಾಯಕಾರಿ ಎಂಬುದಕ್ಕೆ ಕರ್ನಾಟಕ ರಾಜಕಾರಣದ ಇತಿಹಾಸವೇ ಸಾಕ್ಷಿ. ಈಗ ಮತ್ತೆ ಸಿದ್ದರಾಮಯ್ಯರನ್ನ ವಿಧಾನಸಭೆಯ ಕೊನೆಯ ಸೀಟಿಗೆ ತಳ್ಳಲಾಗಿದೆ.

ಹಾಗಿದ್ರೆ, ಖಾಲಿ ಕೂರದ ಸಿದ್ದರಾಮಯ್ಯ ಮುಂದೇನು ಮಾಡ್ತಾರೆ ಎಂಬುದಕ್ಕೆ ಉತ್ತರವೇ, ''ಅಹಿಂದ'' ಚಳವಳಿಗೆ ರಾಜಕೀಯ ಮರುಜೀವ ನೀಡುವ ಪ್ರಯತ್ನ. ಇತ್ತೀಚೆಗಷ್ಟೇ ಮುಂದೇನು ಎಂಬ ಪ್ರಶ್ನೆ ಮುಂದಿಟ್ಟಾಗ, ಸಂಘಟನೆಯೇ ಶಕ್ತಿ ಎಂಬ ಮಾತನ್ನ ಸಿದ್ದರಾಮಯ್ಯ ತಮ್ಮ ಅತ್ಯಾಪ್ತರ ಬಳಿ ಹೇಳಿಕೊಂಡಿದ್ದಾರೆ.

ಮೂರು ತಿಂಗಳ ವಿಶ್ರಾಂತ ಜೀವನದ ಬಳಿಕ ಮತ್ತೆ ಅಹಿಂದ ಸಂಘಟಿಸುವ ಮಾತನಾಡಿದ್ದಾರೆ. ಆದ್ರೆ, ರಾಜಕೀಯದ ಗುರಿಯಲ್ಲದೇ ನಡೆಸುವ ಚಳುವಳಿ, ಕೇವಲ ಹೋರಾಟಗಾರರನ್ನ ರೂಪಿಸಬಹುದೇ ಹೊರತು ಮುಖ್ಯಮಂತ್ರಿಯನ್ನಲ್ಲ ಎಂಬ ಎಚ್ಚರಿಕೆಯನ್ನು ಅವರ ಆಪ್ತರು ನೀಡಿದ್ದಾರೆ.

# ಸಿಇಸಿಗೆ ಮಾತ್ರವಲ್ಲ, ಇನ್ನಿಬ್ಬರು ಆಯುಕ್ತರಿಗೂ ಪ್ರಶ್ನೆಗಳ ಸುರಿ ಮಳೆ

## ಫಾರ್ಮ್-6ರ ಕೆಲವು ಬದಲಾವಣೆಗಳನ್ನು ಎಸ್‌ಐಆರ್ ಆದೇಶದ ಮೂಲಕ ಜಾರಿಗೆ ತರಲು ಸಾಧ್ಯವಿಲ್ಲ.

• ಉದಯವಾಹಿನಿ, ನವದೆಹಲಿ

ಚುನಾವಣಾ ಆಯೋಗದ ಆಂತರಿಕ ಭಿನ್ನಾಭಿಪ್ರಾಯಗಳ ಕುರಿತು ವರದಿಗಳು ಚರ್ಚೆಗೆ ಗ್ರಾಸವಾಗಿರುವ ಬೆನ್ನಲ್ಲೇ, ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರ ನಿರ್ಧಾರಗಳ ಜತೆಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಹಾಗೂ ವಿವೇಕ್ ಜೋಶಿ ಅವರ ನಡೆ ಬಗ್ಗೆಯೂ ಪ್ರಶ್ನೆಗಳು ಎದ್ದಿವೆ.

ದಿ ಇಂಡಿಯನ್ ಎಕ್ಸ್‌ಪ್ರೆಸ್ ತನಿಖಾ ವರದಿ ಪ್ರಕಾರ, ಕಳೆದ 10 ತಿಂಗಳಲ್ಲಿ ಇಬ್ಬರು ಆಯುಕ್ತರು ಮತದಾರರ ಪಟ್ಟಿ, ಹೊಸ ಮತದಾರರ ನೋಂದಣಿಯ ಫಾರ್ಮ್-6, ಮತದಾರರ ದತ್ತಾಂಶಕ್ಕೆ ಪ್ರವೇಶ ಹಾಗೂ ಆಯೋಗದ ಐಟಿ ವ್ಯವಸ್ಥೆ ಸೇರಿದಂತೆ ಹಲವು ವಿಚಾರಗಳಲ್ಲಿ ಕನಿಷ್ಠ 14 ಬಾರಿ ಆಕ್ಷೇಪ ದಾಖಲಿಸಿದ್ದಾರೆ. ಒಂದೇ ದಿನ ನಾಲ್ಕು ಬಾರಿ ಆಕ್ಷೇಪ ವ್ಯಕ್ತಪಡಿಸಿದ ಸಂದರ್ಭವೂ ಇತ್ತು ಎನ್ನಲಾಗಿದೆ.

ಮತದಾರರ ದತ್ತಾಂಶವನ್ನು ಕೇಂದ್ರೀಕೃತವಾಗಿ ನಿರ್ವಹಿಸುವುದರಿಂದ ಚುನಾವಣಾ ನೋಂದಣಿ ಅಧಿಕಾರಿಗಳ ಕಾನೂನುಬದ್ಧ ಅಧಿಕಾರಗಳಿಗೆ ಧಕ್ಕೆಯಾಗಬಹುದು ಎಂಬ ಆತಂಕವನ್ನು ಇಬ್ಬರೂ ವ್ಯಕ್ತಪಡಿಸಿದ್ದರು. ಫಾರ್ಮ್-6ರ ಕೆಲವು ಬದಲಾವಣೆಗಳನ್ನು ಎಸ್‌ಐಆರ್ ಆದೇಶದ ಮೂಲಕ ಜಾರಿಗೆ ತರಲು ಸಾಧ್ಯವಿಲ್ಲ. ಅಗತ್ಯವಿದ್ದರೆ ಸಂಬಂಧಿತ ನಿಯಮಗಳಲ್ಲೇ ತಿದ್ದುಪಡಿ ಮಾಡಬೇಕು ಎಂದು ವಿವೇಕ್ ಜೋಶಿ ಅಭಿಪ್ರಾಯಪಟ್ಟಿದ್ದರು. ಸಂಧು ಕೂಡ ಇದಕ್ಕೆ ಸಹಮತ




ವ್ಯಕ್ತಪಡಿಸಿದ್ದರು ಎಂದು ವರದಿ ತಿಳಿಸಿದೆ.ಆದರೆ, ಆಂತರಿಕ ಆಕ್ಷೇಪಗಳ ನಡುವೆಯೂ ಮೂವರು ಆಯುಕ್ತರು ಹಲವು ಜಂಟಿ ಕಾರ್ಯಕ್ರಮಗಳು ಹಾಗೂ ಮಾಧ್ಯಮಗೋಷ್ಠಿಗಳಲ್ಲಿ ಭಾಗವಹಿಸಿದ್ದರು. 2025ರ ಅಕ್ಟೋಬರ್‌ನಿಂದ 2026ರ ಆಗಸ್ಟ್‌ವರೆಗೆ ಕನಿಷ್ಠ ಐದು ಪ್ರಮುಖ ಜಂಟಿ ಬ್ರೀಫಿಂಗ್‌ಗಳಲ್ಲಿ ಮೂವರು ಹಾಜರಾಗಿದ್ದರು ಎನ್ನಲಾಗಿದೆ. ತಮ್ಮ ಆಕ್ಷೇಪಗಳನ್ನು ಸಾರ್ವಜನಿಕವಾಗಿ ಏಕೆ ಪ್ರಸ್ತಾಪಿಸಲಿಲ್ಲ ಎಂಬ ಪ್ರಶ್ನೆಯೂ ಈಗ ಮುನ್ನೆಲೆಗೆ ಬಂದಿದೆ.

ಇಬ್ಬರು ಆಯುಕ್ತರು ಕೆಲವು ವಿಚಾರಗಳಲ್ಲಿ ಕೇಂದ್ರ ಸರ್ಕಾರದ ಕ್ಯಾಬಿನೆಟ್ ಕಾರ್ಯದರ್ಶಿಗೂ ಪತ್ರ ಬರೆದಿದ್ದರು ಎನ್ನಲಾಗಿದೆ. ಚುನಾವಣಾ ಆಯೋಗ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿರುವ ಹಿನ್ನೆಲೆಯಲ್ಲಿ, ತಮ್ಮ ಆಕ್ಷೇಪಗಳನ್ನು ಆಯೋಗದ ಅಧಿಕೃತ ವ್ಯವಸ್ಥೆಯ ಮೂಲಕ ಅಥವಾ ರಾಷ್ಟ್ರಪತಿಗೆ ಏಕೆ ಮುಂದುವರಿಸಲಿಲ್ಲ ಎಂಬ ಪ್ರಶ್ನೆಯೂ ಚರ್ಚೆಯಲ್ಲಿದೆ.

ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದೇ ರಾಜೀನಾಮೆಗೆ ಕಾರಣವಾಗಬೇಕೆಂದಿಲ್ಲ. ಆದರೆ, ತಮ್ಮ ಆಕ್ಷೇಪಗಳನ್ನು ನಿರಂತರವಾಗಿ ನಿರ್ಲಕ್ಷಿಸಲಾಗುತ್ತಿದೆ ಅಥವಾ ಆಯೋಗದ ನಿರ್ಧಾರ ಪ್ರಕ್ರಿಯೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ಇಬ್ಬರೂ ಭಾವಿಸಿದ್ದರೆ, ಮುಂದಿನ ಸಾಂವಿಧಾನಿಕ ಅಥವಾ ಆಡಳಿತಾತ್ಮಕ ಕ್ರಮಗಳನ್ನು ಏಕೆ ಕೈಗೊಳ್ಳಲಿಲ್ಲ ಎಂಬ ಪ್ರಶ್ನೆ ಉದ್ಭವಿಸಿದೆ.

ಈ ಪ್ರಶ್ನೆಗಳು ಸಿಇಸಿ ಜ್ಞಾನೇಶ್ ಕುಮಾರ್ ಅವರ ಮೇಲಿನ ಹೊಣೆಗಾರಿಕೆಯನ್ನು ಕಡಿಮೆ ಮಾಡುವುದಿಲ್ಲ. ಬದಲಾಗಿ, ಮೂವರು ಆಯುಕ್ತರ ಪಾತ್ರ, ಆಂತರಿಕ ನಿರ್ಧಾರ ಪ್ರಕ್ರಿಯೆ ಹಾಗೂ ಭಿನ್ನಾಭಿಪ್ರಾಯಗಳನ್ನು ಹೇಗೆ ದಾಖಲಿಸಿ ಪರಿಹರಿಸಲಾಯಿತು ಎಂಬ ಬಗ್ಗೆ ಹೆಚ್ಚಿನ ಸ್ಪಷ್ಟತೆ ಅಗತ್ಯವಿದೆ ಎಂಬ ಚರ್ಚೆಗೆ ಕಾರಣವಾಗಿವೆ.

**10 ತಿಂಗಳಲ್ಲಿ ಕನಿಷ್ಠ 14 ಆಕ್ಷೇಪಗಳು**

**ಫಾರ್ಮ್-6, ಮತದಾರರ ಪಟ್ಟಿ ಮತ್ತು ದತ್ತಾಂಶ ಕೇಂದ್ರೀಕರಣದ ಬಗ್ಗೆ ಭಿನ್ನಾಭಿಪ್ರಾಯ ಕಾನೂನುಬದ್ಧ ಅಧಿಕಾರದ ಬಗ್ಗೆ ಆತಂಕ ಆಂತರಿಕ ಭಿನ್ನಾಭಿಪ್ರಾಯಗಳ ನಡುವೆಯೂ ಜಂಟಿ ಮಾಧ್ಯಮಗೋಷ್ಠಿಗಳಲ್ಲಿ ಭಾಗವಹಿಸಿದ್ದರು. ಕೆಲವು ಆಕ್ಷೇಪಗಳ ಕುರಿತು ಕ್ಯಾಬಿನೆಟ್ ಕಾರ್ಯದರ್ಶಿಗೂ ಪತ್ರ ಅಂತಿಮ ನಿರ್ಧಾರದಲ್ಲಿ ಬಹುಮತದ ಅಭಿಪ್ರಾಯ ಮತ್ತು ಕಾನೂನು ಆಧಾರದ ಬಗ್ಗೆ ಸ್ಪಷ್ಟತೆ ಅಗತ್ಯ.**

**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 15,284/Gram 24ct ₹ 14,010 /Gram 22ct ಬೆಳ್ಳಿ: ₹250.00/

# ಶ್ಯಾನಾಡ್ರಹಳ್ಳಿ ಬಳಿ ಹುಲಿ ಪ್ರತ್ಯಕ್ಷ: ಕಾಡುಹಂದಿ ಬೇಟೆಯಾಡಿ ಅರ್ಧ ತಿಂದು ಬಿಟ್ಟು ಹೋದ ಹುಲಿ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಶ್ಯಾನಾಡ್ರಹಳ್ಳಿ ಗ್ರಾಮದ ರಾಜೇಂದ್ರ ಎಸ್.ಎಂ., ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಸೇರಿದ ಬಲಚವಾಡಿ ಗ್ರಾಮದ ಜಮೀನಿನಲ್ಲಿ ಹುಲಿಯೊಂದು ಕಾಡುಹಂದಿಯನ್ನ ಬೇಟೆಯಾಡಿ, ಅರ್ಧ ತಿಂದು ಬಿಟ್ಟು ಹೋಗಿರುವ ಘಟನೆ ನಡೆದಿದೆ. ಇದರಿಂದ ಸುತ್ತಮುತ್ತಲಿನ ರೈತರು ಹಾಗೂ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದೆ. ಈ ಭಾಗದಲ್ಲಿ ಹುಲಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ ಹಾಗೂ ಜಾನುವಾರುಗಳ ಮೇಲೆ ದಾಳಿ ನಡೆಸಿರುವ ಘಟನೆಗಳ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೆ ಹಲವು ಬಾರಿ, ಸುಮಾರು ನಾಲ್ಕೈದು ಬಾರಿ, ತಿಳಿಸಿದ್ದರೂ ಯಾವುದೇ ಶಾಶ್ವತ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.


ಉದಯವಾಹಿನಿ ಚಿತ್ರ

ಈ ಹಿಂದೆಯೂ ಹುಲಿಗಳು ಹಸುಗಳನ್ನ ಬೇಟೆಯಾಡಿರುವ ಉದಾಹರಣೆಗಳಿದ್ದು, ರೈತರು ಭಯಭೀತರಾಗಿದ್ದಾರೆ. ಇದೀಗ ಕಾಡುಹಂದಿಯನ್ನ ಹುಲಿ ಬೇಟೆಯಾಡಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಹುಲಿಯ ಚಲನವಲನದ ಮೇಲೆ ನಿಗಾ ಇಟ್ಟು, ಬೋನು ಅಳವಡಿಸಿ ಹುಲಿಯನ್ನ ಸೆರೆಹಿಡಿದು, ಗ್ರಾಮಸ್ಥರ ಆತಂಕ ನಿವಾರಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಮುಳಬಾಗಿಲು ಕೌಂಡಿನ್ಯ ನದಿ ಬರಿದು, ನಂಗಲಿ ಕೆರೆ ಒಣಗಿದೆ

• ಉದಯವಾಹಿನಿ, ಮುಳಬಾಗಿಲು

ಕೌಂಡಿನ್ಯ ನದಿ ಎಂದು ಪ್ರಸಿದ್ಧಿಯಾದ ತಾಲ್ಲೂಕಿನ ನಂಗಲಿ ದೊಡ್ಡ ಕೆರೆ ಬರಿದಾಗಿದೆ. ಇದರಿಂದಾಗಿ ಕೆರೆಯ ಕೋಡಿ ಹರಿಯುವ ಕಾಲುವೆಯು ಹತ್ತು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಒಣಗಿದೆ. ತಾಲ್ಲೂಕಿನ ಅತಿದೊಡ್ಡ ಕೆರೆ ಹಾಗೂ ಜಿಲ್ಲೆಯ 3ನೇ ಅತಿದೊಡ್ಡ ಕೆರೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ನಂಗಲಿ ದೊಡ್ಡ ಕೆರೆ ತುಂಬಿದರೆ, ಸುಮಾರು 5-10 ವರ್ಷ ನೀರು ಸಂಗ್ರಹವಾಗುವ ಕಾರಣ ಸುತ್ತಮುತ್ತಲಿನ ಕೊಳವೆ ಬಾವಿ ಹಾಗೂ ತೆರೆದ ಬಾವಿಗಳಲ್ಲೂ ನೀರಿನ ಕೊರತೆ ಕಂಡುಬರುವುದಿಲ್ಲ. ಆದರೆ, ಇತ್ತೀಚೆಗೆ ತಾಲ್ಲೂಕಿನಲ್ಲಿ ಭೀಕರ ಬರಗಾಲ ತಾಂಡವಾಡುತ್ತಿರುವ ಪರಿಣಾಮ ಕಾಲುವೆಯಲ್ಲಿ ನೀರು ಬತ್ತಿ, ಬಯಲಿನಂತಾಗಿದೆ. ನಂಗಲಿ ದೊಡ್ಡ ಕೆರೆ ತಪ್ಪಲಿನಿಂದ ಉಪ್ಪರಹಳ್ಳಿ ಹಾಗೂ ಬ್ಯಾಟನೂರು ಸಮೀಪದ ಮಾಣಿಕ್ಯನ ಕೆರೆವರೆಗಿನ ಸುಮಾರು 5-6 ಮೈಲು ದೂರದ ಕಾಲುವೆಯು ಇಷ್ಟು ವರ್ಷ ನದಿಯಂತೆ ಭಾಸವಾಗುತ್ತಿತ್ತು. ಹೀಗಾಗಿ, ಸುತ್ತಮುತ್ತಲಿನ ಕೊಳವೆ ಬಾವಿಗಳು ಹಾಗೂ ತೆರೆದ ಬಾವಿಗಳಲ್ಲಿ ನೀರು ಸಂಗ್ರಹವಾಗುತ್ತಿತ್ತು. ಇದರ ಪರಿಣಾಮ ಸುತ್ತಮುತ್ತಲಿನ ರೈತರು ನೀರಿನ ಸಮಸ್ಯೆ ಇಲ್ಲದೆ ಕೃಷಿ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು.ಸುಮಾರು ಆರು ತಿಂಗಳುಗಳಿಂದ ಏಟಿಯಲ್ಲಿ ನೀರಿಲ್ಲದ ಕಾರಣ ಸ್ಥಳೀಯ ಬಹುತೇಕ ಕೊಳವೆ ಬಾವಿಗಳು ಬರಿದಾಗಿವೆ. ತೆರೆದ ಬಾವಿಗಳು ಒಣಗಿ ಬಾಯಿ ತೆರೆದಿವೆ ಎನ್ನುತ್ತಾರೆ ಸ್ಥಳೀಯರು.


ಉದಯ ವಾಹಿನಿ

ಪ್ರಾದೇಶಿಕ

ಶನಿವಾರ 26 ಸೆಪ್ಟೆಂಬರ್ 2026 | 03


## ಮಿನಿ ನ್ಯೂಸ್

### ಮಂಡ್ಯದಲ್ಲಿ ಕಾವೇರಿ ಆಕ್ರೋಶ: ರೈತರ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ,'ಮಂಡ್ಯ:

ತಮಿಳುನಾಡಿಗೆ ನಿತ್ಯವೂ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶವನ್ನು ಖಂಡಿಸಿ ಮಂಡ್ಯದಲ್ಲಿ ರೈತಪರ ಹಾಗೂ ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.ಸಿಡಬ್ಲ್ಯುಎಂಎ ಅವೈಜ್ಞಾನಿಕ ನಿರ್ಧಾರದಿಂದ ಕಂಗೆಟ್ಟಿರುವ ಪ್ರತಿಭಟನಾಕಾರರು, ಮಂಡ್ಯದ ಪ್ರಮುಖ ವೃತ್ತವಾದ ಸಂಜಯ ವೃತ್ತದಲ್ಲಿ ಜಮಾಯಿಸಿ ಸರ್ಕಾರದ ಹಾಗೂ ಪ್ರಾಧಿಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು ಹಳೇ ಬೆಂಗಳೂರು-ಮೈಸೂರು ಹೆದ್ದಾರಿಯನ್ನು ತಡೆದು ವಾಹನ ಸಂಚಾರವನ್ನು ಸ್ಥಗಿತಗೊಳಿಸಿದರು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು. ರಾಜ್ಯದಲ್ಲಿ ಈಗಾಗಲೇ ಮಳೆಯ ಕೊರತೆ ಹಾಗೂ ನೀರಿನ ಸಂಕಷ್ಟವಿದ್ದರೂ, ಪದೇ ಪದೇ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗುತ್ತಿದ್ದು, ಈ ಹೊಸ ಆದೇಶ ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಕಿಡಿಕಾರಿದರು.

ಯಾವುದೇ ಕಾರಣಕ್ಕೂ ತಮಿಳುನಾಡಿಗೆ ಹನಿ ನೀರನ್ನೂ ಹರಿಸಬಾರದು ಎಂದು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ ಹೋರಾಟಗಾರರು, ಕಾವೇರಿ ನೀರು ನಿಯಂತ್ರಣ ಸಮಿತಿ ಮತ್ತು ಪ್ರಾಧಿಕಾರವು ಈಗ ಮತ್ತೊಮ್ಮೆ ಮುಂದಿನ 15 ದಿನಗಳ ಕಾಲ ನಿತ್ಯ 4 ಸಾವಿರ ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುವಂತೆ ಆದೇಶಿಸಿರುವದನ್ನು ಖಂಡಿಸಿದರು.

# ಜಂಬೂಸವಾರಿಯ ದಿನ ಕುಶಾಲತೋಪು ಸಿಡಿಸುವ ಫಿರಂಗಿ ಗಾಡಿಗಳಿಗೆ ಸಾಂಪ್ರದಾಯಿಕ ಪೂಜೆ

## ಜಂಬೂಸವಾರಿಯ ವೇಳೆ ಕುಶಾಲತೋಪು ಸಿಡಿಸುವ ಫಿರಂಗಿ ಗಾಡಿಗಳಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

• ಉದಯವಾಹಿನಿ, ಮೈಸೂರು

1 ಧಾರ್ಮಿಕ ವಿಧಿವಿಧಾನಗಳೊಂದಿಗೆ ಪೂಜೆ

2 ಮೂರು ಹಂತದಲ್ಲಿ ಸಿಡಿಮದ್ದು ಸಿಡಿಸುವ ಮೂಲಕ ಅಭ್ಯಾಸ

3 ಅಂಬಾರಿಯಲ್ಲಿ ಕೂಳಿತ ನಾಡ ಅಧಿದೇವತೆಗೆ ಪುಷ್ಪಾರ್ಚನೆ

ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ಚಟುವಟಿಕೆಗಳು ಗರಿಗೆದರಿವೆ. ಜಂಬೂಸವಾರಿಯ ವೇಳೆ ಕುಶಾಲತೋಪು ಸಿಡಿಸುವ ಫಿರಂಗಿ ಗಾಡಿಗಳಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.ಅರಮನೆ ಅರ್ಚಕ ಪ್ರಹ್ಲಾದ್ ರಾವ್ ನೇತೃತ್ವದಲ್ಲಿ ಅರಮನೆ ಆನೆ ಬಾಗಿಲಿನ ಬಳಿ 11 ಫಿರಂಗಿ ಗಾಡಿಗಳಿಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಪೂಜೆ ಸಲ್ಲಿಸಲಾಯಿತು. ಪೂಜೆ ಸಲ್ಲಿಸಿದ ನಂತರ ತರಬೇತಿ ಪಡೆದ ಸಿಎಆರ್ ಸಿಬ್ಬಂದಿ ನಿತ್ಯ ಡ್ರೈ ತಾಲೀಮನ್ನು ನಡೆಸುತ್ತಾರೆ. ಬಳಿಕ ಜಂಬೂಸವಾರಿಗೆ ಸಮೀಪ ಇರುವಂತೆ ಮೂರು ಹಂತದಲ್ಲಿ ಗಜಪಡೆಯ ಮುಂದೆ ಸಿಡಿಮದ್ದು, ತಾಲೀಮು ನಡೆಸುತ್ತಾರೆ. ಬಳಿಕ ಜಂಬೂಸವಾರಿಯ ದಿನ ಚಿನ್ನದ ಅಂಬಾರಿಯಲ್ಲಿರುವ ನಾಡ ಅಧಿದೇವತೆಗೆ ಪುಷ್ಪಾರ್ಚನೆ ಮಾಡಿದ ನಂತರ 21 ಸುತ್ತು ಫಿರಂಗಿಗಳಿಂದ ಕುಶಾಲತೋಪು ಸಿಡಿಸುವುದು ಸಂಪ್ರದಾಯ.

ಪ್ರತಿ ಬಾರಿ ಮೃತ್ಯುಂಜಯ ಜಪ ಮಾಡಿಯೇ ಸಶಸ್ತ್ರ ಪಡೆ ಸಿಬ್ಬಂದಿ ಕುಶಾಲತೋಪು ತಾಲೀಮನ್ನು ಆರಂಭಿಸುತ್ತಾರೆ ಎಂದು ಅರ್ಚಕ ಪ್ರಹ್ಲಾದ್ ರಾವ್ ಹೇಳಿದರು. ಪ್ರತಿ ವರ್ಷದಂತೆ ಈ ಬಾರಿಯೂ ಕುಶಾಲತೋಪು ಸಿಡಿಸುವ ಫಿರಂಗಿ ಗಾಡಿಗಳಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಲಾಗಿದೆ. ಮೂರು ಹಂತದಲ್ಲಿ ಸಿಡಿಮದ್ದು ಸಿಡಿಸುವ ಮೂಲಕ ಅಭ್ಯಾಸ ನಡೆಸಲಾಗುವುದು. ವಿಜಯದಶಮಿ ದಿನ ಜಂಬೂಸವಾರಿ ವೇಳೆ ಹಾಗೂ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಪೆರೇಡ್ ವೇಳೆ ಫಿರಂಗಿಗಳ ಮೂಲಕ ಸಿಡಿಮದ್ದು ಸಿಡಿಸಲಾಗುವುದು. ಈ ಸಂದರ್ಭದಲ್ಲಿ ಆನೆಗಳು ಹಾಗೂ ಕುದುರೆಗಳು ಬೆದರದಂತೆ, ಫಿರಂಗಿಗಳ ಶಬ್ಧವನ್ನು ಪರಿಚಯಿಸಿ, ಆ ಸದ್ದಗೆ ಹೊಂದಿಕೊಳ್ಳುವ ಉದ್ದೇಶದಿಂದ ಸಿಡಿಮದ್ದು ತಾಲೀಮನ್ನು ನಡೆಸಲಾಗುತ್ತದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು

**ಸಿಎಆರ್ ಡಿಸಿಪಿ ಸಿದ್ದನಗೌಡ ವೈ ಪಾಟೀಲ್ ಹೇಳಿದ್ದೇನು?:** ನಗರ ಶಸಸ್ತ್ರ ಮೀಸಲು ಪಡೆ ಡಿಸಿಪಿ ಸಿದ್ದನಗೌಡ ವೈ ಪಾಟೀಲ್ ಮಾತನಾಡಿ, 7 ಫಿರಂಗಿಗಳನ್ನು ಕೊಂಡೊಯ್ಯುವುದಕ್ಕೆ 4 ಸಪೋರ್ಟಿಂಗ್ ಗಾಡಿಗಳಿವೆ.

ಒಟ್ಟು ಮೂರು ಹಂತದಲ್ಲಿ ಕುಶಾಲತೋಪನ್ನು ಹಾರಿಸಲಾಗುವುದು. ದಸರಾ ಗಜಪಡೆ ಹಾಗೂ ಅಶ್ವದಳಗಳು ಆ ಸದ್ದಿಗೆ ಹೊಂದಿಕೊಳ್ಳಬೇಕಾದ ಹಿನ್ನೆಲೆಯಲ್ಲಿ ಅರಮನೆ ಮುಂಭಾಗದ ವಸ್ತು ಪ್ರದರ್ಶನ ಆವರಣದಲ್ಲಿ ಕುಶಾಲತೋಪಿನ ತಾಲೀಮನ್ನು ನಡೆಸಲಾಗುವುದು. ಕುಶಾಲತೋಪು ಸಿಡಿಸುವುದಕ್ಕೆ ಒಟ್ಟು 35 ಮಂದಿ ನುರಿತ ಸಿಬ್ಬಂದಿಗಳಿದ್ದಾರೆ ಎಂದು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

### ಫಿರಂಗಿಗಳಿಗೆ ಸಾಂಪ್ರದಾಯಿಕ ಪೂಜೆ

ದಸರಾದ ಜಂಬೂಸವಾರಿಯ ದಿನ ಚಿನ್ನದ ಅಂಬಾರಿಯಲ್ಲಿ ಕೂಳಿತ ನಾಡ ಅಧಿದೇವತೆಗೆ ಪುಷ್ಪಾರ್ಚನೆ ಮಾಡುವ ಸಂದರ್ಭದಲ್ಲಿ ಅರಮನೆಯ ಹೊರಭಾಗದ ಮಾರಮ್ಮ ದೇವಿಯ ದೇವಸ್ಥಾನ ಪಕ್ಕದ ಮೈದಾನದಲ್ಲಿ 21 ಸುತ್ತು ಫಿರಂಗಿಗಳಿಂದ ಕುಶಾಲತೋಪು ಸಿಡಿಸುತ್ತಾರೆ. ಅರಮನೆ ಮುಂಭಾಗದ ಆನೆ ಬಾಗಿಲಿನಲ್ಲಿ ಮಹಾರಾಜರು ಬಳಸುತ್ತಿದ್ದ ಫಿರಂಗಿಗಳನ್ನು ಸ್ವಚ್ಛ ಮಾಡಿ ಬಳಿಕ ಅರಿಶಿನ ಕುಂಕುಮ, ವಿಭೂತಿ, ಮಾವಿನ ತೋರಣ, ಬಾಳೆ ಕಂದನ್ನು ಕಟ್ಟಿ ಚಾಮುಂಡೇಶ್ವರಿ ತಾಯಿಯ ಫೋಟೋ ಇಟ್ಟು ಕಾರ್ಯಗಳು ವಿಘ್ನವಿಲ್ಲದೇ ನೆರವೇರಲಿ ಎಂದು ಪೂಜಿಸಿ ಪ್ರಾರ್ಥಿಸಲಾಯಿತು.

ಚಾಮುಂಡೇಶ್ವರಿಯಲ್ಲಿ ಪ್ರಾರ್ಥನೆ ಮಾಡಿ ಕುಶಾಲತೋಪುಗಳಿಗೆ ಸಾಂಪ್ರದಾಯಿಕ ವಿಧಿ ವಿಧಾನಗಳೊಂದಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕುಶಾಲತೋಪು ಸಿಡಿಸುವ ಕಾರ್ಯ ಬೆಂಕಿಯ ಜೊತೆ ಸರಸವಾಡಿದಂತೆ. ಈ ಹಿನ್ನೆಲೆಯಲ್ಲಿ ಯಾವುದೇ ತೊಂದರೆ ಹಾಗೂ ಅವಘಡಗಳು ಸಂಭವಿಸಬಾರದು ಎಂದು ಮೃತ್ಯುಂಜಯ ಪೂಜೆ ಮಾಡಲಾಯಿತು.

### ಗ್ರಾಮೀಣ ಜೀವನೋಪಾಯಕ್ಕೆ ವಿಬಿಜಿರಾಮ್‌ಜಿ ಯೋಜನೆ ಬೆಂಬಲ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೋಲಾರ

ಗ್ರಾಮೀಣ ಭಾಗದ ಮಹಿಳೆಯರು ಮತ್ತು ರೈತರ ಜೀವನೋಪಾಯವನ್ನು ಬಲಪಡಿಸಲು ಮತ್ತು ಆರ್ಥಿಕವಾಗಿ ಸಬಲಗೊಳಿಸಲು 'ವಿಬಿಜಿರಾಮ್‌ಜಿ' ಯೋಜನೆ ಅತ್ಯಂತ ಸಹಕಾರಿಯಾಗಿದೆ ಎಂದು ಪಂಚಾಯತ್ ಸಹಾಯಕ ಯೋಜನಾಧಿಕಾರಿ ಎಸ್. ವೆಂಕಟಾಚಲಪತಿ ಹೇಳಿದರು.ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ನಡೆದ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು, ಕೃಷಿ ಸಖಿಯರು, ಪಶು ಸಖಿಯರ ತರಬೇತಿ ಸಭೆಯಲ್ಲಿ ಅವರು ಮಾತನಾಡಿದರು. ''ಗ್ರಾಮೀಣ ಮಟ್ಟದಲ್ಲಿ ಕೃಷಿ, ಪಶುಸಂಗೋಪನೆ ಮತ್ತು ಸ್ವ-ಉದ್ಯೋಗ ಚಟುವಟಿಕೆಗಳನ್ನು ಉತ್ತೇಜಿಸಲು ಸ್ವಸಹಾಯ ಸಂಘಗಳ ಪಾತ್ರ ಪ್ರಮುಖವಾಗಿದೆ. ಕೃಷಿ ಸಖಿಯರು ಮತ್ತು ಪಶು ಸಖಿಯರು ಸರ್ಕಾರದ ಯೋಜನೆಗಳನ್ನು ತಲುಪಿಸಲು ತಳಮಟ್ಟದಲ್ಲಿ ಸೇತುವೆಯಾಗಿ ಕೆಲಸ ಮಾಡುತ್ತಿದ್ದಾರೆ. ವಿಬಿಜಿರಾಮ್‌ಜಿ ಯೋಜನೆಯಡಿಯಲ್ಲಿ ಸಿಗುವ ಸೌಲಭ್ಯಗಳನ್ನು ಪ್ರತಿಯೊಬ್ಬ ಅರ್ಹ ಫಲಾನುಭವಿಯೂ ಸದ್ಬಳಕೆ ಮಾಡಿಕೊಳ್ಳಬೇಕು'' ಎಂದು ಅವರು ಕರೆ ನೀಡಿದರು.ವಿಬಿಜಿರಾಮ್‌ಜಿ ಯೋಜನೆಯಡಿ ದಿನದ ಕೂಲಿ ದರವನ್ನು ರೂ 382 ಕ್ಕೆ ಏರಿಸಲಾಗಿದೆ, ಕುಟುಂಬಕ್ಕೆ 125 ದಿನಗಳ ಉದ್ಯೋಗ ಖಾತಿ ನೀಡಲಾಗುತ್ತಿದೆ. ಇದರಿಂದ ಒಂದು ಕುಟುಂಬವು ವರ್ಷಕ್ಕೆ ರೂ 47,750 ಗಳಿಸಬಹುದು.ಈ ಯೋಜನೆಯಡಿಯಲ್ಲಿ ಯಥಾ ಶಕ್ತಿ ಕೈಗೆಟುಕುವ 375 ವಿವಿಧ ಕಾಮಗಾರಿಗಳು ಅನುಷ್ಠಾನಕ್ಕಾಗಿವೆ, ಜಲ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

## ಮನೆ ಕಳೆದುಕೊಂಡವರಿಗೆ ಪರಿಹಾರ ನೀಡಿ

• ಉದಯವಾಹಿನಿ, ಕೆಜಿಎಫ್

ಊರಿಗಾಂ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕಾಗಿ ಜಿಲ್ಲಾಡಳಿತವು ವಶಕ್ಕೆ ಪಡೆದಿರುವ ಜಮೀನಿನಲ್ಲಿದ್ದವರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಸಿಐಟಿಯು ಕಾರ್ಯಕರ್ತರು ಈಚೆಗೆ ಆಡಳಿತ ಸೌಧದ ಮುಂಭಾಗದಲ್ಲಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು.ಊರಿಗಾಂನಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕಾಗಿ ಜಿಲ್ಲಾಡಳಿತವು ಇಪ್ಪತ್ತು ಮನೆಗಳನ್ನು ತೆರವು ಮಾಡಿದೆ. ತೆರವು ಮಾಡಿದ ಮನೆಗಳನ್ನು ಬಹಳ ವರ್ಷಗಳ ಹಿಂದೆ ಕಟ್ಟಲಾಗಿತ್ತು. ಅವುಗಳಿಗೆ ತೆರಿಗೆಯನ್ನೂ ಪಾವತಿಸಲಾಗಿತ್ತು. ಆದರೆ, ಜಿಲ್ಲಾಡಳಿತ ಯಾವುದೇ ಪರಿಹಾರ ನೀಡದೆ, ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿದ್ದ ಮನೆಗಳನ್ನು ಏಕಾಏಕಿ ತೆರವು ಮಾಡಿದೆ. ಇದರಿಂದ ಅಲ್ಲಿನ ನಿವಾಸಿಗಳು ಬೀದಿಗೆ ಬಂದಿದ್ದಾರೆ. ನಿರ್ಗತಿಕರಾದ ನಿವಾಸಿಗಳಿಗೆ ಕೂಡಲೇ ಸೂಕ್ತ ಪರಿಹಾರ ನೀಡಬೇಕು. ಅವರಿಗೆ ನಿವೇಶನ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು. ಕಾರ್ಮಿಕ ಮುಖಂಡ ಎ.ಆರ್.ಬಾಬು, ಜಿ.ಶಿವಕುಮಾರ್, ಚಂದ್ರಬಾಬು, ಪಿ.ರಾಜ, ರಾಜಶೇಗರನ್, ಗಜೇಂದ್ರನ್, ಕಮಲನಾಥನ್, ಜಿ.ದಿವಾಕರ್, ಆಗಸ್ಟಿನ್ ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ

# ರೈತರ ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡಿ

• ಉದಯವಾಹಿನಿ, ಗುಂಡ್ಲುಪೇಟೆ

ರೈತರ ಬೆಳೆ ನಷ್ಟಕ್ಕೆ ವೈಜ್ಞಾನಿಕ ಮಾನದಂಡದ ಆಧಾರದಲ್ಲಿ ಸೂಕ್ತ ಪರಿಹಾರ ನೀಡುವುದರ ಜತೆಗೆ ರೈತರ ಸಾಲ ಮನ್ನಾ ಮಾಡಬೇಕು ಎಂದು ರೈತ ಮುಖಂಡ ಷಣ್ಮುಖಸ್ವಾಮಿ ಒತ್ತಾಯಿಸಿದರು. ಶುಕ್ರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನ ಜಾರಿಗೊಳಿಸಿ ರೈತರ ಸಂಕಷ್ಟಕ್ಕೆ ದೂಡಿದೆ, ಜ್ವಲಂತ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ರಾಜಕಾರಣಿಗಳ ಅಧಿಕಾರದಾಹಕ್ಕೆ ರೈತರನ್ನ ನೀಡುವ ಕೈಯಿಂದ ಬೇಡುವ ಕೈಯನ್ನಾಗಿ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಟೀಕಿಸಿದರು.

ಎಕರೆಗೆ 70 ಸಾವಿರ ಪರಿಹಾರ: ಒಂದು ಎಕರೆ ಬೆಳೆ ಬೆಳೆಯಲು 30ರಿಂದ 40 ಸಾವಿರದವರೆಗೆ ಖರ್ಚಾಗುತ್ತದೆ. ಆದರೆ ಬೆಳೆ ನಷ್ಟಕ್ಕೆ ಸರ್ಕಾರ ಘೋಷಿಸಿರುವ 2,500 ಪರಿಹಾರ ರೈತರ ಸಂಕಷ್ಟಕ್ಕೆ ಯಾವುದೇ ರೀತಿಯಲ್ಲೂ ನೆರವಾಗುವುದಿಲ್ಲ. ಇದರಿಂದ ಒಂದು ಮೂಟೆ ಗೊಬ್ಬರವನ್ನೂ ಖರೀದಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿ ಎಕರೆಗೆ ಕನಿಷ್ಠ 70 ಸಾವಿರ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ತಾಲ್ಲೂಕಿನಲ್ಲಿ ಬೆಳೆ ನಷ್ಟ, ಸಾಲಬಾಧೆ ಹಾಗೂ ನೀರಿನ ಕೊರತೆಯಿಂದ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಕಲ್ಲಿಗೌಡನಹಳ್ಳಿ ಗ್ರಾಮದ ರೈತರೊಬ್ಬರು ಸಾಲದ ಹೊರೆಯನ್ನ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವುದು ನೋವಿನ ಸಂಗತಿ. ಬರ ಪರಿಸ್ಥಿತಿಯನ್ನ ಗಂಭೀರವಾಗಿ ಪರಿಗಣಿಸಿ ಕೂಡಲೇ ರೈತರ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ನದಿ ಮೂಲವಿಲ್ಲದ ಕಾರಣ ಜನರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿದೆ. ಸರ್ಕಾರ ಶಾಶ್ವತ ನೀರಿನ ಯೋಜನೆ ರೂಪಿಸಬೇಕು. ಇದೇ ವೇಳೆ ತಾಲ್ಲೂಕಿನಲ್ಲಿನ ಗಣಿಗಾರಿಕೆಯಿಂದ ಪರಿಸರ ಹಾನಿಯಾಗುತ್ತಿದ್ದು, ಗುಂಡ್ಲುಪೇಟೆ ಎರಡನೇ ಬಳ್ಳಾರಿಯಾಗುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದರು. ಮಾನವವನ್ಯಜೀವಿ ಸಂಘರ್ಷ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಫಾರಿ ಬಂದ್ ಮಾಡಬೇಕು. ರೈತರು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸರ್ಕಾರ ಕೂಡಲೇ ಸೂಕ್ತ ಪರಿಹಾರ ಕಲ್ಪಿಸಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ರೈತ ಮುಖಂಡ ಬರಗಿ ಮಹೇಶ್ ಮಾತನಾಡಿ, ಸಾವಿರಾರು ರೂಪಾಯಿ ಖರ್ಚು ಮಾಡಿ ಬೆಳೆ ಬೆಳೆಯುವ ರೈತರಿಗೆ 2,500 ಪರಿಹಾರ ನೀಡುವುದು ಸಮರ್ಪಕವಲ್ಲ. ರೈತರ ವಾಸ್ತವಿಕ ನಷ್ಟವನ್ನು ಪರಿಗಣಿಸಿ ವೈಜ್ಞಾನಿಕವಾಗಿ ಪರಿಹಾರ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಮಾಡ್ರಹಳ್ಳಿ ಪಾಪಣ್ಣ, ಪ್ರವೀಣ್, ಲಕ್ಕೂರು ಮಾಯಿ, ಹೊರೆಯಾಲ ವಿನೋದ್, ಕೆಬ್ಬೆಪುರ ಗುರು, ರಾಜ್, ಮಂಜು, ಮಲ್ಲರಾಧ್ಯ, ಕೊಂಗಳ್ಳಿ ನಾಯಕ, ಹೊನ್ನೇಗೌಡ, ಮಾದಪಟ್ಟಣ ಚೇತನ್, ನಾಗರಾಜ್ ಸೇರಿದಂತೆ ಹಲವರು ಇದ್ದರು.

# 650 ವರ್ಷಗಳ ಹಿಂದಿನ ಶಿವಲಿಂಗ ಪತ್ತೆ; ಕಾಡುಪಾಲಾಗಿದ್ದ ಮಹದೇವ ದೇಗುಲ ಪುನರುಜ್ಜೀವನಕ್ಕೆ ಗ್ರಾಮಸ್ಥರ ಸಂಕಲ್ಪ

• ಉದಯವಾಹಿನಿ, ಮಡಿಕೇರಿ

ಕೊಡಗು ಜಿಲ್ಲೆಯ ವಿರಾಜಪೇಟೆ ಹೊರವಲಯದ ಐಮಂಗಲ ಗ್ರಾಮದಲ್ಲಿ ಪುರಾತನ ಶಿವಲಿಂಗ ಪತ್ತೆಯಾಗಿದೆ. ಸುಮಾರು 650 ವರ್ಷಗಳ ಹಿಂದಿನ ಮಹದೇವ ದೇವಾಲಯ ಇಲ್ಲಿ ಇತ್ತು ಎಂಬ ನಂಬಿಕೆ ಗ್ರಾಮಸ್ಥರಲ್ಲಿ ಮೂಡಿದ್ದು, ಕಾಡುಪಾಲಾಗಿದ್ದ ದೇವಾಲಯವನ್ನು ಪುನರುಜ್ಜೀವನಗೊಳಿಸಲು ಗ್ರಾಮಸ್ಥರು ಮುಂದಾಗಿದ್ದಾರೆ. ಐಮಂಗಲ ಗ್ರಾಮದಿಂದ ಚೆಂಬೆಬೆಳ್ಳೂರು ರಸ್ತೆಯಲ್ಲಿ ಸುಮಾರು 3 ಕಿಲೋಮೀಟರ್ ದೂರದಲ್ಲಿರುವ ಕಾಡಿನ ಪ್ರದೇಶದಲ್ಲಿ ಶಿವಲಿಂಗ, ಬಸವ ಮೂರ್ತಿ, ಗರ್ಭಗುಡಿಯ ಕುರುಹು, ತೀರ್ಥಕುಂಡ ಸೇರಿದಂತೆ ಹಲವು ಅವಶೇಷಗಳು ಪತ್ತೆಯಾಗಿವೆ.ಚಳಿ, ಮಳೆ, ಗಾಳಿ, ಬಿಸಿಲನ್ನೂ ಲೆಕ್ಕಿಸದೆ ಕಾಡಿನ ಮಧ್ಯೆ ಶಿವಲಿಂಗವೊಂದು ಇಂದಿಗೂ ಉಳಿದುಕೊಂಡಿದೆ. ಶಿವಲಿಂಗದ ಪಕ್ಕದಲ್ಲೇ ಅದೇ ದಿಕ್ಕಿಗೆ ಬಾಗಿಕೊಂಡಿರುವ ಬಸವ ಮೂರ್ತಿಯೂ ಕಂಡುಬಂದಿದೆ. ಇದು ಇತ್ತೀಚಿನ ದೇವಾಲಯವಲ್ಲ.

ಈ ಪ್ರದೇಶದಲ್ಲಿ ಹಿಂದೆ ಮಹದೇವ ದೇವಾಲಯವಿತ್ತು ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ. ಶಿವಲಿಂಗಕ್ಕೆ ಯಾವುದೇ ದೊಡ್ಡ ಹಾನಿಯಾಗದೆ ಉಳಿದಿರುವುದು ವಿಶೇಷ ಎಂದು ಸ್ಥಳೀಯರು ಹೇಳುತ್ತಾರೆ.ಐಮಂಗಲ ಗ್ರಾಮದಲ್ಲಿ ಹಲವು ಪುರಾತನ ದೇವಾಲಯಗಳಲ್ಲಿ ಇಂದಿಗೂ ಪೂಜೆ-ಪುನಸ್ಕಾರಗಳು ನಡೆಯುತ್ತಿವೆ. ಆದರೆ ರಸ್ತೆಯ ಪಕ್ಕದಲ್ಲಿದ್ದ ಈ ಮಹದೇವ ದೇವಾಲಯ ಮಾತ್ರ ಕಾಲಕ್ರಮೇಣ ನಿರ್ಲಕ್ಷ್ಯಕ್ಕೆ ಒಳಗಾಗಿ ಕಾಡುಪಾಲಾಗಿತ್ತು ಎನ್ನಲಾಗಿದೆ.

ದೇವಾಲಯದಲ್ಲಿ ನಿತ್ಯ ಪೂಜೆ ನಿಂತ ಬಳಿಕ ಸ್ಥಳೀಯರಿಗೆ ಹಲವು ರೀತಿಯ ತೊಂದರೆಗಳು ಎದುರಾಗುತ್ತಿವೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿ ಮೂಡಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮದ ಪ್ರಮುಖರು ಸಭೆ ನಡೆಸಿ ದೇವಾಲಯದ ಇತಿಹಾಸ ಹಾಗೂ ಮುಂದಿನ ಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಮುಂದಾದರು.


ಉದಯವಾಹಿನಿ ಚಿತ್ರ

## ಇಡಿಯಿಂದ ಯಾವುದೇ ನೋಟಿಸ್ ಬಂದಿಲ್ಲ: ಸಚಿವ ಸತೀಶ್ ಜಾರಕಿಹೊಳಿ

• ಉದಯವಾಹಿನಿ, ಮೈಸೂರು

ಇಡಿ ಅಧಿಕಾರಿಗಳಿಂದ ನನಗೆ ಯಾವುದೇ ನೋಟಿಸ್ ಬಂದಿಲ್ಲ. ನೋಟಿಸ್ ಕೊಟ್ಟರೆ ಹೋಗಿ ಉತ್ತರ ಕೊಡುತ್ತೇನೆ. ಆದರೆ, ಇಡಿ ರೈಡ್ ಯಾಕೆ ಆಯಿತು ಅಂತ ತಿಳಿದುಕೊಳ್ಳಲು ಸಮಯ ಬೇಕು ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು. ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿ, ಕೇಂದ್ರ ಸರ್ಕಾರದ ಯೋಜನೆಯಲ್ಲಿ ನಾನು ಯಾವುದೇ ಕಮಿಷನ್ ತೆಗೆದುಕೊಂಡಿಲ್ಲ. ಕಮಿಷನ್ ತೆಗೆದುಕೊಂಡಿದ್ದಾರೆ, ಬಿಟ್ಟಿದ್ದಾರೆ ಎನ್ನುವುದಕ್ಕೆ ದಾಖಲೆ ಬೇಕು. ನನ್ನ ಮೇಲೆ ಯಾಕೆ ರೈಡ್ ಆಯ್ತು ಅಂತ ತಿಳಿದುಕೊಳ್ಳುವುದಕ್ಕೆ ಟೈಮ್ ಬೇಕು. ಕಳೆದ 12 ವರ್ಷದಲ್ಲಿ ಬಿಜೆಪಿಯ ಯಾವೊಬ್ಬ ನಾಯಕನ ಮೇಲೆಯೂ ಇಡಿ ರೈಡ್ ಆಗಿಲ್ಲ. ಬಿಜೆಪಿಯವರ ಮೇಲೆ ದೂರು ಕೊಟ್ಟರು ರೈಡ್ ಮಾಡುವುದಿಲ್ಲ ಎಂದರು.

**ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯೆ:** ಹೊಸ ಯೋಜನೆಗಳಿಗೆ ಸರ್ಕಾರದ ಬಳಿ ಹಣವಿಲ್ಲ ಎನ್ನುವ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಯಾವುದೇ ಸರ್ಕಾರ ಇದ್ದರೂ ಆರ್ಥಿಕ ಇಲಾಖೆ ಅದೇ ರೀತಿ ಪತ್ರ ಬರೆಯುತ್ತದೆ. ಅದರರ್ಥ ಸರ್ಕಾರದ ಬಳಿ ಹಣವಿಲ್ಲ ಅಂತಲ್ಲ. ಬಜೆಟ್ ಬಿಟ್ಟು ಬೇರೆ ಘೋಷಣೆ ಮಾಡುವಾಗ ಇತಿಮಿತಿಯಲ್ಲಿ ಮಾಡಬೇಕು. ಇದನ್ನೇ ಆರ್ಥಿಕ ಇಲಾಖೆ ಹೇಳಿರುವುದು. ಹೊಸ ಯೋಜನೆ ಮಾಡುವುದಕ್ಕೆ ಆಗುವುದಿಲ್ಲ. ಈಗ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಕ್ಕೆ ಮಾತ್ರ ಹಣವಿದೆ. ಹೊಸ ಯೋಜನೆಗಳಿಗೆ ಮುಂದಿನ ಬಜೆಟ್‌ನಲ್ಲಿ ಹಣ ಇಡಬೇಕು ಅಷ್ಟೇ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

**ಸಿದ್ದರಾಮಯ್ಯ ಜೊತೆ ಚೆನ್ನಾಗಿದ್ದೇನೆ:** ಹಾಗೇನಿಲ್ಲ, ದೂರದ ಬೆಟ್ಟ ನುಣ್ಣಗೆ ಅಂತಾರೆ, ಹಾಗೆ ನಿಮಗೆ ನಾವು ಚೆನ್ನಾಗಿಲ್ಲ ಅನಿಸುತ್ತೆ. ಸಿದ್ದರಾಮಯ್ಯ, ನಾನು ಚೆನ್ನಾಗಿಯೇ ಇದ್ದೇವೆ. ಇಡಿ ದಾಳಿಯಾದಾಗ ಯತೀಂದ್ರ ಬಂದಿದ್ರು. ಸಿದ್ದರಾಮಯ್ಯ ಆಪ್ತರು ಜೊತೆಯಲ್ಲೇ ಇದ್ದಾರೆ. ಸಿದ್ದರಾಮಯ್ಯ ಜೊತೆ ಆಪ್ತ ಆರ್ಮಿ ಇದೆ ಎಂದು ಜಾಣ್ಮೆಯ ಉತ್ತರ ನೀಡಿ ನುಣುಚಿಕೊಂಡರು.ಡಿ ಕೆ ಶಿವಕುಮಾರ್ ಪ್ರಯತ್ನದಿಂದ ಸರ್ಕಾರ ಬಂದರೆ ಆಗಲಿ, ಆಗಬಾರದು ಅಂತ ಏನಿಲ್ಲ. ನಾನು ಅವಕಾಶ ಸಿಕ್ಕರೆ ಸಿಎಂ ಆಗ್ತೀನಿ ಎಂದಿದ್ದೇನೆ. ನಾನೇ ಸಿಎಂ ಎಂದು ಹೇಳಿಕೊಂಡಿಲ್ಲ. ನನಗೆ ಇನ್ನೂ ವಯಸ್ಸಿದೆ, ಆತುರ ಏನಿಲ್ಲ ಎಂದು ಸಿಎಂ ಆಸೆ ಹೊರಹಾಕಿದರು.

### ಕರ್ನಾಟಕದಲ್ಲಿ ಭಾರಿ ವಿಧ್ವಂಸಕ ಕೃತ್ಯಕ್ಕೆ ಸಂಚು; ಇಬ್ಬರು ಶಂಕಿತ ಉಗ್ರರ ಬಂಧನ

• ಉದಯವಾಹಿನಿ, ಚಿಕ್ಕಬಳ್ಳಾಪುರ

ರಾಜ್ಯದಲ್ಲಿ ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ತರಲು ಭಾರಿ ವಿಧ್ವಂಸಕ ಕೃತ್ಯಗಳಿಗೆ ಸಂಚು ರೂಪಿಸುತ್ತಿದ್ದ ಇಬ್ಬರು ಶಂಕಿತ ಉಗ್ರರನ್ನು ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ.

ಕೇಂದ್ರ ಗುಪ್ತಚರ ಇಲಾಖೆಯ ನಿಖರ ಮಾಹಿತಿ ಆಧರಿಸಿ ರಾಜ್ಯ ಪೊಲೀಸ್ ಮತ್ತು ಹೊರರಾಜ್ಯದ ಭಯೋತ್ಪಾದನಾ ನಿಗ್ರಹ ದಳ ಜಂಟಿ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧನಕ್ಕೊಳಪಡಿಸಿದ್ದಾರೆ.ಆರೋಪಿಗಳ ಪೈಕಿ ಒಬ್ಬನನ್ನು ಬುಧವಾರ ಹಾಗೂ ಮತ್ತೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ಆರೋಪಿಗಳ ಗುರುತನ್ನು ಬಹಿರಂಗಪಡಿಸದ ಪೊಲೀಸರು, ಅವರಲ್ಲಿ ಒಬ್ಬ ಚಿಕ್ಕಬಳ್ಳಾಪುರ ಜಿಲ್ಲೆಯ ನಿವಾಸಿಯಾಗಿದ್ದು, ಮತ್ತೊಬ್ಬ ಕೆಲಕಾಲದಿಂದ ಕರ್ನಾಟಕದಲ್ಲಿ ವಾಸಿಸುತ್ತಿದ್ದಾನೆ ಎಂದು ಹೇಳಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೂ ಅವರು ಮಾತನಾಡಿ, ಸಾರ್ವಜನಿಕ ಶಾಂತಿಗೆ ಧಕ್ಕೆ ತರಲು ಈ ಇಬ್ಬರು ಸಂಚು ರೂಪಿಸುವ ಚಟುವಟಿಕೆಯಲ್ಲಿ ಭಾಗಿಯಾಗಿದ್ದರೆಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಸಾಮಾಜಿಕ ಜಾಲತಾಣ ಗುಂಪಿನಲ್ಲಿ ಸಾರ್ವಜನಿಕ ಶಾಂತಿಗೆ ಭಂಗ ತರಲು ಉದ್ದೇಶಿತವಾಗಿದ್ದ ಶಂಕಿತ ಉಗ್ರ ಸಂಚಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಇಬ್ಬರೂ ಭಾಗಿಯಾಗಿದ್ದರು. ಗುಂಪಿನಲ್ಲಿ ಕೆಲವು ಪ್ರಚೋದನಕಾರಿ ಸಂದೇಶಗಳು ಕಂಡುಬಂದಿದ್ದವು. ಅದರ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ. ತನಿಖೆ ಮುಂದುವರಿದಿದೆ. ಇಬ್ಬರನ್ನು ಬಂಧಿಸಿ ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

# ಸದಸ್ಯರು ಸಂಘದ ಶಾಖೆಗಳಲ್ಲೇ ವ್ಯವಹರಿಸಿ: ಮಲ್ಲೇನಹಳ್ಳಿ ಮೋಹನ್

## ತಾಲ್ಲೂಕು ಟಿ.ಎ.ಪಿ.ಸಿ.ಎಂ.ಎಸ್ ರಾಜ್ಯದ ಎ ಶ್ರೇಣಿ ಸಂಘಗಳ ಸಾಲಿಗೆ ಸೇರಿದ್ದರೂ ಇದಕ್ಕೆ ಖಾಯಂ ಕಾರ್ಯದರ್ಶಿಯಿಲ್ಲ

• ಉದಯವಾಹಿನಿ, ರಾಮನಗರ

ಕೆ.ಆರ್.ಪೇಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 40,37,562 ರೂ ನಿವ್ವಳ ಲಾಭಗಳಿಸಿದ್ದು ತನ್ನ ಪ್ರಗತಿ ಸಾಧನೆಯ ಮೂಲಕ ರಾಜ್ಯದ ಎ ಶ್ರೇಣಿ ಸಹಕಾರ ಸಂಘಗಳ ಸಾಲಿಗೆ ಸೇರಿದೆ ಎಂದು ಸಂಘದ ಅಧ್ಯಕ್ಷ ಮಲ್ಲೇನಹಳ್ಳಿ ಮೋಹನ್ ತಿಳಿಸಿದರು.

ಪಟ್ಟಣದ ಟಿ.ಎ.ಪಿ.ಸಿ.ಎಂಎಸ್ ನ ಎಸ್.ಎಂ.ಲಿಂಗಪ್ಪ ಸಹಕಾರ ಭವನದಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

1 ರೈತ ಉಪಯೋಗಿ ವ್ಯಾಪಾರ ಶಾಖೆಗಳಿವೆ

2 ಬ್ಯಾಂಕಿಂಗ್ ಶಾಖೆಯಲ್ಲಿ ನಿಶ್ಚಿತ ಠೇವಣಿ

3 ಭೂಮಿಯ ಮೇಲೆ ಬಂಡವಾಳ ಹಾಕಿ

ಸಂಘದಲ್ಲಿ 6 ಸಾವಿರಕ್ಕೂ ಅಧಿಕ ಸದಸ್ಯರಿದ್ದಾರೆ. ಸಂಘದಲ್ಲಿ ಬ್ಯಾಂಕಿಂಗ್ ಶಾಖೆ, ಗೊಬ್ಬರ, ಪೆಟ್ರೋಲ್ ಬಂಕ್, ಜವಳಿ ಶಾಖೆ ಸೇರಿದಂತೆ ಹತ್ತು ಹಲವು ರೈತ ಉಪಯೋಗಿ ವ್ಯಾಪಾರ ಶಾಖೆಗಳಿವೆ. ಸಂಘ ನಿಯಮಾನುಸಾರ ವ್ಯವಹರಿಸಬೇಕಾದ ಕಾರಣ ಖಾಸಗಿಯವರೊಂದಿಗೆ ವ್ಯಾಪಾರದಲ್ಲಿ ಪೈಪೋಟಿ ನಡೆಸುವುದು ಕಷ್ಟಕರವಾಗುತ್ತಿದೆ.

ಸಂಘದ ಸದಸ್ಯರು ಸಂಘದ ವ್ಯಾಪಾರ ಶಾಖೆಗಳಲ್ಲಿಯೇ ತಮಗೆ ಬೇಕಾದ ವಸ್ತುಗಳನ್ನು ಖರೀದಿಸಿದರೆ ಸಂಘದ ವಹಿವಾಟು ಹೆಚ್ಚಲಿದೆ. ನಮ್ಮ ಬ್ಯಾಂಕಿಂಗ್ ಶಾಖೆಯಲ್ಲಿ ನಿಶ್ಚಿತ ಠೇವಣಿಯಿಡಿ, ಪಟ್ಟಣಕ್ಕೆ ಬಂದಾಗಲೆಲ್ಲ ಸಂಘದ ಪೆಟ್ರೋಲ್ ಬಂಕ್ ನಲ್ಲಿಯೇ ಪೆಟ್ರೋಲ್ ಹಾಕಿಸಿಕೊಳ್ಳಿ.



ಉದಯವಾಹಿನಿ ಚಿತ್ರ

ತಾಲ್ಲೂಕು ಟಿ.ಎ.ಪಿ.ಸಿ.ಎಂ.ಎಸ್ ರಾಜ್ಯದ ಎ ಶ್ರೇಣಿ ಸಂಘಗಳ ಸಾಲಿಗೆ ಸೇರಿದ್ದರೂ ಇದಕ್ಕೆ ಖಾಯಂ ಕಾರ್ಯದರ್ಶಿಯಿಲ್ಲ. ಈಗಿರುವ ಪ್ರಭಾರ ಕಾರ್ಯದರ್ಶಿಗೆ ಬಡ್ತಿ ನೀಡಿ ಅವರನ್ನೇ ಖಾಯಂ ಕಾರ್ಯದರ್ಶಿಯನ್ನಾಗಿ ಮಾಡಿಕೊಳ್ಳಿ ಅಥವಾ ಬೇರೆ ಯಾರದರನ್ನಾದರೂ ಖಾಯಂ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳಿ. ಸಂಘದ ವ್ಯವಹಾರದಲ್ಲಿ ಯಾವುದಾದರೂ ಲೋಪವಾದರೆ ನಾವು ಯಾರನ್ನು ಪ್ರಶ್ನಿಸಬೇಕೆಂದು ಕೆಲವು ಸದಸ್ಯರು ಸಭೆಯಲ್ಲಿ ಪ್ರಶ್ನೆ ಮಾಡಿದರು. ಗ್ರಾಮೀಣ ಪ್ರದೇಶದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಟಿ.ಎ.ಪಿ.ಸಿ.ಎಂ.ಎಸ್ ಸಂಸ್ಥೆಯ ಎ ದರ್ಜೆಯ ಸದಸ್ಯರಾಗಿದ್ದು ಇವುಗಳಿಗೆ ಆಡಿಟ್ ವರದಿಯ ಪ್ರತಿ ನೀಡಿ, ತಾಲ್ಲೂಕು ಟಿ.ಎ.ಪಿ.ಸಿ.ಎಂ.ಎಸ್ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು ಹಿರಿಯ ಸಹಕಾರಿ ಧುರೀಣ ಹಾಗೂ ಕ್ಷೇತ್ರದ ಮಾಜಿ ಶಾಸಕ ದಿವಂಗತ ಎಸ್.ಎಂ.ಲಿಂಗಪ್ಪನವರು. ಸಂಘದ ಆಹ್ವಾನ ಪತ್ರಿಕೆಗಳಲ್ಲಿ ಎಸ್.ಎಂ.ಲಿಂಗಪ್ಪ ಅವರ ಭಾವಚಿತ್ರವನ್ನು ಮುದ್ರಿಸಿ. ವ್ಯಾಪಾರದಲ್ಲಿ ಖಾಸಗಿಯವರಿಗೆ ಪೈಪೋಟಿ ನೀಡುವುದು ಕಷ್ಟಕರವಾದರೆ ಸಂಘದ ಹಣದಲ್ಲಿ ಸ್ಥಿರಾಸ್ತಿ ಖರೀದಿಸಿ ಭೂಮಿಯ ಮೇಲೆ ನಮ್ಮ ಬಂಡವಾಳ ಹಾಕಿ, ಸಂಘದ ಮೂಲಕ ಅತೀಹೆಚ್ಚು ವ್ಯವಹರಿಸುವ ಸದಸ್ಯರನ್ನು ಗುರುತಿಸಿ ಅವರನ್ನು ವಾರ್ಷಿಕ ಸಭೆಯಲ್ಲಿ ಗೌರವಿಸುವ ಮೂಲಕ ವ್ಯಾಪಾರಕ್ಕೆ ಉತ್ತೇಜನ ಕೊಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ಅತೀಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳನ್ನು ವಾರ್ಷಿಕ ಸಭೆಯಲ್ಲಿ ಗೌರವಿಸುವ ಪರಿಪಾಠವಿದೆ. ಇದನ್ನು ತಾಲ್ಲೂಕಿನ ಹೊರಗಿನ ಶಾಲೆಯಲ್ಲಿ ಕಲಿಯುತ್ತಿರುವ ಸದಸ್ಯರ ಮಕ್ಕಳಿಗೂ ವಿಸ್ತರಿಸಿ ಎಂದು ಕೆಲವು ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ನಿರ್ಣಯ ಮಾಡುವಂತೆ ಆಗ್ರಹಿಸಿದರು. ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಸದಸ್ಯರ ಮಕ್ಕಳನ್ನು ಮಾತ್ರ ಗೌರವಿಸಿ ಎಂದು ಕೆಲವರು ಸಲಹೆ ನೀಡಿದರು.

ಸದಸ್ಯರುಗಳಾದ ಟಿ.ಎ.ಪಿ.ಸಿ.ಎಂ.ಎಸ್ ಮಾಜಿ ಅಧ್ಯಕ್ಷ ಬಿ.ಎಲ್.ದೇವರಾಜು, ಚಲುವಯ್ಯ, ಚೌಡೇನಹಳ್ಳಿ ರಾಮಕೃಷ್ಣೇಗೌಡ, ಕೊರಟೀಕೆರೆ ದಿನೇಶ್, ಡಿ.ಎಸ್.ನಾಗೇಂದ್ರ, ಸುಬ್ಬೇಗೌಡ, ಬಸವರಾಜಪ್ಪ, ಬಸ್ತಿ ರಂಗಪ್ಪ ಸೇರಿದಂತೆ ಹಲವರು ಚರ್ಚೆಯಲ್ಲಿ ಭಾಗವಹಿಸಿ ಸಂಘದ ಅಭಿವೃದ್ಧಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಒಟ್ಟಾರೆ ಸಂಘದಲ್ಲಿ ಸದಸ್ಯರು ವ್ಯವಹರಿಸಿದರೆ ಸಂಘವನ್ನು ಮತ್ತಷ್ಟು ಲಾಭದಾಯಕವಾಗಿ ಮುನ್ನಡೆಸಲು ಸಾಧ್ಯ ಎಂದ ಮೋಹನ್ ಸಂಘದ ಮೂಲಕ ರೈತರಿಗೆ ಅವಶ್ಯಕವಾಗಿ ಬೇಕಾದ ರಸಗೊಬ್ಬರ, ಬಿತ್ತನೆ ಬೀಜಗಳನ್ನು ಸ್ಪರ್ಧಾತ್ಮಕ ಬೆಲೆಗಳಲ್ಲಿ ಪೂರೈಕೆ ಮಾಡಲಾಗುತ್ತಿದೆ. ರೈತರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು. -ಎಸ್.ಎಂ.ಲಿಂಗಪ್ಪ

### ಮಕ್ಕಳ ಕಲಿಕಾ ಗೌರವ ಸರ್ಕಾರಿ ಶಾಲೆಗೆ ಮಾತ್ರ ಸೀಮಿತ

ಮಕ್ಕಳ ಕಲಿಕಾ ಗೌರವವನ್ನು ಕೇವಲ ಸರ್ಕಾರಿ ಶಾಲೆಗೆ ಮಾತ್ರ ಸೀಮಿತಗೊಳಿಸಿದರೆ ಮುಂದಿನ ದಿನಗಳಲ್ಲಿ ಅಭಿನಂದನೆಗೆ ಅರ್ಹ ಮಕ್ಕಳೇ ಸಿಗುವುದಿಲ್ಲ ಎಂದು ಅಭಿಪ್ರಾಯಪಟ್ಟ ಸಭೆ ತಾಲ್ಲೂಕು ವ್ಯಾಪ್ತಿಯ ಶಾಲೆಗಳಲ್ಲಿ ಕಲಿಯುತ್ತಿರುವ ಸದಸ್ಯರ ಮಕ್ಕಳನ್ನು ಮಾತ್ರ ಗೌರವಿಸುವಂತೆ ನಿರ್ಣಯಿಸಿದರು.

### ಹಸು ಬಲಿ, ಮತ್ತೊಂದು ಹಸು ಎಳೆದೊಯ್ದ ಶಂಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಬರಗಿ ಗ್ರಾಮದಲ್ಲಿ ಕೆರೆ ಸಮೀಪ ಮೇಯಲು ಬಿಟ್ಟಿದ್ದ ಹಸುಗಳ ಮೇಲೆ ಚಿರತೆ ದಾಳಿ ನಡೆಸಿದೆ. ಒಂದು ಹಸುವನ್ನು ಕೊಂದು ತಿಂದಿದೆ. ಮತ್ತೊಂದು ಹಸುವನ್ನೂ ಚಿರತೆ ಎಳೆದೊಯ್ದಿರುವ ಶಂಕೆ ವ್ಯಕ್ತವಾಗಿದೆ. ಗ್ರಾಮದ ಮಾದಪ್ಪ ಅವರು ಕೆರೆ ಬಳಿ ಹಸುಗಳನ್ನು ಮೇಯಲು ಬಿಟ್ಟಿದ್ದರು. ರೈತ ಸಂಘದ ಮುಖಂಡ ಬರಗಿ ಮಹೇಶ್, ಬಂಡೀಪುರದಲ್ಲಿ ಸಫಾರಿ ಪುನರಾರಂಭಗೊಂಡ ಬಳಿಕ ಮಾನವ-ವನ್ಯಜೀವ ಸಂಘರ್ಷ ಹೆಚ್ಚಾಗುತ್ತಿದೆ. ಚಿರತೆ, ಹುಲಿ ಹಾಗೂ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಅರಣ್ಯ ಇಲಾಖೆ ಸಿಬ್ಬಂದಿಗೆ ಅಗತ್ಯವಾದ ಸಾಧನಗಳು ಹಾಗೂ ಸೌಲಭ್ಯ ಒದಗಿಸಿ, ವನ್ಯಜೀವಿಗಳ ಹಾವಳಿ ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಎರಡು ದಿನಗಳ ಹಿಂದೆಯಷ್ಟೇ ಹೊಂಗಹಳ್ಳಿ ಗ್ರಾಮದಲ್ಲಿ ಚಿರತೆ ದಾಳಿಗೆ ಕರು ಬಲಿಯಾಗಿತ್ತು. ನಿರಂತರವಾಗಿ ಜಾನುವಾರುಗಳ ಮೇಲೆ ಚಿರತೆ ದಾಳಿ ನಡೆಯುತ್ತಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.

ಗಣಪತಿ ದರ್ಶನಕ್ಕೆ ಬರುವ ಸಾರ್ವಜನಿಕರ ವಾಹನಗಳಿಗೆ ಎಚ್‌ಡಿಎಂಸಿ ಮೈದಾನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ

# ಹುಬ್ಬಳ್ಳಿ ಸಾರ್ವಜನಿಕ ಗಣೇಶ ಮೆರವಣಿಗೆಗೆ ಪೊಲೀಸ್ ಕಟ್ಟೆಚ್ಚರ

**ಉದಯವಾಹಿನಿ, ಹುಬ್ಬಳ್ಳಿ**

ನಗರದಲ್ಲಿ ನಡೆಯಲಿರುವ ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ ಸುಗಮವಾಗಿ ನಡೆಸಲು ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ ಹಾಗೂ ಪೊಲೀಸ್ ಇಲಾಖೆ ಸಕಲ ಸಿದ್ಧತೆ ಕೈಗೊಂಡಿದೆ.

ಪ್ರಸ್ತುತ ವರ್ಷ ಅಧಿಕ ಮಾಸದ ಹಿನ್ನೆಲೆಯಲ್ಲಿ 11ನೇ ದಿನದ ಬದಲಾಗಿ 12ನೇ ದಿನಕ್ಕೆ ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಗುತ್ತಿದೆ. ಪ್ರಮುಖ ಆಕರ್ಷಣೆಯಾದ'ದಾಜಿಬಾನ್‌ಪೇಟೆಯ 'ಹುಬ್ಬಳ್ಳಿ ಕಾ ರಾಜಾ' ಮರಾಠಾ ಗಲ್ಲಿಯ "ಹುಬ್ಬಳ್ಳಿ ಚಾ ಮಹಾ ರಾಜಾ" ಗಣಪತಿ ಸೇರಿದಂತೆ 100ಕ್ಕೂ ಹೆಚ್ಚು ಸಾರ್ವ ಜನಿಕ ಮೂರ್ತಿಗಳು ಇಂದು ವಿಸರ್ಜನೆ ಆಗಲಿವೆ.

25 ಅಡಿ ಎತ್ತರದ 'ಹುಬ್ಬಳ್ಳಿ ಕಾ ರಾಜಾ' ಸೇರಿದಂತೆ ಬೃಹತ್ ಗಣೇಶ ಮೂರ್ತಿಗಳ ಮೆರವಣಿಗೆಯು ದುರ್ಗದಬೈಲ್‌ನಿಂದ ಪ್ರಾರಂಭವಾಗಿ ಬ್ರಾಡ್ ವೇ, ಮರಾಠಾಗಲ್ಲಿ ಕ್ರಾಸ್, ಮೇದಾರ ಓಣಿ, ದಾಜಿಬಾನಪೇಟೆ, ಸಂಗೊಳ್ಳಿ ರಾಯಣ್ಣ ವೃತ್ತ, ಕೋರ್ಟ್ ವೃತ್ತ, ಕ್ಲಬ್ ಹರಸ್ತೆ ಮೂಲಕ ಹೊಸೂರ ವೃತ್ತದವರೆಗೆ




ಸಾಗಲಿದೆ. ಬಳಿಕ ಹೊಸೂರು ಬಾವಿಯಲ್ಲಿ ಮೂರ್ತಿಗಳ ವಿಸರ್ಜನೆ ನಡೆಯಲಿದೆ. ಉಳಿದವು ನಿಲಿಜನ್ ರಸ್ತೆ ಮೂಲಕ ಇಂದಿರಾ ಗಾಜಿನ ಮನೆ ಬಾವಿ ಹಾಗೂ ಹೊಸೂರ ಬಾವಿ ತಲುಪಲಿವೆ.

ಗಣೇಶ ವಿಸರ್ಜನೆ ಮೆರವಣಿಗೆ ವೀಕ್ಷಣೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಅಷ್ಟೇ ಅಲ್ಲದೆ, ಹೊರರಾಜ್ಯ ಗಳಿಂದಲೂ ಜನರು ಆಗಮಿಸಲಿದ್ದಾರೆ. ಹೀಗಾಗಿ ಹಲವು ಮಾರ್ಗ ಬದಲಾವಣೆ ಮಾಡಲಾಗಿದೆ. ಗದಗ ರಸ್ತೆಯಿಂದ ಕೆ.ಎಚ್.ಪಾಟೀಲ ರಸ್ತೆ, ಸರ್ವೋದಯ ವೃತ್ತದ ಮೂಲಕ ಹಾಗೂ ನವಲಗುಂದ ರಸ್ತೆ, ಸುಳ್ಳ ರಸ್ತೆಯಿಂದ ಬೆಂಗಳೂರು, ಪೂನಾಗೆ ಸಂಚರಿಸುವ

1. 25 ಅಡಿ ಎತ್ತರದ 'ಹುಬ್ಬಳ್ಳಿ ಕಾ ರಾಜಾ
2. ವಾಹನ ಸಂಚಾರ; ಮಾರ್ಗ ಬದಲಾವಣೆ
3. ಎಚ್ಚರಿಕೆ ವಹಿಸಲು ಸಾರ್ವಜನಿರಲ್ಲಿ ಮನವಿ

ಲಘು ವಾಹನಗಳು ರಮೇಶ ಭವನ, ಬೆಂಗೇರಿ, ಗೋಪನಕೊಪ್ಪ, ಉಣಕಲ್ ಪಿ.ಬಿ. ರಸ್ತೆ, ಗೋಕುಲ ರಸ್ತೆ ಮೂಲಕ ಬೈಪಾಸ್ ಮಾರ್ಗಬಳಸಬಹುದು.

ಕಾರವಾರ ರಸ್ತೆ, ಕಲಘಟಗಿ ರಸ್ತೆ, ಗಟ್ಟೂರು ಕ್ರಾಸ್‌ನಿಂದ ಬರುವ ವಾಹನಗಳು ಇಂಡಿ ಪಂಪ್ ಸರ್ಕಲ್ ಬದಲಿಗೆ ಬೈಪಾಸ್ ಮಾರ್ಗವಾಗಿ ಗೋಕುಲ ರಸ್ತೆಗೆ ಹಾಗೂ ಹೊಸೂರು, ಗೋಕುಲ ರಸ್ತೆಯಿಂದ

> ಜನಸಂದಣಿಯಲ್ಲಿ ಚಪ್ಪಲಿಗಿಂತ ಶೂ ಧರಿಸುವುದು ಸುರಕ್ಷಿತ. ಮೆರವಣಿಗೆಗಳು ಅಥವಾ ಡಿಜೆ ಸಿಸ್ಟಂಗಳ ನಡುವೆ ಯಾವುದೇ ಸ್ಪರ್ಧೆ ಬೇಡ. ಶಾಂತಿ ಮತ್ತು ಸೌಹಾರ್ದತೆ ಕಾಪಾಡಬೇಕು. ವಿಸರ್ಜನಾ ಸ್ಥಳಗಳಲ್ಲಿ ಮಕ್ಕಳನ್ನು ನೀರು ಹಾಗೂ ಕ್ರೇನ್‌ಗಳಿಂದ ದೂರವಿಡಲು ಪೋಷಕರಲ್ಲಿ ಮನವಿ.
>
> – ಭೂಷಣ್ ಬೊರಸೆ, ಕಮಿಷನರ್

ಕಾರವಾರ ರಸ್ತೆಗೆ ಹೋಗುವ ವಾಹನಗಳು ತಾರಿಹಾಳ ಬೈಪಾಸ್ ಮೂಲಕ ಹಾಗೂ ಭಾರಿ ವಾಹನಗಳು ನಗರ ಪ್ರವೇಶಿಸದೆ ಬೈಪಾಸ್ ರಸ್ತೆ ಮೂಲಕ ಸಂಚರಿಸಬಹುದು. ಗಣಪತಿ ದರ್ಶನಕ್ಕೆ ಬರುವ ಸಾರ್ವಜನಿಕರ ವಾಹನಗಳಿಗೆ ಗಿರಣಿಚಾಳ ಮೈದಾನ, ನೆಹರೂ ಮೈದಾನ, ಮೂರುಸಾವಿರ ಮಠದ ಮೈದಾನ, ಲ್ಯಾಮಿಂಗ್ಟನ್ ಶಾಲೆಯ ಮೈದಾನ, ಎಚ್‌ಡಿಎಂಸಿ ಮೈದಾನ, ಚಿಟಗುಪ್ಪಿ ಆಸ್ಪತ್ರೆ ಮೈದಾನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು: ಸಿ ಎಚ್ ಪಾಟೀಲ್




**ಉದಯವಾಹಿನಿ, ಯಲಬುರ್ಗಾ**

ಮುಸ್ಲಿಂ ಸಮಾಜದವರು ಅತೀ ಹೆಚ್ಚು ಉದ್ಯೋಗ ಪ್ರಿಯರು ಅವರು ಶಿಕ್ಷಣದಿಂದ ಬಹಳ ಹಿಂದುಳಿದಿದ್ದು, ಎಲ್ಲಾ ಸಮಾಜದವರಂತೆ ಅವರೂ ಕೂಡ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಮಾಜಿ ಜಿ. ಪಂ. ಸದಸ್ಯ ಸಿ ಎಚ್ ಪೊಲೀಸ್ ಪಾಟೀಲ್ ಅವರು ತಿಳಿಸಿದರು.

ತಾಲ್ಲೂಕಿನ ಮುಧೋಳ ಗ್ರಾಮದ ಹಜರತ್ ಮೈಬುಬೆ ಸುಬಾನಿ ದರ್ಗಾ ಹಳಪೇಟೆ ಗ್ಯಾರವಿ ಷರೀಫ್ ಸರ್ವ ಧರ್ಮ ಸಮ್ಮೇಳನ ಕಾರ್ಯಕ್ರಮ ಜ್ಯೋತಿ ಬೆಳಗಿಸುವುದರ ಮೂಲಕ ಮಾತನಾಡಿ ಮುಸ್ಲಿಂ ಸಮಾಜದ ಪ್ರಗತಿಗಾಗಿ ಹಗಲಿರುಳು ಶ್ರಮಿಸುತ್ತಿದೆ. ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ಮುಸ್ಲಿಂ ಸಮಾಜದರು ಶೈಕ್ಷ ಣಿಕವಾಗಿ ಹಾಗೂ ಆರ್ಥಿಕವಾಗಿ ಮುಂದೆ ಬರಬೇಕು ಎಂದರು. ಮಾಜಿ ವಕೀಲರ ಸಂಘದ ಅಧ್ಯಕ್ಷರು ಆನಂದ್ ಉಳಗಡ್ಡಿ ಅವರು ಮಾತನಾಡಿ ಹಿಂದೂ, ಮುಸಲ್ಮಾನರ ಭಾವೈಕ್ಯತೆ ಕೇಂದ್ರವಾದ ಮುಧೋಳ ಗ್ರಾಮದಲ್ಲಿ ಹಿಂದೂ, ಮುಸಲ್ಮಾನರ ಧಾರ್ಮಿಕ ಆಚರಣೆಗೆ ಎಲ್ಲರೂ ಒಂದಾಗಿ ಬಾಳಬೇಕೆಂಬುದು ಈ ಕಾರ್ಯಕ್ರಮದ ಉದ್ದೇಶ ಎಂದರು. ನಂತರ ಮಾತನಾಡಿದ ಡಾ. ಅಂದಾನಯ್ಯ ಶಾಡ್ಲಿಗೇರಿ ಮಠ. ಬಸವರಾಜ್ ಮಠದ. ಅಲ್ಲಸಾಬ್ ಕಟ್ಟಿಮನಿ. ಅವರು ಮಾತನಾಡಿ ಪ್ರತಿಯೊಂದು ಸಮಾಜವು ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಬೇಕು ಎಂದರು.

ಹಜರತ್ ಮೌಲನ್ ಆಮೀರ್ ಅಶ್ ಅರೀ ಬನ್ನೂರ್ ಅವರು ಮೈಬೂಬ ಸುಬಾನಿ ಅವರ ನೆಡೆದು ಬಂದ ಜೀವನದ ಬಗ್ಗೆ ಹಜರತ್ ಅಬ್ದುಲ್ ಖಾದಿರ್ ಜಿಲಾನಿ ಅವರು ಇಸ್ಲಾಮಿಕ್ ಇತಿಹಾಸದ ಅತ್ಯಂತ ಪ್ರಭಾವಶಾಲಿ ಸೂಫಿ ಸಂತ, ವಿದ್ವಾಂಸ ಮತ್ತು ಆಧ್ಯಾತ್ಮಿಕ ಗುರುವಾಗಿದ್ದರು. ಇವರನ್ನು ಮುಸ್ಲಿಂ ಸಮುದಾಯದಲ್ಲಿ ಅತ್ಯಂತ ಗೌರವದಿಂದ 'ಮೆಹಬೂಬ್–ಎ–ಸುಭಾನಿ' (ದೇವರಿಗೆ ಅತ್ಯಂತ ಪ್ರಿಯವಾದವರು) ಎಂದು ಕರೆಯಲಾಗುತ್ತದೆ ಎಂದು ಉಪನ್ಯಾಸ ನೀಡಿದರು.

ಹಜರತ್ ಸೈಯದ್ ಶಹ ಮರ್ತುಜ್ ಹುಸೇನಿ ಯುಲ್ ಖಾದರಿ ಹನಮಸಾಗರ್ ಇಲಕಲ್ಲ. ಅವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದರು. ಕಾಶಿಮಸಾಬ್ ಯಮನೂರಸಾಬ ಕೊಪ್ಪಳ ಅಧ್ಯಕ್ಷರು ಹಜರತ್ ಮಹಬುಬ್ ಸುಬಾಹಾನಿ ದರ್ಗಾ ಕಮಿಟಿ ಹಳಪೇಟೆ ಅಧ್ಯಕ್ಷತೆ ವಹಿಸಿದರು.

ಇದೆ ಸಂದರ್ಭದಲ್ಲಿ ಖಾದಿರಬಾಷ ತೋಳಗಲ್. ಚಂದ್ರು ದೇಸಾಯಿ. ಅಪ್ಪಣ್ಣ ಪಲ್ಲೆದ. ಹೇಮರಡ್ಡಿ ರಡ್ಡೆರ. ಬಸವರಾಜ್ ನೀಡಗುಂದಿ. ಮಹಾಂತೇಶ್ ಗಾಣಿಗೇರ. ರುದ್ರಪ್ಪ ಹುನಗುಂದ. ಯಲ್ಲಪ್ಪ ಹುನಗುಂದ. ನಾಗಪ್ಪ ಓಲಿ. ಶಿವಶರಣಪ್ಪ ಬಳಿಗಾರ್. ಹಜರತ್ ಮಹಬುಬ್ ಸುಬಾಹಾನಿ ಕಮಿಟಿಯ ಗೌರವ ಅಧ್ಯಕ್ಷರು ಅಬ್ದುಲ್ ಘನೀಬಸಾಬ ನೂರಭಾಷ. ರಸೂಲ್ ಸಾಬ್ ಕಿನ್ನಾಳ. ಹೊನ್ನೂರುಸಾಬ ವಟಪರವಿ. ಮಾಬುಸಾಬ ಎಚ್ ತೋಳಗಲ್. ನಿಜಾಮುದ್ದೀನ್ ನೂರಭಾಷ. ಮಾರ್ತುಜಸಾಬ ನೂರಭಾಷ. ಸದ್ದಾಮ್ ಹುಸೇನ್ ನದಾಫ್. ಹುಸೇನಸಾಬ ಕ್ಯಾಡಾದ್. ಬಾಬುಸಾಬ ಲಕ್ಕಲಕಟ್ಟಿ ಹುಸ್ಮಾನ್ ವಟಪರವಿ. ಸುನ್ನಿ. ಹಳಪೇಟೆ ಹಾಗೂ ಹಜರತ್ ಟಿಪ್ಪು ಸುಲ್ತಾನ್ ನೌ ಜವಾನ್ ಕಮಿಟಿ ಯುವಕರು ಹಾಗೂ ಗ್ರಾಮದ ಗುರು ಹಿರಿಯರು ಎಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

## ಬಸ್ ನಿಲ್ದಾಣ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

**ಉದಯವಾಹಿನಿ, ಸುರಪುರ**

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಪರಸನಹಳ್ಳಿ ಗ್ರಾಮದಲ್ಲಿ ಬಸ್ ನಿಲ್ದಾಣ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಿ ಪೂರ್ಣಗೊಳಿಸುವಂತೆ ಕೋರಿ ಗ್ರಾಮಸ್ಥರ ಪರವಾಗಿ ಪ್ರಶಾಂತ ಎಸ್ ದೊಡ್ಡಮನಿ (ಕಾನೂನು ವಿದ್ಯಾರ್ಥಿ) ಅವರು ಸಾರಿಗೆ ಸಚಿವರಾದ ಮಾನ್ಯ ಗೌರವಾನ್ವಿತ ಶ್ರೀ ಬೈರತಿ ಸುರೇಶ್ ಅವರಿಗೆ ಮನವಿ ಸಲ್ಲಿಸಿದ್ದಾರೆ.




ಪರಸನಹಳ್ಳಿ ಗ್ರಾಮದ ನಿವಾಸಿಗಳಾದ ನಾವು, ನಮ್ಮ ಗ್ರಾಮದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಸುಸಜ್ಜಿತ ಬಸ್ ನಿಲ್ದಾಣದ ಅಗತ್ಯಬಹಳ ವರ್ಷಗಳಿಂದ ಇದೆ. ನಮ್ಮ ಗ್ರಾಮಕ್ಕೆ ಪ್ರತಿದಿನ ವಿದ್ಯಾರ್ಥಿಗಳು, ರೈತರು, ಕೂಲಿ ಕಾರ್ಮಿಕರು, ಮಹಿಳೆಯರು, ವೃದ್ಧರು ಹಾಗೂ ಸಾರ್ವಜನಿಕರು ಬಸ್‌ಗಳ ಮೂಲಕ ವಿವಿಧ ಸ್ಥಳಗಳಿಗೆ ಪ್ರಯಾಣಿಸುತ್ತಾರೆ. ಆದರೆ ಪ್ರಸ್ತುತ ಸೂಕ್ತವಾದ ಬಸ್ ನಿಲ್ದಾಣ ವ್ಯವಸ್ಥೆ ಇಲ್ಲದ ಕಾರಣ ಸಾರ್ವಜನಿಕರು ರಸ್ತೆ ಬದಿಯಲ್ಲಿ ನಿಂತು ಬಸ್‌ಗಾಗಿ ಕಾಯಬೇಕಾದ ಪರಿಸ್ಥಿತಿ ಇದೆ. ಮಳೆಗಾಲದಲ್ಲಿ ಮಳೆ, ಬೇಸಿಗೆಯಲ್ಲಿ ಬಿಸಿಲು ಹಾಗೂ ರಾತ್ರಿ ವೇಳೆಯಲ್ಲಿ ಪ್ರಯಾಣಿಕರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಮತ್ತು ರಸ್ತೆ ಬದಿಯಲ್ಲಿ ಬಸ್‌ಗಳು ನಿಲ್ಲುವುದರಿಂದ ವಾಹನ ಸಂಚಾರಕ್ಕೂ ಮತ್ತು ಮಹಿಳೆಯರು ಮತ್ತು ಮಕ್ಕಳಿಗೆ ಪುಡಿ ರೋಡ್‌ಗಳ ನಡುವೆ ದೃಷ್ಟಿ ತಾಗುವಂತಾಗಿದೆ ಹಾಗೂ ದನ–ಕರುಗಳು ತೊಂದರೆಗೆ ಒಳಗಾಗಿ ಅಂಗವೈಕಲ್ಯ ಉಂಟಾಗುವ ಸಾಧ್ಯತೆ ಇದೆ. ವಿಶೇಷವಾಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಮಹಿಳೆಯರು ಮತ್ತು ವೃದ್ಧರಿಗೆ ಹೆಚ್ಚಿನ ಅನಾನುಕೂಲವಾಗುತ್ತಿದೆ. ಆದ್ದರಿಂದ ನಮ್ಮ ಗ್ರಾಮದ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿರುವ ಬಸ್ ನಿಲ್ದಾಣ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಪರಿಶೀಲಿಸಿ, ಅಗತ್ಯ ಅನುದಾನ ಬಿಡುಗಡೆ ಮಾಡಿ, ಕಾಮಗಾರಿಗೆ ಶೀಘ್ರ ಚಾಲನೆ ನೀಡುವಂತೆ ತಮ್ಮಲ್ಲಿ ವಿನಂತಿಸುತ್ತೇವೆ.

## ಬರ ಘೋಷಣೆ ಮೊದಲೇ ಶ್ರೇಯಕ್ಕೆ ಕಸರತ್ತು

**ಉದಯವಾಹಿನಿ, ಕುಷ್ಟಗಿ**

ತಾಲ್ಲೂಕು ಬರಪೀಡಿತ ಪ್ರದೇಶಗಳ ಪಟ್ಟಿಯಲ್ಲಿ ಸೇರುವ ಸಾಧ್ಯತೆ ಹೆಚ್ಚಿದೆ. ಸರ್ಕಾರ ಇನ್ನೂ ಬರಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಿಲ್ಲ. ಬರ ಸಮಗ್ರ ಮೌಲ್ಯಮಾಪನ (ಗೌಂಡ್ ಟ್ರಂಥಿಂಗ್) ಪ್ರಕ್ರಿಯೆಗೆ ಇನ್ನೂ 4 ದಿನ ಬಾಕಿ ಇದೆ. ಘೋಷಣೆಗೆ ಮೊದಲೇ 'ಯಶಸ್ಸಿನ ಶ್ರೇಯಸ್ಸು ಪಡೆಯಲು ಬಿಜೆಪಿ–ಕಾಂಗ್ರೆಸ್ ಮಧ್ಯೆ ಪೈಪೋಟಿ ಶುರುವಾಗಿದೆ. ಮಳೆ ಇಲ್ಲದೆ ಬರ ಪರಿಸ್ಥಿತಿ ತೀವ್ರಗೊಂಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಭೇಟಿ ನೀಡಿದ್ದು ಇದೇ ಮೊದಲ ತಾಲ್ಲೂಕು. ಆದರೆ, ಈವರೆಗೂ ಸರ್ಕಾರ ಬರಪೀಡಿತ ತಾಲ್ಲೂಕೆಂದು ಘೋಷಿಸಿಲ್ಲ.




> **BJP–ಕಾಂಗ್ರೆಸ್ ಮಧ್ಯೆ ಪೈಪೋಟಿ**
>
> **ಸರ್ಕಾರಕ್ಕೆ ಎಚ್ಚರಿಕೆ**
>
> ರೈತರ ಪರವಾಗಿ ಸ್ವತಃ ಬೀದಿಗಿಳಿದ ನಿಡಸೋಸಿಯ ಅಭಿನವ ಕರಿಬಸವ ಸ್ವಾಮೀಜಿ ಹಾಗೂ ಸಂಘಟನೆಗಳಿಂದ ಜಿಲ್ಲಾ ಕೇಂದ್ರದವರೆಗೆ ಪಾದಯಾತ್ರೆ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡುವ ಪ್ರಯತ್ನವೂ ನಡೆಯಿತು.

ಹೋಬಳಿ ಕೇಂದ್ರದ ಬಂದ್‌ನಿಂದ ಹಿಡಿದು ಅನೇಕ ರೀತಿಯಲ್ಲಿ ಪ್ರತಿಭಟನೆಗಳು ತಾಲ್ಲೂಕಿನಲ್ಲಿ ನಡೆದಿವೆ. ರೈತರು ಅನೇಕ ಗ್ರಾಮಗಳಿಂದ ಪಾದಯಾತ್ರೆ ನಡೆಸಿದ್ದಾರೆ. ಬರ ಪರಿಸ್ಥಿತಿ ಕೆಲವರು ವೈಯಕ್ತಿಕ, ರಾಜಕೀಯ ಲಾಭ ಪಡೆಯುವುದಕ್ಕೆ ಅವಕಾಶ ಕಲ್ಪಿಸಿತು ಎನ್ನುವ ಮಾತು ಕೇಳಿಬಂದಿವೆ. ಇನ್ನೂ ಕೆಲವರು ಇದನ್ನೇ ವಿಜಯೋತ್ಸವದ ಮಾದರಿಯಲ್ಲಿ ಹೇಳಿಕೆ ನೀಡುತ್ತಿದ್ದಾರೆ.

ಶಾಸಕ ದೊಡ್ಡನಗೌಡ ಪಾಟೀಲರು ಬೃಹತ್ ಹೋರಾಟ ನಡೆಸಿ ಸರ್ಕಾರದ ಗಮನಸೆಳೆದ ಕಾರಣದಿಂದಲೇ ಸರ್ಕಾರ ಬರ ಪೀಡಿತ ಪ್ರದೇಶವೆಂದು ಘೋಷಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂಬ ವಾದ ಬಿಜೆಪಿಗರದ್ದು.

ಮಾಜಿ ಶಾಸಕ ಅಮರೇಗೌಡ ಬಯ್ಯಾಪುರ ಸರ್ಕಾರದ ಮಟ್ಟದಲ್ಲಿ ಹೆಚ್ಚು ಪ್ರಯತ್ನ ನಡೆಸಿ ಬರಪೀಡಿತ ತಾಲ್ಲೂಕು ಘೋಷಿಸುವಲ್ಲಿ ನಡೆಸಿದ ಪ್ರಯತ್ನ ಫಲ ನೀಡಿದೆ ಎಂಬುದು ಕಾಂಗ್ರೆಸ್ಸಿಗರ ವಾದ. ಈ ವಿಷಯ ಜಾಲತಾಣಗಳಲ್ಲಿ ಚರ್ಚೆಗೆ ಒಳಗಾಗಿದೆ. ಬರಪೀಡಿತ ತಾಲ್ಲೂಕು ಘೋಷಿಸಿ ಎಂದು ಒತ್ತಾಯಿಸುವ ಹೋರಾಟ ತಾಲ್ಲೂಕಿನಲ್ಲಿ ವೈಯಕ್ತಿಕ, ಸಾಮೂಹಿಕ ರೀತಿಯಲ್ಲಿ ದೊಡ್ಡ ಮಟ್ಟದಲ್ಲಿ ನಡೆದಿದೆ.

## ಎಸ್‌ಐಆರ್ ಹೆಸರಲ್ಲಿ 1.5 ಕೋಟಿ ಮತ ಕಟ್




> ಜ್ಞಾನೇಶ್ ಕುಮಾರ್ ರಾಜೀನಾಮೆವರೆಗೂ ನಮ್ಮ ಹೋರಾಟ ನಿಲ್ಲಲ್ಲ. ಬಡವನ ವೋಟಿಗೆ ಕತ್ತರಿ ಪ್ರಯೋಗಿಸಲಾಗಿದೆ. ವಿಐಪಿ ವೋಟಿಗೆ ಮನ್ನಣೆ ನೀಡಲಾಗಿದ್ದು, ಇದು ಮತದಾರರ ಹಕ್ಕು ಕಸಿಯುವ ಷಡ್ಯಂತ್ರ.
>
> – ಪ್ರಕಾಶ್ ರಾಜ್, ಬಹುಭಾಷಾ ನಟ

**ಉದಯವಾಹಿನಿ, ಕಾರಟಗಿ**

ಈ ದೇಶದಲ್ಲಿ ಬಡವನು, ಶ್ರೀಮಂತನು, ಅಕ್ಷರಸ್ಥನೋ, ಅನಕ್ಷರಸ್ಥನೋ ಎಲ್ಲರಿಗೂ ವೋಟಿನ ಹಕ್ಕು ಸಮಾನ. ಆದರೆ ಎಸ್‌ಐಆರ್ ಹೆಸರಲ್ಲಿ ಕೇಂದ್ರ ಸರ್ಕಾರ ಬಡವರ ಮತದಾನದ ಹಕ್ಕನ್ನೇ ಕಸಿಯುತ್ತಿರುವುದು ಖಂಡನಾರ್ಹ ಎಂದು ಬಹುಭಾಷಾ ನಟ, ಸಾಮಾಜಿಕ ಹೋರಾಟಗಾರ ಪ್ರಕಾಶ್ ರಾಜ್ ಕೇಂದ್ರದ ವಿರುದ್ಧ ಗುಡುಗಿದರು.

ಕರ್ನಾಟಕದಲ್ಲಿ ಎಸ್‌ಐಆರ್ ಪರಿಶೋಧ ಹಾಗೂ ಪ್ರತಿರೋಧ ಪ್ರವಾಸ ದ ಭಾಗವಾಗಿ ಸೆ.24 ರಂದು ಕೊಪ್ಪಳದಲ್ಲಿ ಹಮ್ಮಿಕೊಂಡ ಬೃಹತ್ ಕಾರ್ಯಕ್ರಮಕ್ಕೆ ತೆರಳುವ ಮಾರ್ಗಮಧ್ಯೆ ಕಾರಟಗಿಯ ಕನಕದಾಸ ವೃತ್ತದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

**1.5 ಕೋಟಿ ಮತ ಕಟ್ – ಇದು ಪ್ರಜಾಪ್ರಭುತ್ವದ ಕೊಲೆ:** ಕರ್ನಾಟಕದಲ್ಲಿ 1 ಕೋಟಿ 08 ಲಕ್ಷ ಜನರನ್ನು ಮತದಾರರ ಪಟ್ಟಿಯಿಂದ ತೆಗೆದಿದ್ದಾರೆ. 43 ಲಕ್ಷ ಜನರ ಮ್ಯಾಪಿಂಗ್ ಮ್ಯಾಚ್ ಆಗಿಲ್ಲವೆಂದು ತೆಗೆದಿದ್ದಾರೆ. ಒಟ್ಟಾರೆ ಒಂದೂವರೆ ಕೋಟಿ ಮತದಾರರನ್ನು ಎಸ್‌ಐಆರ್ ಹೆಸರಲ್ಲಿ ಡಿಲೀಟ್ ಮಾಡಿದ್ದಾರೆ. ಬಂಗಾಳದಲ್ಲಿ 38 ಲಕ್ಷ ಮತದಾರರನ್ನು ತೆಗೆದಿದ್ದಾರೆ. ವಿಐಪಿ, ಗಣ್ಯರ ಹೆಸರನ್ನು ಕೆಲವೇ ಗಂಟೆಯಲ್ಲಿ ಮತ್ತೆ ಸೇರಿಸುತ್ತಾರೆ, ಆದರೆ ಬಡವ, ಸಾಮಾನ್ಯ ಮತದಾರ ಮಾತ್ರ ಅಲೆದಾಡಬೇಕು. ಇದು ಒಪ್ಪಲು ಸಾಧ್ಯವೇ ಇಲ್ಲ ಎಂದರು.

**ಮುಂದಿನ ಹೋರಾಟದ ರೂಪುರೇಷೆ:** ರಾಜ್ಯಾದ್ಯಂತ 100 ಆಯ್ದ ಮತಗಟ್ಟೆಗಳಿಗೆ ಭೇಟಿ ನೀಡಿ ಸಾಮಾಜಿಕ ಪರಿಶೋಧನೆ ನಡೆಸಿ, ಸಂತ್ರಸ್ತ ಮತದಾರರಿಂದ ದಾಖಲೆ ಸಂಗ್ರಹಿಸಲಾಗುತ್ತಿದೆ. ಈ ವರದಿಯನ್ನು ಸೆ.30 ರಂದು ಮುಖ್ಯಮಂತ್ರಿ ಹಾಗೂ ಸಚಿವರಿಗೆ ಸಲ್ಲಿಸಲಾಗುವುದು., ಅ.1 ರಂದು ದೆಹಲಿಯಲ್ಲಿ ರಾಷ್ಟ್ರಮಟ್ಟದ ಸಭೆ ಹಾಗೂ ಹೋರಾಟ ಹಮ್ಮಿಕೊಳ್ಳಲಾಗಿದೆ., ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡುವವರೆಗೂ ಹಾಗೂ ಎಸ್‌ಐಆರ್ ಪ್ರಕ್ರಿಯೆ ರದ್ದಾಗಿ ಕರಡು ಮತದಾರರ ಪಟ್ಟಿ ತಿದ್ದುಪಡಿಯಾಗುವವರೆಗೂ ಹೋರಾಟ ನಿಲ್ಲಲ್ಲ ಎಂದು ಪ್ರಕಾಶ್ ರಾಜ್ ಎಚ್ಚರಿಕೆ ನೀಡಿದರು.

S.I.R ಅನ್ನು ಕರ್ನಾಟಕ ಒಪ್ಪಲು ಸಾಧ್ಯವೇ ಇಲ್ಲ – No SIR, ಎಂಬ ಘೋಷಣೆಯೊಂದಿಗೆ ಅವರು ಕೊಪ್ಪಳದತ್ತ ತೆರಳಿದರು.

ಈ ಸಂದರ್ಭದಲ್ಲಿ ಸಚಿವ ಶಿವರಾಜ್ ತಂಗಡಗಿ ಪುತ್ರ ಶಶಾಂಕ್ ತಂಗಡಗಿ, ಬ್ಲಾಕ್ ಅಧ್ಯಕ್ಷ ಶರಣೇಗೌಡ ಮಾಲಿಪಾಟೀಲ್, ಹಿರಿಯ ಮುಖಂಡರಾದ ಶಿವಾರೆಡ್ಡಿ ನಾಯಕ್, ನಾಗರಾಜ್ ಅರಳಿ, ಪ್ರದೀಪ್ ಹಿರೇಮಠ,ಇನಾಯತ್ ರ್ಯಾನ್, ಸಿದ್ದಲಿಂಗ ಬಪ್ಪೂರು, ಕರ್ನಾಟಕ ರೈತ ಸಂಘ ಹಸಿರು ಸೇನೆ ಶರಣೆಗೌಡ ದೊಡ್ಡಮನಿ, ವಿವಿಧ ಜಾತ್ಯತೀತ, ಪ್ರಗತಿಪರ, ದಲಿತಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ ಆರೋಪಕ್ಕೆ ಬಿಜೆಪಿ ಶಾಸಕ ಅಭಯ್ ಪಾಟೀಲ ಇಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಬಿ.ಕೆ. ಹರಿಪ್ರಸಾದ ವಿರುದ್ಧ ಬಿಜೆಪಿ ಶಾಸಕ ಅಭಯ್ ಪಾಟೀಲ ಕಿಡಿ

**ಉದಯವಾಹಿನಿ, ಬೆಳಗಾವಿ**

ಅಲ್ಪಸಂಖ್ಯಾತ ಸಮುದಾಯದ ಮತದಾರರ ಹೆಸರನ್ನು ಮತ ಪಟ್ಟಿಯಿಂದ ತೆಗೆದು ಹಾಕುವಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ ಎಂಬ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ ಆರೋಪಕ್ಕೆ ಬಿಜೆಪಿ ಶಾಸಕ ಅಭಯ್ ಪಾಟೀಲ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಹರಿಪ್ರಸಾದ ಅವರು ಶಾಲೆ ಕಲಿತಿದ್ದಾರೊ ನನಗೆ ಗೊತ್ತಿಲ್ಲ. ನಾನು ಕೊಟ್ಟಿದ್ದ ಪತ್ರ ಬಹುಶಃ ಅವರು ತಿರುಚಿರಬಹುದು ಅಥವಾ ಅವರಿಗೆ ಓದೋಕೆ ಬರುವುದಿಲ್ಲ. ಇಲ್ಲವೇ ಅಧ್ಯಕ್ಷರಾದ ಮೇಲೆ ಮೆಂಟಲ್ ಆಗಿರಬೇಕು ಎಂದು ಬಿಜೆಪಿ ಶಾಸಕ ಕಿಡಿಕಾರಿದ್ದಾರೆ.ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ 2,598 ಮತದಾರರ ಹೆಸರನ್ನು ಮತಪಟ್ಟಿಯಿಂದ ತೆಗೆದುಹಾಕುವಂತೆ ಬಿಜೆಪಿ ಶಾಸಕ ಅಭಯ್ ಪಾಟೀಲ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದು, ಹೀಗೆ ಹೆಸರು ತೆಗೆಯಲು ಮುಂದಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಬಿ.ಕೆ.ಹರಿಪ್ರಸಾದ್ ನಿನ್ನೆ ಆರೋಪಿಸಿದ್ದರು. ಇದಕ್ಕೆ ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಅಭಯ್ ಪಾಟೀಲ ತಿರುಗೇಟು ಕೊಟ್ಟಿದ್ದಾರೆ.

ಬೆಳಗಾವಿ ದಕ್ಷಿಣ ವಿಧಾನಸಭೆ ಕ್ಷೇತ್ರದ ಮತ ಯಾದಿಯಲ್ಲಿ ಚುನಾವಣಾ ಆಯೋಗ ನೀಡಿರುವ ಕರಡು ಪ್ರತಿಯನ್ನು ಪರಿಶೀಲನೆ ನಡೆಸಿದಾಗ, ಎಸ್‌ಐಆರ್ ಪ್ರಕ್ರಿಯೆ ನಂತರವೂ ಕ್ಷೇತ್ರದಲ್ಲಿ ನಕಲಿ ಮತದಾರರು ಇರುವುದು ಕಂಡು ಬಂದಿದೆ. ಅಂತಹ ನಕಲಿ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕುವಂತೆ ಸಂಬಂಧಿಸಿದ ಚುನಾವಣಾ ಅಧಿಕಾರಿಗೆ ನಮ್ಮ ಬಿಎಲ್‌ಎ ಮನವಿ ಸಲ್ಲಿಸಿದ್ದಾರೆ. ಇವರ ಮನವಿಯನ್ನು ಪರಿಶೀಲಿಸಿ, ಒಂದು ವೇಳೆ ನಕಲಿ ಮತದಾರರು ಎಂದು ಕಂಡು ಬಂದರೆ ಅಂತಹವರನ್ನು ಮತದಾರ ಯಾದಿಯಿಂದ ರದ್ದು ಪಡಿಸಿ, ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದೇನೆ. ನಾನೇನು ನೇರವಾಗಿ ಅವರು ಬೋಗಸ್ ಇದ್ದಾರೆ ಅವರನ್ನು ಮತದಾರ ಪಟ್ಟಿಯಿಂದ ತೆಗೆದು ಹಾಕುವಂತೆ ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು.




> ಇನ್ನುಳಿದ ಬೂತ್ ಗಳಲ್ಲಿ ಅದೆಷ್ಟು ಮೃತಪಟ್ಟವರು ಇದ್ದಾರೋ ಗೊತ್ತಿಲ್ಲ. ಬೂತ್ ನಂ. 248ರಲ್ಲಿ ಮೃತಪಟ್ಟವರ ಹೆಸರನ್ನು ಸೇರಿಸಿದ್ದಾರೆ. ಅಲ್ಲದೇ ರಾಜ್ಯದ ವಿವಿಧೆಡೆ ಸರ್ವರ್ ಡೌನ್ ಸಮಸ್ಯೆ ಬಹಳಷ್ಟಿದೆ. ಏನೂ ಪರಿಶೀಲನೆ ಮಾಡದೇ ಅಪ್ ಲೋಡ್ ಮಾಡಿದ್ದಾರೆ.
>
> – ಅಭಯ್ ಪಾಟೀಲ

1. ಶಾಸಕನಾಗಿ ನಾನು ಪತ್ರ ಬರೆದಿಲ್ಲ.
2. ಬಿಎಲ್‌ಎ 1 ಆಗಿ ಪತ್ರ ಬರೆದಿದ್ದೇನೆ.
3. ನನ್ನ ಪತ್ರ ತಿರಸ್ಕರಿಸಿರುವುದು ಸರಿಯಲ್ಲ

ನಾನು ಬೆಳಗಾವಿ ದಕ್ಷಿಣ ಕ್ಷೇತ್ರದ ಬಿಎಲ್‌ಎ 1 ಇದ್ದೇನೆ. ನಾನು ಶಾಸಕ ಅಂತಾ ಅಷ್ಟೇ ಅವರು ತಿಳಿದುಕೊಂಡಿದ್ದಾರೆ. ಶಾಸಕನಾಗಿ ನಾನು ಪತ್ರ ಬರೆದಿಲ್ಲ. ಬಿಎಲ್‌ಎ 1 ಆಗಿ ಪತ್ರ ಬರೆದಿದ್ದೇನೆ. ಆದರೆ, ಬಲ್ಕ್‌ನಲ್ಲಿ ಕೊಡಲು ಬರುವುದಿಲ್ಲ ಅಂತಾ ನನ್ನ ಪತ್ರ ತಿರಸ್ಕರಿಸಿದ್ದಾರೆ ಎಂದು ಹೇಳಿದರು.

ನನ್ನ ಕ್ಷೇತ್ರದಲ್ಲಿ ನಮ್ಮ ಬಿಎಲ್‌ಎ 2 ಗಳು ಪ್ರತಿಯೊಂದು ಮನೆಗೂ ಹೋಗಿ ಮೊದಲು ಪುನರ್ ಪರಿಶೀಲನೆ ಮಾಡಿದ್ದಾರೆ. ಆ ಬಳಿಕ ಎರಡನೇ ಪ್ರಕ್ರಿಯೆ ಹಂತದಲ್ಲೂ ಪ್ರತಿ ಮನೆಗೂ ಹೋಗಿ, ಅವರು ಇದ್ದಾರೋ ಇಲ್ಲವೋ ಎಂಬುದನ್ನು ಪರೀಕ್ಷೆ ಮಾಡಿದ್ದಾರೆ. ಅದರಲ್ಲಿ ಕಂಡು ಬಂದ ತಪ್ಪನ್ನು ಪಟ್ಟಿ ಮಾಡಿ ಸಂಬಂಧಿಸಿದ ಬಿಎಲ್‌ಎ ಗಳಿಗೆ ಕೊಟ್ಟಿದ್ದಾರೆ. ಯಾರು ಇಲ್ಲವೋ ಅವರ ಹೆಸರನ್ನು ಮಾತ್ರ ಕೊಟ್ಟಿದ್ದಾರೆ. ಬಿಎಲ್‌ಎ 2 ಅವರು ವಾರ್ಡ್‌ಗೆ ಹೋಗಿ ಸರ್ವೇ ಮಾಡಿ, ಬೋಗಸ್ ಕಂಡು ಬಂದಿದ್ದಕ್ಕೆ ತಕರಾರು ಅರ್ಜಿ ಸಲ್ಲಿಸಿದ್ದಾರೆ.

## ಮಿನಿ ನ್ಯೂಸ್

### ಕನಕಗಿರಿ ಅರಸರ ಕಾಲದ ಶಾಸನ ಪತ್ತೆ

**ಉದಯವಾಹಿನಿ, ಕಾರಟಗಿ**

ತಾಲ್ಲೂಕಿನ ಬೇವಿನಹಾಳ ಗ್ರಾಮದಲ್ಲಿ ಕನಕಗಿರಿ ಅರಸರ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನ ಪತ್ತೆಯಾಗಿದೆ. ಪಟ್ಟಣದ ಸಿ.ಎಂ.ಎನ್. ಕಾಲೇಜಿನ ಉಪನ್ಯಾಸಕ ಹನುಮಂತಪ್ಪ ಚಂದಲಾಪುರ ಮತ್ತು ಅವರ ಆಸಕ್ತ ಗೆಳೆಯರ ತಂಡ ಶಾಸನ ಸಂಶೋಧಿಸಿದ್ದಾರೆ.ಬೇವಿನಹಾಳ ಗ್ರಾಮಕ್ಕೆ ಹೊಂದಿಕೊಂಡಂತೆ ದಕ್ಷಿಣ ದಿಕ್ಕಿನಲ್ಲಿರುವ ಮಠಂಪೊದೆ ಎಂದು ಕರೆಯಲ್ಪಡುವ ಕನಕಗಿರಿ ಮಠವಿದ್ದ ಸ್ಥಳದಲ್ಲಿ ಶಾಸನ ಪತ್ತೆಯಾಗಿದೆ. ಶಾಸನವು ಕೆಂಪುಕಣ ಶಿಲೆಯಲ್ಲಿದ್ದು, ಸುಮಾರು ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲವಿದ್ದು, ಕನ್ನಡ ಲಿಪಿಯನ್ನು ಹೊಂದಿದೆ. ಶಾಸನ ಅಧ್ಯಯನ ಮಾಡಿದ ಇತಿಹಾಸ ಸಂಶೋಧಕ ಚನ್ನಬಸಪ್ಪ ಮಲ್ಕಂದಿನ್ನಿ, 'ಇದು ಕನಕಗಿರಿ ರಾಜರ ಆಡಳಿತಕ್ಕೆ ಸೇರಿದ ಕ್ರಿ.ಶ 1701ಕ್ಕೆ ಸೇರಿರಬಹುದಾದ ದಾನ ಶಾಸನವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ. 'ರಾಜೇಶ್ರೀ ಜನ್ನಮ ಶಿವಾಯದೇವರು ಎಂಬಾತನು ಈ ಶಿಲಾ ಶಾಸನವನ್ನು ಬರೆಸಿದ್ದು, ರವುಡಕುಂದಾ ಸೀಮೆಯ ನಾಡಗೌಡರು, ಈ ಸ್ಥಳದ ಗೌಡರು, ಭೋಗರು (ವರ್ತಕರು) ಈ ಸ್ಥಳದಲ್ಲಿ ಮಠ ಸ್ಥಾಪನೆ ಮಾಡಿದ್ದರು, ಅರಮನೆಯವರು ಪೂಜೆ ಸಲ್ಲಿಸುವ ಪ್ರಸ್ತಾಪವಿದೆ' ಎಂದು ವಿಶ್ಲೇಷಿಸಿದರು.




### ವಿಶ್ವ ಪ್ರವಾಸೋದ್ಯಮ ದಿನ: ಪರಂಪರೆ ನಡಿಗೆ

**ಉದಯವಾಹಿನಿ, ಕಲಬುರಗಿ**

ಕಲಬುರಗಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ 'ವಿಶ್ವ ಪ್ರವಾಸೋದ್ಯಮ ದಿನ'ದ ಅಂಗವಾಗಿ ಜಿಲ್ಲೆಯ ಐತಿಹಾಸಿಕ ಪರಂಪರೆಯನ್ನು ಸಾರುವ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ 'ಪರಂಪರೆ ನಡಿಗೆ"ಗೆ ಬೆಳಿಗ್ಗೆ 6.30 ರಿಂದ 10 ಗಂಟೆಯವರೆಗೆ ಕಲಬುರಗಿ ಕೋಟೆಯಿಂದ ಆರಂಭಗೊಂಡು ಶ್ರೀ ಶರಣಬಸವೇಶ್ವರ ದೇವಸ್ಥಾನದವರೆಗೆ ನಡೆಯಿತು. ಈ ಹೆಮ್ಮೆಯ ನಡಿಗೆಯಲ್ಲಿ ಕಲಬುರಗಿ ಕೇಂದ್ರ ವಿಶ್ವವಿದ್ಯಾಲಯ, ಶರಣಬಸವೇಶ್ವರ ವಿಶ್ವವಿದ್ಯಾಲಯ ಹಾಗೂ ಇತರೆ ಪ್ರಮುಖ ಶಿಕ್ಷಣ ಸಂಸ್ಥೆಗಳ ನೂರಾರು ವಿದ್ಯಾರ್ಥಿಗಳು, ಪ್ರವಾಸೋದ್ಯಮ ಪಾಲುದಾರರು ಮತ್ತು ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

### ಆಲ್ವಿನ್ ಪ್ರಕಾಶ್ ಕುಂದರ ಪಾರ್ಥಿವ ಶರೀರ ತವರಿಗೆ

**ಉದಯವಾಹಿನಿ, ಉಡುಪಿ**

ಶಾರ್ಜಾದಲ್ಲಿ ಹತ್ಯೆಗೀಡಾದ ಕುಂದಾಪುರ ತಾಲ್ಲೂಕಿನ ಹೊನ್ನನಕೇರಿ ನಿವಾಸಿ ಆಲ್ವಿನ್ ಪ್ರಕಾಶ್ ಕುಂದರ್ ಅವರ ಪಾರ್ಥಿವ ಶರೀರ ಶುಕ್ರವಾರ ತವರಿಗೆ ತಲುಪಿತು. ಪಾರ್ಥಿವ ಶರೀರವನ್ನು ಹೊನ್ನನಕೇರಿಯಲ್ಲಿರುವ ಅವರ ನಿವಾಸಕ್ಕೆ ತರಲಾಗಿದ್ದು, ಕುಟುಂಬಸ್ಥರು, ಬಂಧುಗಳು ಹಾಗೂ ಆಪ್ತರು ಅಂತಿಮ ದರ್ಶನ ಪಡೆದರು. ಮನೆಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಿ ಕುಟುಂಬಸ್ಥರು ಹಾಗೂ ಬಂಧುಗಳು ಕಂಬನಿ ಮಿಡಿದರು. ಬಳಿಕ ಸಿ.ಎಸ್.ಐ. ಕೃಪಾ ಚರ್ಚ್‌ನಲ್ಲಿ ಅಂತಿಮ ವಿಧಿ–ವಿಧಾನಗಳು ನಡೆಯಲಿವೆ. ಕುಟುಂಬಸ್ಥರು ಹಾಗೂ ಬಂಧು – ಮಿತ್ರರು ಅಂತಿಮ ವಿಧಿವಿಧಾನದಲ್ಲಿ ಭಾಗವಹಿಸಲಿದ್ದಾರೆ. ಪ್ರಕಾಶ್ ಅವರ ಪಾರ್ಥಿವ ಶರೀರವನ್ನು ತಾಯ್ನಾಡಿಗೆ ಕರೆತರಲು ಅವರು ಕೆಲಸ ಮಾಡುತ್ತಿದ್ದ ಕಂಪನಿಯು ನೆರವಾಗಿದೆ. ಪ್ರಕರಣದ ತನಿಖೆಯ ಪ್ರಗತಿಯ ಕುರಿತು ಶಾರ್ಜಾದಲ್ಲಿರುವ ಸಂಬಂಧಿಕರಿಗೆ ಮಾಹಿತಿ ಸಿಗಲಿದೆ ಎಂದು ಮೂಲಗಳು ತಿಳಿಸಿವೆ.




### ಲೋಕಾ ಬಲೆಗೆ ಬಿದ್ದ ಅಗ್ನಿಶಾಮಕ ಜಿಲ್ಲಾಧಿಕಾರಿ

**ಉದಯವಾಹಿನಿ, ಶಿವಮೊಗ್ಗ**

ಖಾಸಗಿ ಶಾಲೆಗೆ ನಿರಪೇಕ್ಷಣಾ ಪತ್ರ ನೀಡಲು 1 ಲಕ್ಷ ರೂ. ಲಂಚ ಪಡೆಯುವಾಗ ಜಿಲ್ಲಾ ಅಗ್ನಿ ಶಾಮಕದಳ ಜಿಲ್ಲಾಧಿಕಾರಿ ಅಶೋಕ್ ಕುಮಾರ್ ಶಿವಮೊಗ್ಗದಲ್ಲಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಈ ಕುರಿತು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಅಶೋಕ್ ಕುಮಾರ್ ಅವರು ತಮ್ಮದೆ ಕಚೇರಿಯಲ್ಲಿ ಹಣ ಪಡೆಯುವಾಗ ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ. ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಅನೂಪ್ ಎಂಬುವರು ನೂತನ ಶಾಲಾ ಕಟ್ಟಡ ನಿರ್ಮಾಣ ಮಾಡಿದ್ದು, ಕಟ್ಟಡಕ್ಕೆ ಅಗ್ನಿ ಶಾಮಕದಳದ ಇಲಾಖೆಯಿಂದ ಎನ್‌ಓಸಿ ನೀಡಲು 1 ಲಕ್ಷ ರೂ. ಹಣದ ಬೇಡಿಕೆ ಇಡಲಾಗಿತ್ತು. ಅನೂಪ್ ಅವರು ಅಶೋಕ್ ಕುಮಾರ್ ಅವರಿಗೆ ಲಂಚದ ಹಣ ನೀಡಲು ಮನಸ್ಸು ಒಪ್ಪದ ಕಾರಣಕ್ಕೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸರು ಅಶೋಕ್ ಕುಮಾರ್‌ರನ್ನು ರೆಡ್ ಹ್ಯಾಂಡ್ ಆಗಿ ಹಿಡಿದಿದ್ದಾರೆ.ಶಿವಮೊಗ್ಗ ಲೋಕಾಯುಕ್ತ ಎಸ್.ಪಿ. ಆಂಟನಿ ಜಾನ್ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಚಂದ್ರಶೇಖರ್ ದಾಳಿ ನಡೆಸಿದ್ದರು. ದಾಳಿಯಲ್ಲಿ ಇನ್ಸ್ ಪೆಕ್ಟರ್ ರುದ್ರೇಶ್ ಹಾಗೂ ಸಿಬ್ಬಂದಿ ಭಾಗಿಯಾಗಿದ್ದರು.




### ಗೌರವಧನ ಹೆಚ್ಚಿಸಲು ಒತ್ತಾಯ

**ಉದಯವಾಹಿನಿ, ನರಗುಂದ**

ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಕೆಲಸದ ಹೊರೆ ಹೆಚ್ಚಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೆಲಸಗಳನ್ನು ಆಧಾರಿಸಿ ಗೌರವ ಧನ ಹೆಚ್ಚಿಸಬೇಕು ಎಂದು ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸುನಂದಾ.ಎಚ್.ಎಸ್. ಆಗ್ರಹಿಸಿದರು.ಪಟ್ಟಣದಲ್ಲಿ ಈಚೆಗೆ ನಡೆದ ಸಿಐಟಿಯು ಸಂಘಟನೆಯ ತಾಲ್ಲೂಕು ಸಮ್ಮೇಳನದಲ್ಲಿ ಅವರು ಮಾತನಾಡಿದರು. "ಅಂಗನವಾಡಿ ಕಾರ್ಯಕರ್ತೆಯರ ಸೇವೆಗೆ ತಕ್ಕಂತೆ ಗೌರವಧನ ನೀಡಲೇಬೇಕು. ಇಲ್ಲದಿದ್ದರೆ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸಿಐಟಿಯು ಜಿಲ್ಲಾ ಸಂಚಾಲಕ ಮಹೇಶ ಹಿರೇಮಠ ಮಾತನಾಡಿ, 'ಅಂಗನವಾಡಿ ಕಾರ್ಯಕರ್ತರನ್ನು ಬಿಎಲ್‌ಓ ಕೆಲಸದಿಂದ ಮುಕ್ತಗೊಳಿಸಬೇಕು. ನಮ್ಮ ನೌಕರರಿಗೆ ಕೆಲಸದ ಹೊರೆ ಹೆಚ್ಚಾಗಿದೆ. ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಇದರ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ' ಎಂದರು. ಇದೇ ಸಂದರ್ಭದಲ್ಲಿ ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಆಯ್ಕೆ ಜರುಗಿತು.ತಾಲ್ಲೂಕು ಘಟಕದ ಅಧ್ಯಕ್ಷೆಯಾಗಿ ಶಾರದಾ ಹಳೇಮನಿ, ಪ್ರಧಾನ ಕಾರ್ಯದರ್ಶಿಯಾಗಿ ಶಾರದಾ ರೋಣದ, ಖಜಾಂಚಿಯಾಗಿ ಲಕ್ಷ್ಮೀ ಗಾಯಕವಾಡ ಆಯ್ಕೆಯಾದರು.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆಯೆಂದು ಭಾವಿಸಬಹುದು. ಆದರೆ ಅದು ನಿಜವಲ್ಲ – ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ನೀವು ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ. ಇಂದಿನ ದಿನ, ನಿಮ್ಮ ಬಳಿ ಸಾಲ ಕೇಳುವ ಮತ್ತು ಅದನ್ನು ಹಿಂತಿರುಗಿಸದೆ ಇರುವಂತಹ ಸ್ನೇಹಿತರಿಂದ ನೀವು ನಿಮ್ಮನ್ನು ತಪ್ಪಿಸುವ ಅಗತ್ಯವಿದೆ.

**ವೃಷಭ** ಇಂದು ನೀವು ಹಲವಾರು ಒತ್ತಡಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು ಹಾಗೂ ಇದು ನಿಮಗೆ ಕಿರಿಕಿರಿ ಹಾಗೂ ಆತಂಕದ ಭಾವನೆಗಳನ್ನು ಉಂಟುಮಾಡಬಹುದು. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ.

**ಮಿಥುನ** ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ. ಹಣದ ನಷ್ಟವಾಗಬಹುದು. ಸಂಜೆ ಸ್ನೇಹಿತರೊಡನೆ ಹೋಗಿ ಇದು ತುಂಬ ಒಳ್ಳೆಯದನ್ನು ಮಾಡುತ್ತದೆ. ನಿಮ್ಮ ಪ್ರೇಮ ಜೀವನ ಶರದೃತುವಿನಲ್ಲಿನ ಮರದ ಎಲೆಯಂತಿರುತ್ತದೆ.

**ಕರ್ಕಾಟಕ** ಇಂದು ನೀವು ನಿಮ್ಮ ಆರೋಗ್ಯ ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತೀರೋ ಅಷ್ಟೇ ಉತ್ತಮ. ಮಕ್ಕಳು ನಿಮ್ಮ ದಿನವನ್ನು ಕಠಿಣಗೊಳಿಸುತ್ತಾರೆ. ಇಂದು ರಾತ್ರಿ ಸಂಗಾತಿಯೊಂದಿಗೆ ಸಂತೋಷದಿಂದ ಸಮಯ ಕಳೆಯುತ್ತೀರಿ

**ಸಿಂಹ** ಇಂದು ಶಾಂತವಾಗಿ ಒತ್ತಡ ಮುಕ್ತವಾಗಿರಿ. ಇಂದು ನಿಮ್ಮ ಹಣವನ್ನು ಅನೇಕ ವಿಷಯಗಳಿಗೆ ಖರ್ಚು ಮಾಡಬಹುದು, ನೀವು ಇಂದು ಉತ್ತಮ ಬಜೆಟ್ ಅನ್ನು ಯೋಜಿಸಬೇಕಾಗಿದೆ, ಇದು ನಿಮ್ಮ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ. ಸಂಬಂಧಿಗಳು / ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ. ಕೆಲವರಿಗೆ ಸುಂದರ ಉಡುಗೊರೆ, ಹೂಗಳಿಂದ ತುಂಬಿದ ಪ್ರಣಯದ ಸಂಜೆ.

**ಕನ್ಯಾ** ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ವಿಶ್ವಾಸ ಮತ್ತು ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣ ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ.

**ತುಲಾ** ಆರೋಗ್ಯವು ಇತರರೊಂದಿಗೆ ಸಂತೋಷ ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಇಂದು ನೀವು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ಇಂದು ನಿಮಗೆ ಹಣವನ್ನು ನೀಡಬಹುದು. ಇತರರಿಗೆ ಪ್ರತಿಫಲಗಳು ತರುವ ನಿಮ್ಮ ಸಾಮರ್ಥ್ಯ ಪ್ರತಿಫಲ ತರುತ್ತದೆ. ದಿನ ಉತ್ತಮವಾಗಿದೆ, ಇಂದು ನಿಮಗಾಗಿ ಸಮಯವನ್ನು ತೆಗೆದುಕೊಳ್ಳಿ

**ವೃಶ್ಚಿಕ** ಒತ್ತಡ ಸಣ್ಣ ಅನಾರೋಗ್ಯಕ್ಕೆ ಕಾರಣವಾಗಬಹುದು. ಆರಾಮವಾಗಿರಲು ಸ್ನೇಹಿತರು ಮತ್ತು ಕುಟುಂಬದ ಸದಸ್ಯರ ಜೊತೆಗಿರಿ. ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ. ನಿಮ್ಮ ಗೌಪ್ಯ ಮಾಹಿತಿಯನ್ನು ನಿಮ್ಮ ಸಂಗಾತಿಯ ಜೊತೆ ಹಂಚಿಕೊಳ್ಳುವ ಮೊದಲು ಯೋಚಿಸಿ. ನಿಮ್ಮ ಪ್ರೇಮಿ ಭೇಟಿ ಮಾಡುತ್ತಿದ್ದ ಹಾಗೆ ನಿಮ್ಮ ಮನಸ್ಸನ್ನು ಪ್ರಣಯ ಆವರಿಸುತ್ತದೆ.

**ಧನಸ್ಸು** ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ನೀವು ಪ್ರೀತಿಪಾತ್ರರ ಜೊತೆ ವಾದಗಳಿಗೆ ಕಾರಣವಾಗಬಹುದಾದ ವಿವಾದಾತ್ಮಕ ವಿಷಯಗಳನ್ನು ತಪ್ಪಿಸಬೇಕು. ನಿಮ್ಮ ಪ್ರೀತಿಪಾತ್ರರೆದುರಿಗೆ ನಿಮ್ಮ ಮಾತುಗಳನ್ನು ಸ್ಪಷ್ಟವಾಗಿ ಅವರ ಮುಂದೆ ಇಡಿ.

**ಮಕರ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು. ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು. ನಿಮ್ಮ ವಿಪರೀತ ಶಕ್ತಿ ಮತ್ತು ಪ್ರಚಂಡ ಉತ್ಸಾಹ ಅನುಕೂಲಕರ ಫಲಿತಾಂಶಗಳನ್ನು ತರುತ್ತದೆ ಹಾಗೂ ಮನೆಯ ಉದ್ವಿಗ್ನತೆಗಳನ್ನು ಶಮನ ಕಾಣಿಸುತ್ತದೆ.

**ಕುಂಭ** ಅನಿರೀಕ್ಷಿತ ಪ್ರಯಾಣದಿಂದ ಸುಸ್ತಾಗಬಹುದು ಹಾಗೂ ಇದು ನಿಮ್ಮನ್ನು ಕರಿಕಿರಿಗೊಳ್ಳುವಂತೆ ಮಾಡಬಹುದು. ಸ್ನಾಯುಗಳಿಗೆ ಆರಾಮ ನೀಡಲು ನಿಮ್ಮ ದೇಹವನ್ನು ತೈಲದಿಂದ ಮಸಾಜ್ ಮಾಡಿ ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು, ಇದರ ಕಾರಣದಿಂದ ನೀವು ಮಾನಸಿಕ ಒತ್ತಡಗೊಳಗಾಗಬಹುದು. ಪ್ರೀತಿ, ಸಾಂಗತ್ಯ ಮತ್ತು ಬಂಧ ಏರಿಕೆಯಲ್ಲಿರುತ್ತವೆ.

**ಮೀನ** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಕುಟುಂಬದ ಸದಸ್ಯರ ಖುಷಿಯ ಸ್ವಭಾವ ಮನೆಯಲ್ಲಿನ ವಾತಾವರಣವನ್ನು ಹಗುರಗೊಳಿಸುತ್ತದೆ. ಸ್ನೇಹ ಕಳೆದಕೊಳ್ಳುವ ಸಾಧ್ಯತೆಗಳು ಇಂದು ಹೆಚ್ಚಾಗಿರುವುದರಿಂದ ಎಚ್ಚರಿಕೆಯಿಂದಿರಿ.

## ಪಡಿತರ ಅಕ್ಕಿ ಸೇರಿ ರೂ.2.60 ಲಕ್ಷ ಮೌಲ್ಯದ ವಸ್ತು ಜಪ್ತಿ

**ಉದಯವಾಹಿನಿ, ಚಡಚಣ**

ಸರ್ಕಾರದ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ವಿತರಿಸಲಾಗುವ ಅಕ್ಕಿಯನ್ನು ಯಾವುದೇ ಪರವಾನಗಿ ಪಡೆಯದೆ ಅಕ್ರಮವಾಗಿ ಸಂಗ್ರಹಿಸಿ ಮಾರಾಟ ಮಾಡಲು ಸಾಗಿಸುತ್ತಿದ್ದ ಆರೋಪದ ಮೇಲೆ ಚಡಚಣ ಪೊಲೀಸರು ಓರ್ವನನ್ನು ಬಂಧಿಸಿ, ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.


ಉದಯವಾಹಿನಿ ಚಿತ್ರ

ಚಡಚಣ ಪಟ್ಟಣದ ದೇವರನಿಂಬರಗಿ ಕ್ರಾಸ್ ಬಳಿ ಸೆ.23ರಂದು ಅಕ್ರಮವಾಗಿ ಅಕ್ಕಿ ಸಾಗಿಸುತ್ತಿದ್ದ ವೇಳೆ ಆರೋಪಿಯನ್ನು ಪತ್ತೆಹಚ್ಚಲಾಗಿದೆ. ಬಂಧಿತನನ್ನು ಚಡಚಣ ನಿವಾಸಿ ಆರೀಫ್ ಖಾಜಾಸಾಬ ಪಠಾಣ (18) ಎಂದು ಗುರುತಿಸಲಾಗಿದೆ. ಪ್ರಕರಣದಲ್ಲಿ ಹುಸೇನಬಾಷಾ ಗೈಬೀಸಾಬ ಟಪಾಲ ಹಾಗೂ ಶುಭಂ ಭಗವಾನ ಕ್ಷತ್ರಿ ಎಂಬುವರು ಆರೋಪಿಗಳಾಗಿದ್ದು, ಇಬ್ಬರೂ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಹಾರ ನಿರೀಕ್ಷಕ ಶಿವಾನಂದ ಸದಾಶಿವ ಕೋಳಿ ಅವರು ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿದೆ. ಆರೋಪಿಗಳು ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಲೈಸನ್ಸ್ ಪಡೆಯದೇ, ಸರ್ಕಾರದ ವಿವಿಧ ಯೋಜನೆಗಳಡಿ ವಿತರಿಸುವ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಸ್ವಂತ ಲಾಭಕ್ಕಾಗಿ ಮಾರಾಟ ಮಾಡಲು ಸಾಗಿಸುತ್ತಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಪೊಲೀಸರು ಆರೋಪಿಯಿಂದ ಕೆಎ–30 ಎ–3031 ಸಂಖ್ಯೆಯ ಪಿಕಪ್ ಗೂಡ್ಸ್ ವಾಹನವನ್ನು ವಶಕ್ಕೆ ಪಡೆದಿದ್ದು, ಇದರ ಅಂದಾಜು ಮೌಲ್ಯ 2 ಲಕ್ಷ ಎಂದು ತಿಳಿಸಲಾಗಿದೆ. ಅಲ್ಲದೆ, ಸುಮಾರು 45–50 ಕೆ.ಜಿ. ತೂಕದ 44 ಅಕ್ಕಿ ಚೀಲಗಳು, ಒಟ್ಟು 2,290 ಕೆ.ಜಿ. ಅಕ್ಕಿ ಹಾಗೂ ಪರೀಕ್ಷೆಗಾಗಿ ಪಡೆದ 2 ಕೆ.ಜಿ. ಅಕ್ಕಿ ಮಾದರಿ ಜಪ್ತಿ ಮಾಡಲಾಗಿದೆ.

## ಸಾಕುಪ್ರಾಣಿಗಳಿಗೆ ಉಚಿತ ರೇಬಿಸ್ ಲಸಿಕೆ

**ಉದಯವಾಹಿನಿ, ಮಂಗಳೂರು**

ಪ್ರತಿ ವರ್ಷ ಸೆಪ್ಟೆಂಬರ್ 28 ರಂದು ಖ್ಯಾತ ವಿಜ್ಞಾನಿ ಲೂಯಿಸ್. ಪ್ಯಾಶ್ಚರ್ ಅವರ ಸ್ಮರಣಾರ್ಥ "ವಿಶ್ವ ರೇಬಿಸ್ ದಿನ" (ಹುಚ್ಚು ರೋಗ)ವನ್ನು ಪ್ರಪಂಚದ ಎಲ್ಲಾ ಮೂಲೆಯಲ್ಲಿ ಆಚರಿಸಲಾಗುತ್ತದೆ. ರೇಬಿಸ್ ರೋಗ ಸಂಪೂರ್ಣ ಮಾರಣಾಂತಿಕವಾದರೂ ಸಕಾಲದಲ್ಲಿ ಮುಂಜಾಗೃತಾ ಕ್ರಮದಿಂದ ತಡೆಯಬಹುದು. ರೋಗವನ್ನು ನಿರ್ಮೂಲನೆ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಈ ವಿಶ್ವ ರೇಬಿಸ್ ದಿನದ ಅಂಗವಾಗಿ ನೂತನವಾಗಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾದ ಪಶುವೈದ್ಯಕೀಯ ಕಾಲೇಜಿನಲ್ಲಿ ಸೆಪ್ಟೆಂಬರ್ 28 ರಂದು ಬೆಳಿಗ್ಗೆ 10 ಗಂಟೆಯಿಂದ ಮದ್ಯಾಹ್ನ 12 ಗಂಟೆಯವರೆಗೆ ಸಾಕುಪ್ರಾಣಿಗಳಾದ ನಾಯಿ ಬೆಕ್ಕುಗಳಿಗೆ ಉಚಿತವಾಗಿ ರೇಬಿಸ್ ರೋಗದ ವಿರುದ್ಧ ಲಸಿಕೆ ನೀಡಲಾಗುತ್ತದೆ. ಪರಾವಲಂಬಿ ಜೀವಿಗಳ ಜಂತು ನಾಶಕ ಔಷದ ಉಚಿತವಾಗಿ ನೀಡಲಾಗುತ್ತದೆ. ಸುತ್ತಮುತ್ತಲಿನ ಸಾಕು ಪ್ರಾಣಿಗಳ ಮಾಲೀಕರು/ ಜಾನುವಾರು ಮಾಲೀಕರು ಪ್ರಯೋಜನ ಪಡೆಯಬಹುದು ಎಂದು ಪಶುವೈದ್ಯಕೀಯ ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ಟೋಬರ್ 18 ಮತ್ತು 19ರಂದು ಮೈಸೂರಿನಲ್ಲಿ ಕಂಬಳ ಕೂಟ ಆಯೋಜನೆಗೊಳ್ಳಲಿದ್ದು, ಸಮಾಲೋಚನೆ ನಡೆಸಿ ಅಧಿಕೃತ ಆಹ್ವಾನ ನೀಡಿದೆ.

# ಮೈಸೂರು ದಸರಾದಲ್ಲಿ ಮೊಳಗಲಿದೆ ಕರಾವಳಿಯ ಕಂಬಳದ ಕಹಳೆ

**ಉದಯವಾಹಿನಿ, ಮಂಗಳೂರು**

ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಈ ಬಾರಿ ಕರಾವಳಿಯ ಜಾನಪದ ವೀರ ಕ್ರೀಡೆ ಕಂಬಳದ ಗತ್ತು – ಗಾಂಭೀರ್ಯ ಅನಾವರಣಗೊಳ್ಳಲು ವೇದಿಕೆ ಸಜ್ಜಾಗಿದೆ. ಇದೇ ಬರುವ ಅಕ್ಟೋಬರ್ 18 ಮತ್ತು 19ರಂದು ಮೈಸೂರಿನಲ್ಲಿ ಭರ್ಜರಿ ಕಂಬಳ ಕೂಟ ಆಯೋಜನೆಗೊಳ್ಳಲಿದ್ದು, ಇದಕ್ಕಾಗಿ ಕರಾವಳಿ ಭಾಗದ ಕಂಬಳ ಸಮಿತಿ ಪದಾಧಿಕಾರಿಗಳು ಹಾಗೂ ಕೋಣಗಳ ಯಜಮಾನರೊಂದಿಗೆ ಮೈಸೂರು ಜಿಲ್ಲಾಡಳಿತದ ನಿಯೋಗವು ಮಹತ್ವದ ಸಮಾಲೋಚನೆ ನಡೆಸಿ ಅಧಿಕೃತ ಆಹ್ವಾನ ನೀಡಿದೆ. ಕರಾವಳಿಯಿಂದ ಅ. 16ಕ್ಕೆ ಕೋಣಗಳ ಪಯಣ ಆಯ್ದ ಪ್ರಸಿದ್ಧ ಕೋಣಗಳು ಮೈಸೂರು ದಸರಾ ಕಂಬಳದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಮೈಸೂರಿನ ರಿಂಗ್ ರೋಡ್ ವ್ಯಾಪ್ತಿಯ ಸುಮಾರು 20 ಎಕರೆ ವಿಸ್ತೀರ್ಣದ ಜಾಗದಲ್ಲಿ ಕಂಬಳದ ಕರೆಯ ನಿರ್ಮಾಣ ಕಾರ್ಯ ಈಗಾಗಲೇ ಭರದಿಂದ ಸಾಗಿದೆ. ಜಿಲ್ಲಾಡಳಿತದ ತೀರ್ಮಾನದಂತೆ ಈ ಕರೆಗೆ 'ವಿಜಯ ದಶಮಿ' ಎಂದು ನಾಮಕರಣ ಮಾಡಲಾಗಿದೆ.

ಅಕ್ಟೋಬರ್ 16ರಂದು ಬೆಳಿಗ್ಗೆ 10:30ಕ್ಕೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಎದುರು ಎಲ್ಲಾ


ಉದಯವಾಹಿನಿ ಚಿತ್ರ

1. ಅ. 16ಕ್ಕೆ ಕೋಣಗಳ ಪಯಣ
2. 'ವಿಜಯ ದಶಮಿ' ಕರೆ ಸಜ್ಜು
3. ಕಂಬಳದ ಕರೆಯ ನಿರ್ಮಾಣ

ಕೋಣಗಳು ಜಮಾಯಿಸಿ, ಅಲ್ಲಿಂದ ಒಟ್ಟಾಗಿ ಮೈಸೂರಿನತ್ತ ವಾಹನಗಳಲ್ಲಿ ಹೊರಡಲಿವೆ.

**ಮಡಿಕೇರಿಯಲ್ಲಿ ಕಡ್ಡಾಯ ವಿಶ್ರಾಂತಿ:** ಘಟ್ಟ ಏರಿ ಸಾಗುವ ಕೋಣಗಳಿಗೆ ಮಡಿಕೇರಿಯಲ್ಲಿ ಸುಮಾರು 2 ರಿಂದ 3 ಗಂಟೆಗಳ ಕಾಲ ಕಡ್ಡಾಯ ವಿಶ್ರಾಂತಿ ನೀಡಲಾಗುವುದು. ಅಲ್ಲಿ ಮೇವು, ಆಹಾರ ಹಾಗೂ ನೀರಿನ ವ್ಯವಸ್ಥೆ ಮಾಡಲಾಗುತ್ತದೆ.

**ಅ. 17ಕ್ಕೆ ಪೂರ್ಣ ವಿಶ್ರಾಂತಿ:** ಅಕ್ಟೋಬರ್ 16ರ ರಾತ್ರಿ 8:30 ರಿಂದ 9:00 ಗಂಟೆಯೊಳಗೆ ಮೈಸೂರು ತಲುಪಲಿರುವ ಕೋಣಗಳಿಗೆ, ಅಕ್ಟೋಬರ್ 17ರ ಇಡೀ ದಿನ ಸಂಪೂರ್ಣ ವಿಶ್ರಾಂತಿ ಕಲ್ಪಿಸಲಾಗುವುದು. ಮೈಸೂರಿನ ತಂಪಾದ ಹವಾಗುಣ ಕೋಣಗಳಿಗೆ ಅತ್ಯಂತ ಹಿತಕರವಾಗಿದ್ದು, ಯಾವುದೇ ತೊಂದರೆಯಾಗದು ಎಂದು ಅಶೋಕ್ ಕುಮಾರ್ ರೈ ಸ್ಪಷ್ಟಪಡಿಸಿದ್ದಾರೆ.

> ಕರೆಯ ಒಟ್ಟು ಉದ್ದ 147 ಮೀಟರ್ ಆಗಿದ್ದು, ಓಟದ ಅಂತರ 140 ಮೀಟರ್ ಇರಲಿದೆ. ಕರೆಯ ಗುಣಮಟ್ಟ ಹಾಗೂ ಕೋಣಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಕ್ಟೋಬರ್ 15ರಂದೇ 5 ಜೊತೆ ಕೋಣಗಳನ್ನು ಕರೆದೊಯ್ದು ಪ್ರಾಯೋಗಿಕ ಓಟ (ಟ್ರಯಲ್) ನಡೆಸಲಾಗುವುದು.
> – ಅಶೋಕ್ ಕುಮಾರ್ ರೈ, ಶಾಸಕ

ಅಕ್ಟೋಬರ್ 18ರಂದು ಬೆಳಿಗ್ಗೆ ಉದ್ಘಾಟನೆಯೊಂದಿಗೆ ಕಂಬಳ ಆರಂಭವಾಗಲಿದ್ದು,ಸಂಜೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ. ಅಕ್ಟೋಬರ್ 19ರ ತಡರಾತ್ರಿ 12 ಗಂಟೆಯೊಳಗೆ ಬಹುಮಾನ ವಿತರಣೆಯೊಂದಿಗೆ ಕಂಬಳ ಪೂರ್ಣಗೊಳ್ಳಲಿದೆ.

160 ಜೊತೆ ಆಯ್ದ ಕೋಣಗಳು ಭಾಗಿ, ಪ್ರೋತ್ಸಾಹಧನ ಹೆಚ್ಚಳಕ್ಕೆ ಮನವಿ: ಈ ಕಂಬಳದಲ್ಲಿ ಕೇವಲ ಸೀನಿಯರ್ ಹಾಗೂ ಉತ್ತಮ ಟೈಮಿಂಗ್ಸ್ ಹೊಂದಿರುವ ಅರ್ಹ 150 ರಿಂದ 160 ಜೊತೆ ಕೋಣಗಳನ್ನು ಮಾತ್ರ ಉಪ ಸಮಿತಿಯ ಪರಿಶೀಲನೆ ನಂತರ ಕಳುಹಿಸಿಕೊಡಲಾಗುತ್ತದೆ. ಭಾಗವಹಿಸುವ ದೊಡ್ಡ ಜೊತೆ ಕೋಣಗಳಿಗೆ 65,000 ಹಾಗೂ ಸಣ್ಣ ಜೊತೆ ಕೋಣಗಳಿಗೆ 50,000 ಸಾರಿಗೆ ಭತ್ಯೆಯನ್ನು ಸರ್ಕಾರ ನಿಗದಿಪಡಿಸಿದೆ.

ಸುಮಾರು 4 ರಿಂದ 5 ಎಕರೆ ಜಾಗದಲ್ಲಿ ಮಳಿಗೆಗಳನ್ನು ತೆರೆಯಲಾಗುತ್ತಿದ್ದು, ಕರಾವಳಿಯ ಜಾನಪದ ಕಲೆ ಹಾಗೂ ತುಳುನಾಡಿನ ಸಾಂಪ್ರದಾಯಿಕ ತಿನಿಸುಗಳು ಮೈಸೂರಿನ ಜನರಿಗೆ ಲಭ್ಯವಾಗಲಿವೆ. ಕಂಬಳದ ರನ್ನಿಂಗ್ ಕಮೆಂಟರಿಯು ಇತರ ಭಾಗದ ಜನರಿಗೂ ಸುಲಭವಾಗಿ ಅರ್ಥವಾಗುವಂತೆ ಕನ್ನಡ ಮತ್ತು ತುಳು ಮಿಶ್ರಿತ ಆಕರ್ಷಕ ಶೈಲಿಯಲ್ಲಿ ಇರಲಿದೆ ಎಂದು ಸಂಘಟಕರು ಮಾಹಿತಿ ನೀಡಿದ್ದಾರೆ.

## 'ವಂದೇ ಮಾತರಂ' ಪ್ರತಿ ಭಾರತೀಯನ ಮನಮನದಲ್ಲಿ ನೆಲೆಗೊಳ್ಳಲಿ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಮುದ್ದೇಬಿಹಾಳ**

ಪ್ರತಿಯೊಬ್ಬ ಭಾರತೀಯನ ಮನಮನದಲ್ಲಿ 'ವಂದೇ ಮಾತರಂ' ಗೀತೆ ನೆಲೆಗೊಳ್ಳಬೇಕು ಎಂದು ಸಾಮಾಜಿಕ ಹೋರಾಟಗಾರ ಬಸಯ್ಯಾ ನಂದಿಕೇಶ್ವರಮಠ ಹೇಳಿದರು.

ಪಟ್ಟಣದ ಜ್ಞಾನ ಭಾರತಿ ವಿದ್ಯಾ ಮಂದಿರ ಸಮೂಹ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾ ಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನ ಮಾರ್ಗದರ್ಶನದಲ್ಲಿ ಆಯೋಜಿಸಿದ್ದ 'ನಮಾಮಿ ವಂದೇ ಮಾತರಂ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಂದೇ ಮಾತರಂ' ಗೀತೆ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಜನರಲ್ಲಿ ದೇಶಭಕ್ತಿಯ ಭಾವನೆ ಮೂಡಿಸಿ, ಲಕ್ಷಾಂತರ ಜನರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಲು ಪ್ರೇರಣೆ ನೀಡಿದ ಮಹತ್ವದ ಗೀತೆಯಾಗಿದೆ. ಬಂಕಿಮಚಂದ್ರ ಚಟರ್ಜಿ ಅವರು ಸುಮಾರು 150 ವರ್ಷಗಳ ಹಿಂದೆ ರಚಿಸಿದ ಈ ಗೀತೆ ಇಂದಿಗೂ ರಾಷ್ಟ್ರಭಕ್ತಿಯ ಸಂಕೇತವಾಗಿ ಪ್ರೇರಣೆ ನೀಡುತ್ತಿರುವುದು ಪ್ರತಿಯೊಬ್ಬ ಭಾರತೀಯನು ಹೆಮ್ಮೆಪಡುವ ಸಂಗತಿಯಾಗಿದೆ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಬಿ.ಪಿ. ಕುಲಕರ್ಣಿ ಮಾತನಾಡಿ, ಭಾರತದಲ್ಲಿ ಜನ್ಮವೆತ್ತಿರುವುದು ನಮ್ಮೆಲ್ಲರ ಪುಣ್ಯ. ಪ್ರತಿಯೊಬ್ಬರೂ ತಮ್ಮ ಜನ್ಮದಾತರನ್ನು ಹಾಗೂ ಜನ್ಮಭೂಮಿಯನ್ನು ಸದಾ ಸ್ಮರಿಸಬೇಕು. ಪ್ರತಿಯೊಬ್ಬ ನಾಗರಿಕನಲ್ಲೂ ದೇಶಾಭಿಮಾನದ ಭಾವನೆ ಬೆಳೆಸಿಕೊಂಡು ದೇಶದ ಅಖಂಡತೆ ಹಾಗೂ ಏಕತೆಗೆ ಸಹಕರಿಸಬೇಕು ಎಂದು ಹೇಳಿದರು.

ಪ್ರೌಢಶಾಲಾ ಮುಖ್ಯಗುರು ರಾಮಚಂದ್ರ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರ್ವಹಿಸಿದರು. ಶಿಕ್ಷಕಿಯರಾದ ರಚನಾ ಕುಲಕರ್ಣಿ, ದೀಪಿಕಾ ಪೂಜಾರಿ, ಅನ್ನಪೂರ್ಣ ನಾಗರಾಳ ಹಾಗೂ ರಂಜಿತಾ ಭಟ್ಟ ಸೇರಿದಂತೆ ಎಲ್ಲರೂ ಸಾಮೂಹಿಕವಾಗಿ 'ವಂದೇ ಮಾತರಂ' ಗೀತೆಯನ್ನು ಹಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕ ಬಿ.ಎ. ನಾಲತವಾಡ, ಕಾಲೇಜಿನ ಪ್ರಾಚಾರ್ಯ ಅರುಣ ಹುನಗುಂದ, ಪ್ರಾಥಮಿಕ ಶಾಲಾ ಮುಖ್ಯಗುರು ಎಸ್. ಎಸ್. ಹಂಜಗಿ, ಬೋಧಕ ವೃಂದದ ಮಂಜುನಾಥ ಪಡದಾಳಿ, ಕಿರಣ ಕಡಿ, ಬಿ.ಆರ್. ಬೆಳ್ಳಿಕಟ್ಟಿ, ಎಸ್.ಎಸ್. ಹೂಗಾರ, ದೈಹಿಕ ಪರಿವೀಕ್ಷಕ ಶಿವಾನಂದ ಹತ್ತೂರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಎನ್.ಎಂ.ಡಿ.ಸಿ.ಯ ಪೆಲೆಟ್ ಪ್ಲಾಂಟ್ ಕಾರ್ಮಿಕರಿಂದ ಪ್ರತಿಭಟನೆ



ಉದಯವಾಹಿನಿ ಚಿತ್ರ

**ಉದಯವಾಹಿನಿ, ಬಳ್ಳಾರಿ**

ನಿನ್ನೆ ಸಂಜೆ ಸಂಡೂರಿನ ಎನ್. ಎಂ. ಡಿ. ಸಿಯ ಪೆಲೆಟ್ ಪ್ಲಾಂಟ್ ಕಾರ್ಮಿಕರ ದಿಢೀರನೆ ಪ್ರತಿಭಟನೆ ನಡೆಯಿತು.ಎಐಯುಟಿಯುಸಿಗೆ ಸಂಯೋಜನೆಗೊಂಡ ಸಂಯುಕ್ತ ಗಣಿ ಕಾರ್ಮಿಕರ ಸಂಘದಿಂದ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು.

ಬಹಳ ದಿನದ ಬೇಡಿಕೆಯಾದ ಹಿಂದೆಯಿದ್ದ ವೇತನ ನೀಡಬೇಕು, ಕಾರ್ಮಿಕರ ಮೇಲಿನ ಕಿರುಕುಳ ನಿಲ್ಲಬೇಕು ಮುಂತಾದ ಬೇಡಿಕೆಗಳಿಗಾಗಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಜಯ್ ಅಂಬೆ ಇಂಡಸ್ಟ್ರೀಸ್ ಹಾಗೂ ಎನ್. ಎಂ. ಡಿ. ಸಿ ಜೊತೆಗೂಡಿ ಪಿಪಿಪಿ ಮಾದರಿಯಾದ ಮೇಲೆ, ಈ ಹಿಂದೆ ಪೆಲೆಟ್ ಪ್ಲಾಂಟ್ ಕಾರ್ಮಿಕರಿಗೆ ನೀಡಲಾಗುತ್ತಿದ್ದ ದಿನದ ವಿಶೇಷ ಭತ್ಯೆ ರೂ. 171 ಏಕಾಏಕಿ ನಿಲ್ಲಿಸಲಾಗಿತ್ತು. ಇದರ ಪರಿಣಾಮವಾಗಿ ಕಾರ್ಮಿಕರು ಅತ್ಯಂತ ಸಂಕಕಷ್ಟದಲ್ಲಿದ್ದಾರೆ. ಕೆಲವು ತಿಂಗಳುಗಳಿಂದ ಮಾತುಕತೆ ಮೂಲಕ ಬಗೆಹರಿಸಲು ಪ್ರಯತ್ನಿಸಿದರೂ, ಫಲಕಾರಿಯಾಗಿರಲಿಲ್ಲ.

ಇದರ ಜೊತೆಗೆ, ಜಯ್ ಅಂಬೇ ಸಂಸ್ಥೆಯ HR ಪ್ರತಿನಿಧಿಯಿಂದ ಕಾರ್ಮಿಕರಿಗೆ ಅವಮಾನಕರವಾಗಿ ಮಾತನಾಡುವುದು, ಕಿರುಕುಳ ನೀಡುವುದು ಹಾಗೂ ಬೆದರಿಸುವುದು ನಡೆಯುತ್ತಿದೆ.

ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಪ್ರಶ್ನಿಸುವ ಅಥವಾ ಮುಂದಿಡುವ ಪರಿಸ್ಥಿತಿಯನ್ನೂ ಕಳೆದುಕೊಂಡಿದ್ದಾರೆ. ಇಂದು ಸತತವಾಗಿ ಮ್ಯಾನೇಜ್ಮೆಂಟ್, ಎನ್. ಎಂ. ಡಿ. ಸಿಯೊಂದಿಗೆ 3 ತಾಸುಗಳ ಕಾಲ ಚರ್ಚೆ ನಡೆಯಿತು. ಮ್ಯಾನೇಜ್ಮೆಂಟ್ ಕಾರ್ಮಿಕರ ಬೇಡಿಕೆಗಳಿಗೆ ಒಪ್ಪದ ಕಾರಣ, 420 ಕಾರ್ಮಿಕರು ಇಂದಿನಿಂದಲೆ ಕೆಲಸ ನಿಲ್ಲಿಸಲು ನಿರ್ಧಿಸಿದರು. ಸೆಪ್ಟೆಂಬರ್ 28ರಿಂದ ಎನ್. ಎಂ. ಡಿ. ಸಿ ಮುಖ್ಯ ದ್ವಾರದ ಮುಂದೆ ಅನಿರ್ದಿಷ್ಟ ಪ್ರತಿಭಟನೆ ಮಾಡಲು ತೀರ್ಮಾನಿಸಿದರು.

## 225ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೀಟು

**ಉದಯವಾಹಿನಿ, ತಾಳಿಕೋಟೆ**

ನಾಗರಬೆಟ್ಟದ ಆಕ್ಸ್‌ಫರ್ಡ ಪಾಟೀಲ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಈ ಸಾಲಿನ ವೈದ್ಯಕೀಯ ಪ್ರವೇಶದಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, 225ಕ್ಕೂ ಅಧಿಕ ವಿದ್ಯಾರ್ಥಿಗಳು ಎಂಬಿಬಿಎಸ್ ಸೇರಿದಂತೆ ವಿವಿಧ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆದಿದ್ದಾರೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ಅಮೀತಗೌಡ ಪಾಟೀಲ ಅವರು ತಿಳಿಸಿದರು. ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನೀಟ್ ಪರೀಕ್ಷೆಯ ಫಲಿತಾಂಶದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. 2020ರಿಂದ ಸಂಸ್ಥೆಯಿಂದ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, 2020ರಲ್ಲಿ 85, 2021ರಲ್ಲಿ 123, 2022ರಲ್ಲಿ 145, 2023ರಲ್ಲಿ 156, 2024ರಲ್ಲಿ 172 ಹಾಗೂ ಈ ವರ್ಷ ಸುಮಾರು 225ಕ್ಕೂ ಅಧಿಕ ವಿದ್ಯಾರ್ಥಿಗಳು ಎಂಬಿಬಿಎಸ್ ಸೀಟು ಪಡೆದಿದ್ದಾರೆ. ಇದುವರೆಗೆ ಸಂಸ್ಥೆಯಿಂದ ಸುಮಾರು 1,450 ವಿದ್ಯಾರ್ಥಿಗಳು ಎಂಬಿಬಿಎಸ್ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ಭಕ್ತರಿಂದ ಚಿನ್ನ ಎಗರಿಸಿ, ಪೊಲೀಸರಿಗೆ ಸಿಕ್ಕಿಬಿದ್ದ ಸಾಧುಗಳು

**ಉದಯವಾಹಿನಿ, ಗೋಕರ್ಣ**

ಧಾರ್ಮಿಕ ಕಾರ್ಯ ಮೂಲಕ ಸಮಸ್ಯೆ ಪರಿಹರಿಸುವುದಾಗಿ ನಂಬಿಸಿ 8 ಲಕ್ಷ ಮೌಲ್ಯದ ಚಿನ್ನಾಭರಣ ಒಯ್ದಿದ್ದ ಸಾಧುಗಳನ್ನು ಬುಧವಾರ ಪೊಲೀಸರು ಪತ್ತೆ ಮಾಡಿ, ವಾರಸುದಾರರಿಗೆ ಚಿನ್ನಾಭರಣ ಒಪ್ಪಿಸಿದ್ದಾರೆ.ತೆಲಂಗಾಣದ ಮನೋಹರ ಕುಲಕರ್ಣಿ ಎಂಬುವವರು ತಮ್ಮ ಪತ್ನಿಯೊಂದಿಗೆ ಗೋಕರ್ಣಕ್ಕೆ ಬುಧವಾರ, ದೇವಾಲಯಗಳ ದರ್ಶನ ಮಾಡಿ ತಮ್ಮ ಪರಿಚಯದ ಪುರೋಹಿತರ ಮನೆಗೆ ತೆರಳಿದ್ದರು. ಅದೇ ಸಮಯದಲ್ಲಿ ಮಧ್ಯಪ್ರದೇಶ ಮೂಲದ ಕೆಲ ಸಾಧುಗಳು, ಈ ದಂಪತಿಯನ್ನು ಭೇಟಿಯಾಗಿ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದರು. ಮುಂದಿನ ದಿನಗಳಲ್ಲಿ ಗಂಡಾಂತರ ಇದೆ ಎಂದು ಹೆದರಿಸಿದರು. ಈ ಸಮಸ್ಯೆಗೆ ಪರಿಹಾರವೆಂದರೆ ತಮ್ಮ ಬಳಿಯಿರುವ ಚಿನ್ನಾಭರಣ ದಾನ ಮಾಡಬೇಕು ಮತ್ತು 1 ತಿಂಗಳವರೆಗೆ ಈ ವಿಷಯ ಯಾರಿಗೂ ತಿಳಿಸಬಾರದು ಎಂದು ಹೆದರಿಸಿದ್ದಾರೆ. ಇದರಿಂದ ಆಘಾತಕ್ಕೆ ಒಳಗಾದ ದಂಪತಿ ತಕ್ಷಣ ಕೈಯಲ್ಲಿದ್ದ ನಾಲ್ಕು ಚಿನ್ನದ ಬಳೆ ಮತ್ತು ಉಂಗುರು ತೆಗೆದು ಸಾಧುಗಳಿಗೆ ಕೊಟ್ಟಿದ್ದಾರೆ. ನಂತರ ದಂಪತಿ ತಮ್ಮ ಪುರೋಹಿತರ ಬಳಿ ವಿಷಯ ತಿಳಿಸಿದ್ದಾರೆ. ಪುರೋಹಿತರು ಕೂಡಲೇ ಪೊಲೀಸರನ್ನು ಸಂಪರ್ಕಿಸಿ ಘಟನೆ ವಿವರಿಸಿದ್ದಾರೆ. ನಂತರ ಪೊಲೀಸರು ಸಿಸಿಟಿವಿ ಕ್ಯಾಮರಾದ ಮೂಲಕ ಪರಿಶೀಲಿಸಿ, ಕಾರ್ಯಾಚರಣೆ ನಡೆಸಿದ್ದಾರೆ.

## ಆಳಂದ ಸಕ್ಕರೆ ಕಾರ್ಖಾನೆ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ

**ಉದಯವಾಹಿನಿ, ಕಲಬುರಗಿ**

ನಗರದ ಆಳಂದ ರಸ್ತೆಯ ಡಿ.ಕೆ.ಪಾಟೀಲ ಕಲ್ಯಾಣ ಮಂಟಪದಲ್ಲಿ ಆಳಂದ ತಾಲ್ಲೂಕಿನ ಭೂಸನೂರದ ಸಹಕಾರಿ ಸಕ್ಕರೆ ಕಾರ್ಖಾನೆಯ 2025–26ನೇ ಸಾಲಿನ 45ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಜರುಗಿತು. ಮಹಾಸಭೆಯ ಅಧ್ಯಕ್ಷರಾದ ಗುರುಲಿಂಗ ಜಂಗಮ ಎಸ್.ಮಾಲಿಪಾಟೀಲ (ಧಂಗಾಪೂರ) ಅವರ ಅನುಪಸ್ಥಿತಿಯಲ್ಲಿ ಕಾರ್ಖಾನೆಯ ಉಪಾಧ್ಯಕ್ಷರಾದ ಸುಭಾಷ ಬಿ.ಮುರುಡ ಬೆಳಮಗಿ ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.ಕಾರ್ಖಾನೆಯ ಕಾರ್ಯವ್ಯಾಪ್ತಿಯಾದ ಆಳಂದ, ಅಫಜಲಪೂರ, ಕಮಲಾಪೂರ ಮತ್ತು ಕಲಬುರಗಿ ತಾಲ್ಲೂಕಿನ ಸುಮಾರು 325 ಶೇರು ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ಭಾಗಿಯಾಗಿದ್ದರು. ಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ, ಕಬ್ಬಿನ ಸಸಿಗೆ ನೀರು ಉಣಿಸುವುದರ ಮೂಲಕ ರೈತ ಗೀತೆಯೊಂದಿಗೆ ಪ್ರಾರಂಭಿಸಲಾಯಿತು.


ಉದಯವಾಹಿನಿ ಚಿತ್ರ

## ಹಿಂದುತ್ವದೊಂದಿಗೆ ಶರಣರ ಹೆಸರು ಸೇರ್ಪಡೆಗೆ ವಿರೋಧ

**ಉದಯವಾಹಿನಿ, ಕಲಬುರಗಿ**

ಹಿಂದುತ್ವದೊಂದಿಗೆ ಬಸವಾದಿ ಶರಣರ ಹೆಸರು ಸೇರಿಸಿರುವುದನ್ನು ಖಂಡಿಸಿ ಬಸವ ತತ್ವ ಹಾಗೂ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯಿಂದ ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.ಕನ್ನಡ ಭವನದ ಆವರಣದಲ್ಲಿ ಜಮಾಯಿಸಿದ ನೂರಾರು ಬಸವ ಅಭಿಮಾನಿಗಳು ಬಸವಾದಿ ಶರಣರ ಪರ ಜೈಕಾರ ಮೊಳಗಿಸಿದರು. 'ಸೆಪ್ಟೆಂಬರ್ 27ರಂದು ನಗರದ ಎನ್.ವಿ. ಮೈದಾನದಲ್ಲಿ ಕಣ್ಣೇರಿಯ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ನಡೆಯುತ್ತಿರುವ ಬಸವಾದಿ ಶಿವಶರಣರ ಹಿಂದೂ ಸಮಾವೇಶದ ಹಿಂದೆ ಹುನ್ನಾರವಿದೆ. ಅಂದು ಶರಣರ ಮಾರಣ ಹೋಮ ನಡೆಸಿದವರೇ ಇದೀಗ ಈ ಸಮಾವೇಶದ ಸೋಗಿನಲ್ಲಿ ಮತ್ತೆ ಬರುತ್ತಿದ್ದಾರೆ. ಲಿಂಗಾಯತ ಮಠಾಧೀಶರಾದ ಕಣ್ಣೇರಿ ಸ್ವಾಮೀಜಿಯನ್ನು ಮುಂದೆ ಮಾಡಿಕೊಂಡು ಆಟ ನಡೆಸುತ್ತಿದ್ದಾರೆ. ಕಣ್ಣೇರಿ ಸ್ವಾಮೀಜಿ ಲಿಂಗಾಯತ ವಟುಗಳಿಗೆ ಯಜ್ಞೋಪವಿತ್ತ ಸಂಸ್ಕಾರ ನೀಡಿ ಹೋಮ ಹವನ ನಡೆಸಿದ್ದ ವಿಡಿಯೊಗಳು ಹರಿದಾಡಿದ್ದವು. ಹೀಗೆಯೇ ಬಿಟ್ಟರೆ ಇಷ್ಟಲಿಂಗ ತೆಗೆಸಿ ಜನಿವಾರ ಹಾಕುತ್ತಾರೆ' ಎಂದು ಪ್ರತಿಭಟನಕಾರರು ವಾಗ್ದಾಳಿ ನಡೆಸಿದರು.



ಉದಯವಾಹಿನಿ ಚಿತ್ರ

ಮಂಗಳೂರಲ್ಲಿ ಜ್ಯೂನಿಯರ್ ವಿದ್ಯಾರ್ಥಿಗಳ ಮೇಲೆ ಸೀನಿಯರ್ಸ್ ವಿದ್ಯಾರ್ಥಿಗಳು ಭೀಕರವಾಗಿ ಹಲ್ಲೆಗೈದು ರ್‍ಯಾಗಿಂಗ್ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ

# ಕೊಠಡಿಯಲ್ಲಿ ಕೂಡಿಹಾಕಿ ಅಮಾನುಷ ಹಲ್ಲೆ; ಸೀನಿಯರ್ಸ್ ವಿರುದ್ಧ ಎಫ್‌ಐಆರ್

**ಉದಯವಾಹಿನಿ, ಮಂಗಳೂರು**

ನಗರದ ಪಾಂಡೇಶ್ವರದಲ್ಲಿರುವ ಖಾಸಗಿ ಕಾಲೇಜಿನ ಪ್ರಥಮ ವರ್ಷದ ಬಿಬಿಎ ವಿದ್ಯಾರ್ಥಿಗಳಿಗೆ ಸೀನಿಯರ್ ವಿದ್ಯಾರ್ಥಿಗಳು ಸಿನಿಮೀಯ ರೀತಿಯಲ್ಲಿ ಕಿರುಕುಳ ನೀಡಿ, ಕೊಠಡಿಯಲ್ಲಿ ಕೂಡಿಹಾಕಿ ಬಟ್ಟೆ ಬಿಚ್ಚಿಸಿ ಅಮಾನುಷವಾಗಿ ಹಲ್ಲೆ ನಡೆಸಿರುವ ರ್‍ಯಾಗಿಂಗ್ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಈ ಬಗ್ಗೆ ಮಂಗಳೂರು ನಗರ ಪೊಲೀಸ್ ಕಮೀಷನರ್ ಸುಧೀರ್ ಕುಮಾರ್ ರೆಡ್ಡಿ ಮಾಹಿತಿ ನೀಡಿದ್ದಾರೆ.ಕೊಲೆ ಯತ್ನ, ಅಪಹರಣ ಹಾಗೂ ರ್‍ಯಾಗಿಂಗ್ ಕೃತ್ಯಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ವಿದ್ಯಾರ್ಥಿ ನೀಡಿದ ದೂರಿನ ಮೇರೆಗೆ ಮಂಗಳೂರು ದಕ್ಷಿಣ (ಪಾಂಡೇಶ್ವರ) ಪೊಲೀಸ್ ಠಾಣೆಯಲ್ಲಿ 9 ಮಂದಿ ವಿದ್ಯಾರ್ಥಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಮಂಗಳೂರಿನ ಪಾಂಡೇಶ್ವರದ ಖಾಸಗಿ ಕಾಲೇಜಿನ ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಕೇರಳದ ತ್ರಿಶೂರ್ ಮೂಲದ 19 ವರ್ಷದ ವಿದ್ಯಾರ್ಥಿ ಹಲ್ಲೆಗೊಳಗಾದ ದೂರುದಾರರಾಗಿದ್ದಾರೆ. ಇವರ ಸಹಪಾಠಿ ಕೂಡ ಗಂಭೀರ ಹಲ್ಲೆಗೊಳಗಾಗಿದ್ದಾರೆ.

ಬೈಕ್‌ನಲ್ಲಿ ಅಪಹರಿಸಿ ಕೊಠಡಿಯಲ್ಲಿ ಕೂಡಿಹಾಕಿದ ಸೀನಿಯರ್ಸ್ ಸೆ.19ರಂದು ಮಧ್ಯಾಹ್ನ ಇಬ್ಬರೂ ಕಾಲೇಜಿನಿಂದ ಹೊರಗೆ ನಡೆದುಕೊಂಡು ಹೋಗುತ್ತಿದ್ದಾಗ, ಹಿಂದಿನಿಂದ ಬಂದ ಸೀನಿಯರ್ ವಿದ್ಯಾರ್ಥಿಗಳ ಗುಂಪೊಂದು ಇವರನ್ನು ಅಡ್ಡಗಟ್ಟಿದೆ. ಬಳಿಕ ಇಬ್ಬರನ್ನು ಬಲವಂತವಾಗಿ ಎಳೆದುಕೊಂಡು ಬೈಕಿನಲ್ಲಿ ಕೂರಿಸಿದ್ದಾರೆ. ಇದನ್ನು ಪ್ರಶ್ನಿಸಿದಾಗ ಕೈಗಳಿಂದ ಥಳಿಸಿ, ಬಲವಂತವಾಗಿ ಅಪಹರಿಸಿಕೊಂಡು ಹೋಗಿ ನಿರ್ಜನ ಮನೆಯೊಂದರ ಕೊಠಡಿಯಲ್ಲಿ ಕೂಡಿಹಾಕಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.



1 : ಕೊಠಡಿಯಲ್ಲಿ ಕೂಡಿಹಾಕಿದ ಸೀನಿಯರ್ಸ್
2 : ಹ್ಯಾಂಗರ್ ಕಬ್ಬಿಣದ ಪಂಚ್‌ನಿಂದ ಹಲ್ಲೆ
3 : ನೀರು ಚಾಕುವಿನಿಂದ ಕತ್ತರಿಸುವ ಬೆದರಿಕೆ

ಬಟ್ಟೆ ಬಿಚ್ಚಿಸಿ ಬೆಲ್ಟ್, ಹ್ಯಾಂಗರ್ ಹಾಗೂ ಕಬ್ಬಿಣದ ಪಂಚ್‌ನಿಂದ ಹಲ್ಲೆ ಕೊಠಡಿಯಲ್ಲಿ ಇಬ್ಬರೂ ವಿದ್ಯಾರ್ಥಿಗಳ ಬಟ್ಟೆಗಳನ್ನು ಬಿಚ್ಚಿಸಿ ಕೇವಲ ಚಡ್ಡಿಯಲ್ಲಿ ನಿಲ್ಲಿಸಿದ್ದಾರೆ. ವಿದ್ಯಾರ್ಥಿಗಳು ಚೀರಾಡಿದಾಗ ಬಾಯಿಗೆ ಬಟ್ಟೆ ಒತ್ತಿ ಹಿಡಿದು, ಬೆಲ್ಟ್‌ನಿಂದ ಮತ್ತು ಹ್ಯಾಂಗರ್‌ನಿಂದ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಈ ವೇಳೆ ಆರೋಪಿಯೊಬ್ಬ ಕೊಲ್ಲುವ ಉದ್ದೇಶದಿಂದಲೇ ಕುತ್ತಿಗೆ ಮತ್ತು ತಲೆಗೆ ಗುರಿಯಿಟ್ಟು ಅಪಾಯಕಾರಿ 'ಕಬ್ಬಿಣದ ಪಂಚ್'ನಿಂದ ಹೊಡೆದಿದ್ದಾನೆ. ಈ ಕೃತ್ಯವನ್ನು ಮೊಬೈಲ್‌ನಲ್ಲಿಯೂ ವಿಡಿಯೋ ಮಾಡಿಕೊಂಡಿದ್ದಾರೆ ಎಂದು ಸಂತ್ರಸ್ತ ವಿದ್ಯಾರ್ಥಿ ದೂರಿನಲ್ಲಿ ಆರೋಪಿಸಿದ್ದಾರೆ.

> (BNS ಕಲಂ 140(3), 127(2), 115(2), 118(1), 351(2), 109, 190 ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 116) ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ.
> – ಪೊಲೀಸ್ ಕಮೀಷನರ್

**9 ಮಂದಿ ವಿರುದ್ಧ ಎಫ್‌ಐಆರ್**

ದೂರು ಸ್ವೀಕರಿಸಿದ ಮಂಗಳೂರು ದಕ್ಷಿಣ ಠಾಣಾ ಪೊಲೀಸರು ನಾಸೀದ್ ಅಮೀರ್, ಆದಿಲ್ ಎಂ, ಅರ್ಶಕ್, ಅನೀಶ್, ಉವೈಸ್, ರೋಹನ್ ರಮೇಶ್, ಆದಿಲ್ ವಿ.ಪಿ, ರೆಹಾನ್ ಎಂ.ಪಿ ಹಾಗೂ ಶಿನಾಸ್ ಎಂಬ 9 ಮಂದಿ ಸೀನಿಯರ್ ವಿದ್ಯಾರ್ಥಿಗಳ ವಿರುದ್ಧ ಕೊಲೆ ಯತ್ನ, ಅಪಹರಣ, ಅಕ್ರಮ ಬಂಧನ, ಹಲ್ಲೆ ಹಾಗೂ ರ್‍ಯಾಗಿಂಗ್ ನಿಷೇಧ.

ಹಲ್ಲೆಯಿಂದ ಬಸವಳಿದು ಕುಡಿಯಲು ನೀರು ಕೇಳಿದಾಗ, ಆರೋಪಿಗಳು ಕಲುಷಿತ ನೀರನ್ನು ತಂದುಕೊಟ್ಟಿದ್ದು, ಅದನ್ನು ಕುಡಿಯಲು ನಿರಾಕರಿಸಿದಾಗ ಮೈಮೇಲೆ ಚೆಲ್ಲಿದ್ದಾರೆ. "ಈ ರ್‍ಯಾಗಿಂಗ್ ವಿಚಾರವನ್ನು ಪೊಲೀಸರಿಗೆ ಅಥವಾ ಯಾರಿಗಾದರೂ ತಿಳಿಸಿದರೆ ಕಾಲೇಜಿನಲ್ಲಿ ನಿಮ್ಮನ್ನು ಚಾಕುವಿನಿಂದ ತುಂಡು ತುಂಡಾಗಿ ಕತ್ತರಿಸಿ ಹಾಕುತ್ತೇವೆ" ಎಂದು ಜೀವಬೆದರಿಕೆ ಹಾಕಿದ್ದರು. ಸಂಜೆ 6 ಗಂಟೆಯವರೆಗೆ ಕೂಡಿಹಾಕಿ ಈ ಅಮಾನುಷ ಕೃತ್ಯ ಎಸಗಲಾಗಿದೆ. ನಂತರ ಕಾಲೇಜಿಗೆ ಬಂದಾಗಲೂ "ಕ್ಲೀನ್ ಶೇವ್ ಮಾಡಿಕೊಂಡೇ ಕ್ಲಾಸಿಗೆ ಬರಬೇಕು.

### ಅಥ್ಲೇಟ್ ಆಗಿದ್ದ ಕಮಲ್‌ಜೀತ್ ಶೂಟರ್ ಆಗಿದ್ದೇಗೆ ಗೊತ್ತಾ?

# ಶೂಟಿಂಗ್‌ನಲ್ಲಿ ಭಾರತಕ್ಕೆ ಚಿನ್ನ



ನಗೋಯದಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತನ್ನ ಎರಡನೇ ಚಿನ್ನದ ಪದಕವನ್ನು ಗೆದ್ದುಕೊಂಡಿದೆ.

ಜಪಾನ್‌ನ ನಗೋಯಾದಲ್ಲಿ ಶುಕ್ರವಾರ ನಡೆದ ಮಿಶ್ರ 10 ಮೀ ಪಿಸ್ತೂಲ್ ಶೂಟಿಂಗ್ ಸ್ಪರ್ಧೆಯಲ್ಲಿ ಸುರುಚಿ ಮತ್ತು ಕಮಲ್‌ಜೀತ್ ಜೋಡಿ 484.6 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದುಕೊಂಡಿತು.

ಈ ಏಷ್ಯನ್ ಕ್ರೀಡಾಕೂಟದಲ್ಲಿ ಶೂಟಿಂಗ್‌ನಲ್ಲಿ ಇದು ಮೊದಲ ಚಿನ್ನದ ಪದಕವಾಗಿದೆ. ಭಾರತೀಯ ಶೂಟರ್‌ಗಳು ಇದುವರೆಗೆ ಐದು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳು ಸೇರಿದಂತೆ 10 ಪದಕಗಳನ್ನು ಗೆದ್ದಿದ್ದಾರೆ. ಇದಕ್ಕೂ ಮೊದಲು, ಮಹಿಳಾ ಕ್ರಿಕೆಟ್ ತಂಡವು ಕ್ರೀಡಾಕೂಟದ ಮೊದಲ ಚಿನ್ನದ ಪದಕವನ್ನು ಗೆದ್ದಿತ್ತು.

**ಪದಕ ಪಟ್ಟಿಯಲ್ಲಿ 12ನೇ ಸ್ಥಾನಕ್ಕೆ ತಲುಪಿದ ಭಾರತ**

ಈ ಚಿನ್ನದ ಪದಕದೊಂದಿಗೆ ಭಾರತ ಪದಕ ಪಟ್ಟಿಯಲ್ಲಿ 12ನೇ ಸ್ಥಾನಕ್ಕೆ ಏರಿದೆ. ಭಾರತ ಇದುವರೆಗೆ ಎರಡು ಚಿನ್ನ, ಎಂಟು ಬೆಳ್ಳಿ ಮತ್ತು ಒಂಬತ್ತು ಕಂಚು ಸೇರಿದಂತೆ 19 ಪದಕಗಳನ್ನು ಗೆದ್ದಿದೆ. ಏತನ್ಮಧ್ಯೆ, 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದ ಫೈನಲ್‌ನಲ್ಲಿ ಭಾರತದ ಜೋಡಿ ಸುರುಚಿ ಮತ್ತು ಕಮಲ್‌ಜೀತ್ ಬೆಳ್ಳಿ ವಿಜೇತ ದಕ್ಷಿಣ ಕೊರಿಯಾಕ್ಕಿಂತ 6.6 ಅಂಕಗಳಷ್ಟು ಮುಂದಿದ್ದರು. ಭಾರತ ಅದ್ಭುತ ಪ್ರದರ್ಶನ ಮೂಲಕ 484.6 ಅಂಕಗಳನ್ನು ಗಳಿಸಿದರೆ, ದಕ್ಷಿಣ ಕೊರಿಯಾ 478.0 ಅಂಕಗಳನ್ನು ಕಲೆಹಾಕಿತು. ಇರಾನ್ 415.8 ಅಂಕಗಳೊಂದಿಗೆ ಕಂಚಿನ ಪದಕಕ್ಕೆ ತೃಪ್ತಿಪಟ್ಟಿತು.

**ಏಷ್ಯನ್ ದಾಖಲೆ ಬರೆದ ಭಾರತ:** ಶೂಟಿಂಗ್‌ನ ಅಂತಿಮ ಸುತ್ತಿನಲ್ಲಿ ನಾಲ್ಕು ತಂಡಗಳಿದ್ದವು ಮತ್ತು ಭಾರತ 484.6 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿತ್ತು. ದಕ್ಷಿಣ ಕೊರಿಯಾ 478.0 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದು ಬೆಳ್ಳಿ ಪದಕ ಗೆದ್ದರೆ, ಇರಾನ್ 415.8 ಅಂಕಗಳೊಂದಿಗೆ ಮೂರನೇ ಸ್ಥಾನ ಗಳಿಸಿ ಕಂಚಿನ ಪದಕ ಗೆದ್ದಿತು. ಇಂಡೋನೇಷ್ಯಾ 349.4 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದುಕೊಂಡಿತು. ಭಾರತ 484.6 ಅಂಕಗಳೊಂದಿಗೆ ಹೊಸ ಏಷ್ಯನ್ ದಾಖಲೆ ಸ್ಥಾಪಿಸಿತು. ಇದಕ್ಕೂ ಮೊದಲು, ಈ ವರ್ಷದ ಫೆಬ್ರವರಿಯಲ್ಲಿ 481.3 ಅಂಕಗಳನ್ನು ಗಳಿಸಿದ್ದ ಉಜ್ಬೇಕಿಸ್ತಾನ್ ಏಷ್ಯನ್ ದಾಖಲೆಯನ್ನು ಹೊಂದಿತ್ತು. ಇದೀಗ ಈ ದಾಖಲೆಯನ್ನು ಕಮಲ್ಜೀತ್-ಸುರುಚಿ ಜೋಡಿ ಮುರಿದ ಇತಿಹಾಸ ಸೃಷ್ಟಿಸಿದ್ದಾರೆ.

**ಕಮಲ್‌ಜೀತ್ ಮತ್ತು ಸುರುಚಿ ಸಿಂಗ್ ಅವರ ಅಂತಿಮ ಸ್ಕೋರ್‌ಗಳು**

**ಭಾರತ – 484.6 (ಚಿನ್ನ), ದಕ್ಷಿಣ ಕೊರಿಯಾ – 478.0 (ಬೆಳ್ಳಿ), ಇರಾನ್ – 415.8 (ಕಂಚು)**

20th Asian Games
Aichi-Nagoya 2026

**ಅರ್ಹತಾ ಸುತ್ತಿನಲ್ಲಿಯೂ ದಾಖಲೆ ಸೃಷ್ಟಿ:** ಕಮಲ್‌ಜಿತ್ ಮತ್ತು ಸುರುಚಿ ಫೈನಲ್‌ಗೂ ಮೊದಲು ಅರ್ಹತಾ ಸುತ್ತಿನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದರು. ಈ ಭಾರತೀಯ ಜೋಡಿ ಒಟ್ಟು 587–29x ಅಂಕಗಳನ್ನು ಗಳಿಸುವ ಮೂಲಕ ಏಷ್ಯನ್ ಅರ್ಹತಾ ಸುತ್ತಿನ ದಾಖಲೆಯನ್ನು ಸ್ಥಾಪಿಸಿತು.

ಅರ್ಹತಾ ಸುತ್ತಿನಲ್ಲಿ ಭಾರತ ಮೊದಲ ಸ್ಥಾನ ಗಳಿಸಿದರೆ, ಇರಾನ್ 584-17x ಅಂಕಗಳೊಂದಿಗೆ ಎರಡನೇ ಸ್ಥಾನ, ದಕ್ಷಿಣ ಕೊರಿಯಾ 582–23x ಅಂಕಗಳೊಂದಿಗೆ ಮೂರನೇ ಸ್ಥಾನ ಮತ್ತು ಇಂಡೋನೇಷ್ಯಾ 580–30x ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಗಳಿಸಿತು. ಅಗ್ರ ನಾಲ್ಕು ಜೋಡಿಗಳು ಅಂತಿಮ ಸುತ್ತಿಗೆ ಅರ್ಹತೆ ಪಡೆದವು. ಚೀನಾ ಮತ್ತು ವಿಯೆಟ್ನಾಂ ಅಂತಿಮ ಸುತ್ತಿಗೆ ಅರ್ಹತೆ ಪಡೆಯುವಲ್ಲಿ ವಿಫಲವಾದವು.

**ಗಾಯದಿಂದಾಗಿ ಅಥ್ಲೆಟಿಕ್ಸ್ ತ್ಯಜಿಸಬೇಕಾದ ಕಮಲ್‌ಜೀತ್:** ಕಮಲ್‌ಜೀತ್ ಹರಿಯಾಣದ ರೇವಾರಿಯ ಸುಲ್ಖಾ ಗ್ರಾಮದವರಾಗಿದ್ದು ಆರಂಭದಲ್ಲಿ ಇವರು ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದರು. ಆದಾಗ್ಯೂ, ಗಾಯದಿಂದಾಗಿ 2019ರಲ್ಲಿ ಅವರು ಅಥ್ಲೆಟಿಕ್ಸ್ ತ್ಯಜಿಸಬೇಕಾಯಿತು. ನಂತರ ಅವರು ಶೂಟಿಂಗ್‌ನಲ್ಲಿ ವೃತ್ತಿಜೀವನವನ್ನು ಮುಂದುವರಿಸಿದರು ಎರಡು ಮೂರು ವರ್ಷಗಳ ಕಠಿಣ ಪರಿಶ್ರಮದ ನಂತರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

## ನವಜೋತ್ ಸಿಧು ನಿರ್ಮಿಸಿದ್ದ 38 ವರ್ಷಗಳ ಹಳೆಯ ದಾಖಲೆ ಸರಿಗಟ್ಟಿದ್ದ ಮ್ಯಾಥ್ಯೂ ಬ್ರೀಟ್ಜ್ಕೆ



ದಕ್ಷಿಣ ಆಫ್ರಿಕಾದ ಸ್ಟಾರ್ ಬ್ಯಾಟರ್ ಮ್ಯಾಥ್ಯೂ ಬ್ರೀಟ್ಜ್ಕೆ ಸದ್ಯ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಶುಕ್ರವಾರ ನಡೆದಿದ್ದ ಆಸ್ಟ್ರೇಲಿಯಾ ವಿರುದ್ಧ ಮೊದಲ ಏಕದಿನ ಪಂದ್ಯದಲ್ಲಿ ಅದ್ಭುತ ಶತಕದೊಂದಿಗೆ ಭಾರತದ ಮಾಜಿ ಕ್ರಿಕೆಟರ್ ನವಜೋತ್ ಸಿಂಗ್ ಸಿಧು ಅವರ 38 ವರ್ಷದ ಹಳೆಯ ದಾಖಲೆಯನ್ನು ಸರಿಗಟ್ಟಿದ್ದಾರೆ.

**ಪಂದ್ಯ ಹೀಗಿತ್ತು!:** ಈ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಅದ್ಭುತ ಪ್ರದರ್ಶನ ನೀಡಿ ಆಸ್ಟ್ರೇಲಿಯಾವನ್ನು 67 ರನ್‌ಗಳಿಂದ ಮಣಿಸಿತು. ಈ ಗೆಲುವಿನೊಂದಿಗೆ ದಕ್ಷಿಣ ಆಫ್ರಿಕಾ ತಂಡವು ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹರಿಣ ಪಡೆ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್‌ಗಳ ನಷ್ಟಕ್ಕೆ 297 ರನ್‌ಗಳನ್ನು ಕಲೆಹಾಕಿತು. ಈ ಗುರಿಯನ್ನು ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವು 41.2 ಓವರ್‌ಗಳಲ್ಲಿ 230 ರನ್‌ಗಳಿಗೆ ಆಲೌಟ್ ಆಯ್ತು. ದಕ್ಷಿಣ ಆಫ್ರಿಕಾ ಪರ, ಆರಂಭಿಕ ಆಟಗಾರ ಮ್ಯಾಥ್ಯೂ ಬ್ರೀಟ್ಜ್ಕೆ ಶತಕ ಗಳಿಸುವ ಮೂಲಕ ತಂಡವು ದೊಡ್ಡ ಸ್ಕೋರ್ ದಾಖಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬ್ರೀಟ್ಜ್ಕೆ 106 ಎಸೆತಗಳಲ್ಲಿ 14 ಬೌಂಡರಿ ಮತ್ತು 2 ಸಿಕ್ಸರ್‌ಗಳ ಸಹಾಯದಿಂದ ಅದ್ಭುತ 112 ರನ್ ಗಳಿಸಿದರು. ಇದರೊಂದಿಗೆ ಏಕದಿನ ಸ್ವರೂಪದಲ್ಲಿ ತಮ್ಮ ಮೊದಲ 14 ಇನ್ನಿಂಗ್ಸ್‌ಗಳಲ್ಲಿ ಅತಿ ಹೆಚ್ಚು ಅರ್ಧಶತಕಗಳನ್ನು ಗಳಿಸಿದ ಮಾಜಿ ಭಾರತೀಯ ಕ್ರಿಕೆಟಿಗ ನವಜೋತ್ ಸಿಧು ಅವರ ದಾಖಲೆಯನ್ನು ಅವರು ಸರಿಗಟ್ಟಿದ್ದಾರೆ. ಸಿಧು ತಮ್ಮ ಮೊದಲ 14 ಇನ್ನಿಂಗ್ಸ್‌ಗಳಲ್ಲಿ ಎಂಟು ಅರ್ಧಶತಕಗಳನ್ನು ಗಳಿಸಿದ್ದರು. ಗಮನಾರ್ಹ ವಿಚಾರ ಎಂದರೆ, ಬ್ರೀಟ್ಜ್ಕೆ ಕೂಡ ಎಂಟು ಅರ್ಧಶತಕಗಳನ್ನು (ಇದರಲ್ಲಿ ಎರಡು ಶತಕಗಳೂ ಸೇರಿವೆ) ಗಳಿಸಿದ್ದಾರೆ. ಕ್ರಿಕೆಟ್‌ನಲ್ಲಿ ಈ ಅಪರೂಪದ ಸಾಧನೆ ಮಾಡಿರುವವರು ಈ ಇಬ್ಬರು ಆಟಗಾರರು ಮಾತ್ರ.

**ಅತಿ ಹೆಚ್ಚು ರನ್‌ಗಳಿಸಿ ದಾಖಲೆ ಮುರಿದ ಬ್ರೀಟ್ಜ್ಕೆ:** ಸಿಧು ತಮ್ಮ ಮೊದಲ 14 ಏಕದಿನ ಪಂದ್ಯಗಳಲ್ಲಿ 634 ರನ್ ಗಳಿಸಿದ್ದರು, ಆದರೆ ಬ್ರೀಟ್ಜ್ಕೆ 822 ರನ್ ಕಲೆಹಾಕಿದ್ದಾರೆ. 14 ಪಂದ್ಯಗಳ ನಂತರ ಬ್ಯಾಟರ್ ಒಬ್ಬರು ಗಳಿಸಿದ ಗರಿಷ್ಠ ರನ್‌ಗಳ ದಾಖಲೆಯನ್ನು ಬ್ರೀಟ್ಜ್ಕೆ ತಮ್ಮದಾಗಿಸಿ ಕೊಂಡಿದ್ದಾರೆ. ಈ ಹಿಂದೆ ಈ ದಾಖಲೆಯು ಪಾಕಿಸ್ತಾನದ ಮಾಜಿ ನಾಯಕ ಇಂಜಮಾಮ್-ಉಲ್-ಹಕ್ ಅವರ ಹೆಸರಿನಲ್ಲಿತ್ತು, ಅವರು 769 ರನ್ ಗಳಿಸಿದ್ದರು. ಬ್ರೀಟ್ಜ್ಕೆ ತಮ್ಮ ಚೊಚ್ಚಲ ಅಂತರಾಷ್ಟ್ರೀಯ ಏಕದಿನ ಪಂದ್ಯದಲ್ಲೇ 150 ರನ್ ಗಳಿಸುವ ಮೂಲಕ ಗಮನ ಸೆಳೆದಿದ್ದರು. ಉಳಿದಂತೆ ಈ ಪಂದ್ಯದಲ್ಲಿ ಮಧ್ಯಮ ಕ್ರಮಾಂಕದಲ್ಲಿ, ಮಾರ್ಕೊ ಜಾನ್ಸೆನ್ ಕೂಡ ಆಸ್ಟ್ರೇಲಿಯಾದ ಬೌಲರ್‌ಗಳ ಬೆವರಿಳಿಸಿದರು. ಕೇವಲ 59 ಎಸೆತಗಳಲ್ಲಿ 75 ರನ್ ಗಳಿಸಿದರು. ನಾಥನ್ ಎಲಿಸ್ ಆಸ್ಟ್ರೇಲಿಯಾ ಪರ ಅತ್ಯಂತ ಯಶಸ್ವಿ ಬೌಲರ್ ಆಗಿದ್ದರು, 10 ಓವರ್‌ಗಳಲ್ಲಿ 57 ವಿಕೆಟ್‌ಗೆ 3 ವಿಕೆಟ್ ಪಡೆದರು.

## ಹಾಕಿಯಲ್ಲಿ ಜಪಾನ್ ಮಣಿಸಿ ಸೆಮಿಫೈನಲ್ ತಲುಪಿದ ಭಾರತ



ಏಷ್ಯನ್ ಗೇಮ್ಸ್

**44 ವರ್ಷಗಳ ಬಳಿಕ ಚಿನ್ನದ ನಿರೀಕ್ಷೆಯಲ್ಲಿ ಭಾರತ**

ಭಾರತೀಯ ಮಹಿಳಾ ಹಾಕಿ ತಂಡವು ಜಪಾನ್ ತಂಡವನ್ನು 3–1 ಅಂತರದಿಂದ ಮಣಿಸಿ 2026ರ ಏಷ್ಯನ್ ಗೇಮ್ಸ್‌ನಲ್ಲಿ ಸತತ ನಾಲ್ಕನೇ ಗೆಲುವು ದಾಖಲಿಸಿತು. ಇದರೊಂದಿಗೆ ತಂಡವು ಪೂಲ್-ಬಿ ನಲ್ಲಿ ಅಗ್ರಸ್ಥಾನ ಪಡೆಯುವುದರ ಜೊತೆಗೆ ಸೆಮಿಫೈನಲ್‌ಗೆ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿತು.

**ಪಂದ್ಯದ ಹೈಲೈಟ್ಸ್:** ಈ ಪಂದ್ಯದಲ್ಲಿ ಭಾರತ ಆರಂಭದಿಂದಲೇ ಮುನ್ನಡೆ ಸಾಧಿಸಿತು. ಮೊದಲಾರ್ಧದಲ್ಲಿ 2–0 ಮುನ್ನಡೆ ಸಾಧಿಸಿದ ನಂತರ, ಟೀಮ್ ಇಂಡಿಯಾ ತನ್ನ ವೇಗವನ್ನು ಮತ್ತಷ್ಟು ಹೆಚ್ಚಿಸಿಕೊಂಡಿತು. ನಂತರ ಜಪಾನ್ ಒಂದು ಗೋಲು ಗಳಿಸುವ ಮೂಲಕ ಕಮ್ ಬ್ಯಾಕ್ ಮಾಡಲು ಪ್ರಯತ್ನಿಸಿತು, ಆದರೆ ದ್ವಿತೀಯಾರ್ಧದಲ್ಲಿ ಭಾರತವು ಮತ್ತೊಂದು ಗೋಲು ಗಳಿಸಿ ಪಂದ್ಯವನ್ನು 2 ಗೋಲುಗಳ ಅಂತರದಿಂದ ಗೆದ್ದುಕೊಂಡಿತು. ಮೊದಲಾರ್ಧದ ಆರಂಭದಲ್ಲಿ ಲಾಲ್‌ರೆಮ್ಸಿಯಾಮಿ 5ನೇ ನಿಮಿಷದಲ್ಲಿ ಗೋಲು ಗಳಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಬಳಿಕ ಐದು ಪೆನಾಲ್ಟಿ ಕಾರ್ನರ್‌ಗಳಲ್ಲಿ, ತಂಡವು ಕೇವಲ ಒಂದನ್ನು ಮಾತ್ರ ಗೋಲಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಯಿತು. ಅದರಲ್ಲಿಯೂ ಮೊದಲಾರ್ಧದ ಕೊನೆಯ ಎರಡು ನಿಮಿಷಗಳಲ್ಲಿ, ಭಾರತವು ಸತತ ಮೂರು ಪೆನಾಲ್ಟಿ ಕಾರ್ನರ್‌ಗಳನ್ನು ಪಡೆದಿತ್ತು, ಅದರಲ್ಲಿ ಕೊನೆಯ ಪೆನಾಲ್ಟಿ ಕಾರ್ನರ್‌ನಲ್ಲಿ ನವನೀತ್ ಕೌರ್ ಅವರ ಹೊಡೆದ ಶಾಟ್ ಅನ್ನು ಜಪಾನಿನ ಗೋಲ್‌ಕೀಪರ್ ತಡೆಯುವಲ್ಲಿ ಯಶಸ್ವಿಯಾದರು. ಆದರೆ ಇಶಿಕಾ ರಿಬೌಂಡ್ ಮೂಲಕ ಗೋಲು ಗಳಿಸಿ ಭಾರತದ ಮುನ್ನಡೆ 2–0 ದ್ವಿಗುಣಗೊಳಿಸಿದರು.

**ಆದಾಗ್ಯೂ, ಭಾರತ 1982 ರಿಂದ ಈ ಕ್ರೀಡಾಕೂಟದಲ್ಲಿ ಚಿನ್ನದ ಪದಕಕ್ಕಾಗಿ ಕಾಯುತ್ತಿದೆ. ಭಾರತೀಯ ಮಹಿಳಾ ಹಾಕಿ ತಂಡ ಕೊನೆಯ ಬಾರಿಗೆ 1982ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿತ್ತು. ಹಿಂದಿನ ಹ್ಯಾಂಗ್‌ಝೌನಲ್ಲಿ ನಡೆದ ಕೊನೆಯ ಏಷ್ಯನ್ ಕ್ರೀಡಾಕೂಟದಲ್ಲಿ, ಭಾರತೀಯ ಮಹಿಳಾ ಹಾಕಿ ತಂಡವು ಕಂಚಿನ ಪದಕಕ್ಕೆ ತೃಪ್ತಿಪಡಬೇಕಾಯಿತು.**

**ದ್ವಿತೀಯಾರ್ಧ ಹೀಗಿತ್ತು:** ದ್ವಿತೀಯಾರ್ಧದಲ್ಲಿಯೂ ಭಾರತ ಗೋಲು ಬೇಟೆ ಮುಂದುವರಿಸಿತು. ಮೂರನೇ ಕ್ವಾರ್ಟರ್‌ನ ಆರನೇ ನಿಮಿಷದಲ್ಲಿ ನವನೀತ್ ಅವರ ಗೋಲಿನೊಂದಿಗೆ ಸ್ಕೋರ್ 3–0ಗೆ ತಲುಪಿತು. ಆದಾಗ್ಯೂ, ನಾಲ್ಕನೇ ಕ್ವಾರ್ಟರ್‌ನಲ್ಲಿ ಜಪಾನ್ ಅದ್ಭುತ ಪ್ರದರ್ಶನ ನೀಡಿತು. ಕ್ವಾರ್ಟರ್ ಆರಂಭವಾದ ಕೂಡಲೇ, ಕೊಬಯಕಾವಾ ವೃತ್ತದ ಮೇಲಿನಿಂದ ಪ್ರಬಲವಾದ ಹೊಡೆತವನ್ನು ಹೊಡೆದರು, ಇದನ್ನು ಭಾರತೀಯ ಗೋಲ್‌ಕೀಪರ್ ಸಬಿತಾ ತಡೆಯಲು ಸಾಧ್ಯವಾಗಲಿಲ್ಲ ಇದರಿಂದ ಸ್ಕೋರ್ 3–1 ಆಗಿತ್ತು. ನಂತರ 50ನೇ ನಿಮಿಷದಲ್ಲಿ ಭಾರತಕ್ಕೆ ಮತ್ತೊಂದು ಪೆನಾಲ್ಟಿ ಕಾರ್ನರ್ ಅವಕಾಶ ಸಿಕ್ಕಿತು, ಆದರೆ ತಂಡ ಇದನ್ನು ವ್ಯರ್ಥ ಮಾಡಿತು. ಅಂತಿಮ ವಿಸಿಲ್‌ಗೆ ನಾಲ್ಕು ನಿಮಿಷಗಳ ಮೊದಲು ಜಪಾನ್‌ಗೆ ಪೆನಾಲ್ಟಿ ಕಾರ್ನರ್ ಸಿಕ್ಕಿತು, ಆದರೆ ಭಾರತ ಅದನ್ನು ತಡೆಯುವಲ್ಲಿ ಯಶಸ್ವಿಯಾಯಿತು. ಭಾರತ ಪರ ಭಾರತದ ಪರವಾಗಿ ಲಾಲ್‌ರೆಮ್ಸಿಯಾಮಿ ಹ್ಮಾರ್ಜೋಟೆ (5ನೇ ನಿಮಿಷ), ಇಶಿಕಾ ಚೌಧರಿ (30ನೇ ನಿಮಿಷ) ಮತ್ತು ನವನೀತ್ ಕೌರ್ (36ನೇ ನಿಮಿಷ) ಗೋಲುಗಳನ್ನು ಗಳಿಸಿದರೆ, ಆತಿಥೇಯ ತಂಡದ ಪರವಾಗಿ ಶಿಹೋ ಕೊಬಯಕಾವಾ (46ನೇ ನಿಮಿಷ) ಗೋಲು ಬಾರಿಸಿದರು. ಸೆಮಿಫೈನಲ್‌ಗೆ ಮೊದಲು ಭಾರತ ಸಿಂಗಾಪುರ ವಿರುದ್ಧ ಕೊನೆಯ ಪೂಲ್ ಪಂದ್ಯವನ್ನು ಆಡಲಿದೆ.

## ಪ್ಲಾಸ್ಟಿಕ್ ಸರ್ಜರಿಯಾದ 6 ದಿನಗಳಲ್ಲೇ ಶೂಟಿಂಗ್‌ನಲ್ಲಿ ನಟಿ ಭಾಗಿ



ಕಲಾವಿದರು ಸಿನಿಮಾವೊಂದಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತಾರೆಂಬ ಮಾತನ್ನು ನಾವು ಕೇಳಿದ್ದೇವೆ. ಅದಕ್ಕೀಗ ತಾಜಾ ಉದಾಹರಣೆ, ಮಲಯಾಳಂ ತಾರೆ ಮಹಿಮಾ ನಂಬಿಯಾರ್. ಮತಿ ಮಾರನ್ ನಿರ್ದೇಶನದ 'ಮಂದಾಡಿ' ಚಿತ್ರದಲ್ಲಿನ ತಮ್ಮ ಪಾತ್ರಕ್ಕಾಗಿ ನಟಿ ಅಪಾರ ಶ್ರಮ ವಹಿಸಿದ್ದಾರೆ.

ಭೀಕರ ಅಪಘಾತವೊಂದರ ನಂತರ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡ ಕೇವಲ 6 ದಿನಗಳಲ್ಲೇ ಅವರು ಶೂಟಿಂಗ್ ಸ್ಪಾಟ್‌ಗೆ ಮರಳಿದ್ದರು ಎಂಬುದು ಇದೀಗ ಬಹಿರಂಗಗೊಂಡಿದೆ. ಮುಖಕ್ಕೆ ತೀವ್ರ ಗಾಯಗಳಾಗಿ 20ಕ್ಕೂ ಹೆಚ್ಚು ಹೊಲಿಗೆಗಳು ಬಿದ್ದಿದ್ದರೂ, ಮಹಿಮಾ ಅವರು ಚಿತ್ರದ 'ಉಸುರೆ ನೀಧನ್ ಪುಲ್ಲಾ' ಹಾಡಿನ ಚಿತ್ರೀಕರಣವನ್ನು ಮುಂದುವ ರಿಸಿದರು.

**ಅಪಘಾತದ ನಂತರ ಮುಖಕ್ಕೆ 20ಕ್ಕೂ ಹೆಚ್ಚು ಹೊಲಿಗೆಗಳು**

ಸೂರಿ ಮತ್ತು ಮಹಿಮಾ ನಂಬಿಯಾರ್ ಅಭಿನಯದ ಈ ಚಿತ್ರವು ಸೆಪ್ಟೆಂಬರ್ 10 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಯಿತು. ಪಿ.ಎಸ್.ಮಿತ್ರನ್ ಅವರ 'ಸರ್ದಾರ್ 2' ಚಿತ್ರದೊಂದಿಗೆ ಪೈಪೋಟಿ ನಡೆಸಿತು. ಅದಾಗ್ಯೂ, ಈ ಚಿತ್ರ ಜಾಗತಿಕ ಬಾಕ್ಸ್ ಆಫೀಸ್‌ನಲ್ಲಿ 100 ಕೋಟಿ ರೂಪಾಯಿಗಳ ಗಳಿಕೆಯ ಮೈಲಿಗಲ್ಲನ್ನು ದಾಟಿದೆ. ಸಿನಿಮಾದ ಸಕ್ಸಸ್ ಸೆಲೆಬ್ರೇಶನ್‌ನಲ್ಲಿ, ನಿರ್ದೇಶಕ ಮತಿ ಮಾರನ್ ಅವರು ಮಹಿಮಾ ಅವರಿಗೆ ಆಗಿದ್ದ ಗಾಯಗಳ ತೀವ್ರತೆಯ ಬಗ್ಗೆ ವಿವರಿಸಿದರು ಹಾಗೂ ಅವರ ಬದ್ಧತೆಯನ್ನು ಶ್ಲಾಘಿಸಿದರು. ಆ ಹಾಡಿನಲ್ಲಿ ಮಹಿಮಾ ಅವರ ಕೆಲಸದ ಕುರಿತು ಮಾತನಾಡಿದ ಮತಿ ಮಾರನ್, ಚಿತ್ರೀಕರಣಕ್ಕೆ ಕೆಲವೇ ದಿನಗಳ ಮೊದಲು ಅವರು ಭೀಕರ ಅಪಘಾತಕ್ಕೀಡಾಗಿದ್ದರು ಎಂದು ತಿಳಿಸಿದರು. ಅವರ ಮುಖಕ್ಕೆ ತೀವ್ರ ಗಾಯವಾಗಿತ್ತು ಮತ್ತು ಅವರಿಗೆ 20ಕ್ಕೂ ಹೆಚ್ಚು ಹೊಲಿಗೆಗಳನ್ನು ಹಾಕಲಾಗಿತ್ತು ಎಂದು ಬಹಿರಂಗಪಡಿಸಿದರು.

"ಅವರು ಅಪಘಾತಕ್ಕೀಡಾಗಿದ್ದು ಬಹುತೇಕರಿಗೆ ತಿಳಿದಿದೆ ಎಂದು ನನಗನಿಸುವುದಿಲ್ಲ. ಈ ಹಾಡಿನ ಚಿತ್ರೀಕರಣದ ಕೆಲವೇ ದಿನಗಳ ಮೊದಲು ಅವರು ಭೀಕರ ಅಪಘಾತಕ್ಕೊಳಗಾದರು. ಅವರ ಮುಖ ಸಂಪೂರ್ಣವಾಗಿ ಜಜ್ಜಲ್ಪಟ್ಟಿತ್ತು. ಗಂಭೀರವಾಗಿ ಗಾಯಗೊಂಡಿದ್ದರು. 20ಕ್ಕೂ ಹೆಚ್ಚು ಹೊಲಿಗೆಗಳನ್ನು ಹಾಕಬೇಕಾಯಿತು".

ಮಹಿಮಾ ನಂಬಿಯಾರ್ ಅವರ ಆರೋಗ್ಯ ಸ್ಥಿತಿಯ ಬಗ್ಗೆ ತಿಳಿದಿದ್ದರೂ, ಚಿತ್ರೀಕರಣಕ್ಕೆ ಮರಳಲು ಸಾಧ್ಯವೇ ಎಂದು ಅವರಲ್ಲಿ ಕೇಳಿದ್ದನ್ನು ಮತಿ ಮಾರನ್ ನೆನಪಿಸಿಕೊಂಡರು. ಅಪಘಾತದ ನಂತರ ನಟಿ ನನಗೆ ಸೆಲ್ಫಿ ಕಳುಹಿಸಿದ್ದರು. ಅದಾಗ್ಯೂ, ಬೇರೆ ದಾರಿಯಿಲ್ಲದ ಕಾರಣ ಚಿತ್ರೀಕರಣದ ಸ್ಥಳಕ್ಕೆ (ಸೆಟ್‌ಗೆ) ಬರಲು ಸಾಧ್ಯವೇ ಎಂದು ನಾನು ಕೇಳಿದ್ದೆ ಎಂದು ನಿರ್ದೇಶಕರು ತಿಳಿಸಿದರು.

ನಿರ್ದೇಶಕರ ಪ್ರಕಾರ, ಪ್ಲಾಸ್ಟಿಕ್ ಸರ್ಜರಿ ಆದ ಆರನೇ ದಿನವೇ ಮಹಿಮಾ ಚಿತ್ರೀಕರಣದ ಸ್ಥಳಕ್ಕೆ ಮರಳಿ ಚಿತ್ರೀಕರಣವನ್ನು ಪೂರ್ಣಗೊಳಿಸಿದರು. ಚಿತ್ರದ ಯಶಸ್ಸಿಗೆ ಅವರ ಕಠಿಣ ಪರಿಶ್ರಮ ಮತ್ತು ಬದ್ಧತೆಯೇ ಕಾರಣ ಎಂದು ಅವರು ತಿಳಿಸಿದರು.

"ಶೂಟಿಂಗ್‌ಗೆ ಬರಲು ಸಾಧ್ಯವೇ ಎಂದು ನಾನು ಯಾವುದೇ ಮುಜುಗರವಿಲ್ಲದೇ ಕೇಳಿದೆ. ನನಗೆ ಬೇರೆ ದಾರಿಯೇ ಇರಲಿಲ್ಲ. ಪ್ಲಾಸ್ಟಿಕ್ ಸರ್ಜರಿ ಆದ ಆರನೇ ದಿನವೇ ಅವರು ಸೆಟ್‌ಗೆ ಮರಳಿದಳು. ನಮ್ಮ ಚಿತ್ರದ ಯಶಸ್ಸಿನ ಹಿಂದೆ ಅವರ ಅಪಾರ ಶ್ರಮ ಮತ್ತು ಬದ್ಧತೆಯಿದೆ. ಅದನ್ನು ನಾನು ಎಂದಿಗೂ ಮರೆಯುವುದಿಲ್ಲ" ಎಂದು ಮತಿ ಮಾರನ್ ಹೇಳಿದರು.

ಚಿತ್ರದಲ್ಲಿನ ತಮ್ಮ ಪಾತ್ರವನ್ನು ನಿರ್ವಹಿಸುವಾಗ ಎದುರಾದ ಭಾವನಾತ್ಮಕ ಸವಾಲುಗಳ ಬಗ್ಗೆ ಮಹಿಮಾ ಮಾತನಾಡಿದ್ದರು. ಚಿತ್ರ ಬಿಡುಗಡೆಯಾದ ನಂತರ, ಕೆಲ ದೃಶ್ಯಗಳು ತಮ್ಮನ್ನು ಹೇಗೆ ಭಾವನಾತ್ಮಕವಾಗಿ ಕಾಡಿದವು ಎಂಬುದರ ಕುರಿತು ಬರೆದುಕೊಂಡಿದ್ದರು. ಆ ಪಾತ್ರವು ತೀವ್ರ ಭಾವನಾತ್ಮಕ ಭಾರವನ್ನು ಹೊಂದಿದ್ದರೂ, ಅದನ್ನು ನಿರ್ವಹಿಸುವುದನ್ನು ತಾವು ಆನಂದಿಸಿದ್ದಾಗಿ ಹಂಚಿಕೊಂಡರು. ಮಹಿಮಾ ನಂಬಿಯಾರ್ ಮಲಯಾಳಂ ಮತ್ತು ತಮಿಳು ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದಾರೆ. 2010ರಲ್ಲಿ ಕಾರ್ಯಸ್ಥಾನದ ಮೂಲಕ ಮಲಯಾಳಂ ಚಿತ್ರರಂಗ ಪ್ರವೇಶಿಸಿದರು. 2012ರಲ್ಲಿ ಸಾಟ್ಟೈ ಮೂಲಕ ತಮಿಳು ಚಿತ್ರರಂಗಕ್ಕೂ ಎಂಟ್ರಿ ಕೊಟ್ಟರು. ಕಟ್ರಂ 23, ಪುರಿಯಾತ ಪುತಿರ್, ಮಗಮುನಿ, ಮಧುರ ರಾಜ, ಆರ್‌ಡಿಎಕ್ಸ್: ರಾಬರ್ಟ್ ಡೋನಿ ಕ್ಸೇವಿಯರ್, ಚಂದ್ರಮುಖಿ 2, ಜೈ ಗಣೇಶ್, ಲಿಟಲ್ ಹಾರ್ಟ್ಸ್ ಮತ್ತು ಬ್ರೋಮ್ಯಾನ್ಸ್ ಅಂತಹ ಗಮನಾರ್ಹ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ. 'ಮಂಡಾಡಿ' ಚಿತ್ರದಲ್ಲಿ ಸುಹಾಸ್, ಸತ್ಯರಾಜ್, ಮಿಥುನ್, ಜೈ ಶಂಕರ್, ರವೀಂದ್ರವಿಜಯ್, ಬಾಲ ಸರವಣನ್ ಮತ್ತು ಸ್ಟನ್ ಶಿವ ಕೂಡಾ ನಟಿಸಿದ್ದಾರೆ. ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ವರದಿ ಪ್ರಕಾರ, ಈ ಚಿತ್ರ ಈವವರೆಗೆ 111.80 ಕೋಟಿ ರೂ. ಗಳಿಸಿದೆ.



## ಸಹನಟಿ ಜೊತೆ ಕಾಣಿಸಿಕೊಂಡಿದ್ದಕ್ಕೆ ಡೇಟಿಂಗ್ ವದಂತಿ

**ಮುಂಬೈ (ಮಹಾರಾಷ್ಟ್ರ):** ಬಾಲಿವುಡ್ ನಟ ಗೋವಿಂದ ಅವರು ಇತ್ತೀಚೆಗೆ ತಮ್ಮ 'ರೂಪ' ಸಿನಿಮಾ ಸಹನಟಿ ಕೋಮಲ್ ರಾಣಿ ಸ್ವರ್ಣಕರ್ ಅವರೊಂದಿಗೆ ಪ್ರಸಿದ್ಧ ಲಾಲ್‌ಬಾಗ್ಚಾ ರಾಜಾದಲ್ಲಿ ಪ್ರತಿಷ್ಠಾಪಿಸಲಾದ ಗಣೇಶ ಮೂರ್ತಿಯ ದರ್ಶನ ಪಡೆದರು. ಈ ವಿಡಿಯೋ ವಿವಿಧ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳಲ್ಲಿ ಶರವೇಗದಲ್ಲಿ ವೈರಲ್ ಆಗಿದೆ ವಿವಿಧ ರೀತಿಯ ಚರ್ಚೆಗಳಿಗೆ ಎಡೆಮಾಡಿಕೊಟ್ಟಿತು. ಅಭಿಮಾನಿಗಳು ಹಾಗೂ ಸಾಮಾಜಿಕ ಜಾಲತಾಣ ಬಳಕೆದಾರರ ಊಹಾಪೋಹಗಳು ಉಲ್ಬಣಗೊಂಡವು.

ಮಾಧ್ಯಮದೊಂದಿಗೆ ಮಾತನಾಡಿದ ನಟ ಗೋವಿಂದ, ವ್ಯಾಪಕ ಚರ್ಚೆಗೆ ಗ್ರಾಸವಾಗಿದ್ದ ತಮ್ಮ ಸಾರ್ವಜನಿಕ ಉಪಸ್ಥಿತಿ ಮತ್ತು ಅದಕ್ಕೆ ಸಿಕ್ಕ ಗಮನದ ಬಗ್ಗೆ ಪ್ರತಿಕ್ರಿಯಿಸಿದರು.

"ನನ್ನ 'ರೂಪ' ಸಿನಿಮಾ ಯಶಸ್ಸಿಗೆ ಪ್ರಾರ್ಥಿಸಲು ನಾನು ಲಾಲ್‌ಬಾಗ್ಚಾಗೆ ಹೋಗಿದ್ದೆ. ಈ ಹಿಂದೆ ನಟಿ ಕರೀಷ್ಮಾ ಕಪೂರ್ ಅವರೊಂದಿಗೆ ದೇವಾಲಯಗಳಿಗೆ ಭೇಟಿ ನೀಡಿದ್ದಾಗ ಅದು ನನಗೆ ಅದೃಷ್ಟ ತಂದುಕೊಟ್ಟಿತ್ತು. ನನ್ನ ಚಿತ್ರಗಳು ಭಾರಿ ಯಶಸ್ಸನ್ನು ಕಂಡಿದ್ದವು. ರವೀನಾ ಟಂಡನ್ ಅವರೊಂದಿಗೂ ನಾನು ಹೋಗಿದ್ದೆ. ಈಗ ಕೋಮಲ್ ರಾಣಿ ಸ್ವರ್ಣಕರ್ ಅವರೊಂದಿಗೆ ಹೋಗಿದ್ದೇನೆ. ದೀರ್ಘಕಾಲದ ನಂತರ ನಾನು ಮತ್ತೆ ಈ ಕೆಲಸವನ್ನು (ನಟನೆ) ಪ್ರಾರಂಭಿಸುತ್ತಿರುವುದರಿಂದ ಪ್ರಾರ್ಥನೆ ಸಲ್ಲಿಸಿದೆ" ಎಂದು ಹೇಳಿದರು.

ತಮ್ಮ ವೈಯಕ್ತಿಕ ಜೀವನದ ಕುರಿತಾದ ಬಹುದಿನಗಳಿಂದ ನಡೆಯುತ್ತಿರುವ ವದಂತಿಗಳಿಗೆ ಪ್ರತಿಕ್ರಿಯಿಸಿದ ಗೋವಿಂದ, ತಮ್ಮನ್ನು ಕುಟುಂಬದಿಂದ ದೂರವಿರಿಸಲು ಮತ್ತು ತಮ್ಮ ವರ್ಚಸ್ಸಿಗೆ ಧಕ್ಕೆ ತರಲು ತಮ್ಮ ವಿರುದ್ಧ ಸ್ಟ್ರಾಟಜಿಕಲಿ ಪ್ಲ್ಯಾನ್ ಮಾಡಲಾಗಿದೆ ಎಂದು ಹೇಳಿದರು.

"ಇದು ಯಾರ ತಪ್ಪೂ ಅಲ್ಲ. ಇದೊಂದು ಅತ್ಯಂತ ತಂತ್ರಗಾರಿಕೆಯಿಂದ ರೂಪಿಸಲಾದ ಕ್ಷಣ. ಇನ್ನು ಮುಂದೆ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ನನ್ನನ್ನು ನನ್ನ ಕುಟುಂಬದಿಂದ ದೂರವಿರಿಸಿ, ಆ ನಂತರ ಸಮಾಜದಲ್ಲಿ ನನ್ನ ವರ್ಚಸ್ಸಿಗೆ ಮಸಿ ಬಳಿಯುವುದು ಆ ಯೋಜನೆಯ ಭಾಗವಾಗಿತ್ತು. ನಾನು ನನ್ನ ಕೆಲಸದ ಹೊರತಾಗಿ ಬೇರೆ ಯಾವುದರ ಮೇಲೂ ಗಮನ ಹರಿಸಿರಲಿಲ್ಲ.. ನಾನು ಕೆಲಸ ಮಾಡುತ್ತಲೇ ಇದ್ದೆ. ಅನೇಕರು ನನ್ನನ್ನು ಮೆಚ್ಚುತ್ತಿದ್ದರು" ಎಂದು ಹೇಳಿದರು. ತಮ್ಮ ವೈಯಕ್ತಿಕ ಜೀವನವು ಯಾರಿಗೂ ಸಂಬಂಧಪಟ್ಟ ವಿಷಯವಲ್ಲ ಎಂದು ಗೋವಿಂದ ಒತ್ತಿಹೇಳಿದರು. "ಇದು ಯಾರಿಗೂ ಸಂಬಂಧಪಟ್ಟ ವಿಷಯವಲ್ಲ. ಯಾವುದಾದರೂ ಪ್ರಣಯ ಸಂಬಂಧವಿದ್ದರೂ ಸಹ ನಾನು ಕೆಲಸ ಮಾಡುತ್ತಿದ್ದೇನೆ ಮತ್ತು ವೃತ್ತಿಪರ ಸಂಬಂಧವನ್ನು ನಿರ್ವಹಿಸುತ್ತಿದ್ದೇನೆ" ಎಂದರು. ಈ ವಾರದ ಆರಂಭದಲ್ಲಿ, ಗೋವಿಂದ ಅವರು ಮುಂಬೈನ ಪ್ರಸಿದ್ಧ ಗಣೇಶೋತ್ಸವಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರ ಸಹನಟಿ ಸ್ವರ್ಣಕರ್ ಅವರೊಂದಿಗೆ ಇದ್ದರು. ಅದಕ್ಕೂ ಮೊದಲು, ಅಮೆರಿಕದಿಂದ ಮರಳಿದ ನಂತರ ಅವರು ಗಣೇಶ ಚತುರ್ಥಿ ಆಚರಣೆಗಳಲ್ಲಿ ತಮ್ಮ ಕುಟುಂಬದೊಂದಿಗೆ ಪಾಲ್ಗೊಂಡರು. ತಮ್ಮ ಮಕ್ಕಳಾದ ಟೀನಾ ಮತ್ತು ಯಶವರ್ಧನ್ ಅವರೊಂದಿಗೆ ಈ ಸಂಭ್ರಮದಲ್ಲಿ ಭಾಗವಹಿಸಿದರು ಹಾಗೂ ಗಣಪತಿ ದರ್ಶನದ ವೇಳೆ ಪ್ರಾರ್ಥನೆ ಸಲ್ಲಿಸಿದರು.

ನವನಟಿ ಕೋಮಲ್ ರಾಣಿ ಸ್ವರ್ಣಕರ್ ಅವರೊಂದಿಗೆ 'ರೂಪಾ' ಚಿತ್ರದಲ್ಲಿ ಗೋವಿಂದ ಕಾಣಿಸಿಕೊಳ್ಳಲಿದ್ದಾರೆ. ಇನ್ನೂ, ಗೋವಿಂದ ಅವರ ಪುತ್ರ ಯಶವರ್ಧನ್ ಅಹುಜಾ ಅವರು 'ಹೀರೋ ಕಿ ಹಾರೊರಿನ್' ಚಿತ್ರದ ಮೂಲಕ ಬಾಲಿವುಡ್‌ಗೆ ಪದಾರ್ಪಣೆ ಮಾಡಲು ಸಜ್ಜಾಗಿದ್ದಾರೆ. ಈ ಚಿತ್ರವು 2027ರ ಜನವರಿ 7ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ಸುನೀತಾ ಅಹುಜಾ, ನಿತಾಂಶಿ ಗೋಯೆಲ್, ಜೇಮಿ ಲೀವರ್, ಚಂಕಿ ಪಾಂಡೆ, ಬ್ರಿಜೇಂದ್ರ ಕಾಲಾ ಮತ್ತು ಸಿಮ್ರತ್ ಕೌರ್ ರಾಂಧವಾ ಕೂಡಾ ನಟಿಸಿದ್ದಾರೆ.

**ನನ್ನ ವೈಯಕ್ತಿಕ ಜೀವನ ಯಾರಿಗೂ ಸಂಬಂಧಪಟ್ಟಿದ್ದಲ್ಲ – ನಟ ಗೋವಿಂದ ಪ್ರತಿಕ್ರಿಯೆ**

**ನನ್ನ 'ರೂಪ' ಸಿನಿಮಾ ಯಶಸ್ಸಿಗೆ ಪ್ರಾರ್ಥಿಸಲು ನಾನು ಲಾಲ್‌ಬಾಗ್ಚಾಗೆ ಹೋಗಿದ್ದೆ. ಈ ಹಿಂದೆ ನಟಿ ಕರೀಷ್ಮಾ ಕಪೂರ್ ಅವರೊಂದಿಗೆ ದೇವಾಲಯಗಳಿಗೆ ಭೇಟಿ ನೀಡಿದ್ದಾಗ ಅದು ನನಗೆ ಅದೃಷ್ಟ ತಂದುಕೊಟ್ಟಿತ್ತು. ನನ್ನ ಚಿತ್ರಗಳು ಭಾರಿ ಯಶಸ್ಸನ್ನು ಕಂಡಿದ್ದವು. ರವೀನಾ ಟಂಡನ್ ಅವರೊಂದಿಗೂ ನಾನು ಹೋಗಿದ್ದೆ. ಈಗ ಕೋಮಲ್ ರಾಣಿ ಸ್ವರ್ಣಕರ್ ಅವರೊಂದಿಗೆ ಹೋಗಿದ್ದೇನೆ. ದೀರ್ಘಕಾಲದ ನಂತರ ನಾನು ಮತ್ತೆ ಈ ಕೆಲಸವನ್ನು (ನಟನೆ) ಪ್ರಾರಂಭಿಸುತ್ತಿರುವುದರಿಂದ ಪ್ರಾರ್ಥನೆ ಸಲ್ಲಿಸಿದೆ" ಎಂದು ಹೇಳಿದರು.**



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka.
Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news